ಸಂಪುಟ: 13 Volume | ಸಂಚಿಕೆ: 299 Issue | ಪುಟಗಳು 08 Pages | ಶುಕ್ರವಾರ 16 ಜನವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

### ಬೆಳಗು

ಹೆಸರಲ್ಲೇನಿದೆ ? ಗುಲಾಬಿಯೆಂದು ಕರೆಯುವ ಹೂವನ್ನು ಯಾವ ಹೆಸರಿನಿಂದ ಕರೆದರೂ ಅದರ ಪರಿಮಳದಲ್ಲಿ ಯಾವ ವ್ಯತ್ಯಾಸವೂ: ಇಲ್ಲ.

–ಷೇಕ್ಸ್ ಪಿಯರ್

ಬೃಹತ್ ಆಹಾರ ಮತ್ತು ಸ್ವದೇಶಿ ಮೇಳ 6
ಬದುಕಿನ ಅರ್ಥ ತಿಳಿಯಲು ಸತ್ಸಂಗದ ಸಾಂಗತ್ಯ 7
ಪ್ರಾಚೀನ ಕಾಲದಿಂದಲೂ ಭಾರತ ಪುಣ್ಯಭೂಮಿ 8



ಹುಮನಾಬಾದ್: ಗ್ರಾಮ ದೇವರಾದ ಶ್ರೀ ವೀರಭದ್ರೇಶ್ವರ ದೇವರ ಪಲ್ಲಕ್ಕಿ ಉತ್ಸವಕ್ಕೆ ಮಾಜಿ ಸಚಿವ ರಾಜಶೇಖರ ಪಾಟೀಲ ರವರು ಬುಧುವಾರ ದರುಶನ ಪಡೆದರು, ಈ ಸಂದರ್ಬದಲ್ಲಿ ವಿಧಾನ ಪರಿಷತ್ ಸದಸ್ಯರುಗಳಾದ. ಡಾ ಚಂದ್ರಶೇಖರ ಪಾಟೀಲ, ಭೀಮರಾವ ಪಾಟೀಲ, ಮಾಜಿ ಜಿಪಂ ಉಪಾಧ್ಯಕ್ಷ ಲಕ್ಷ್ಮಣರಾವ ಬುಳ್ಳಾ, ಕಾಂಗ್ರೇಸ್ ಪಕ್ಷದ ಮುಖಂಡ ಸಿದ್ರಾಮ ವಾಘಮಾರೆ, ಸೇರಿದಂತೆ ಇತರರಿದ್ದರು.



ದಾವಣಗೆರೆ: ಜಿಲ್ಲೆಯ ಹರಿಹರದ ಶ್ರೀ ಹರಪೀಠದಲ್ಲಿ ಹರಜಾತ್ರಾ ಮಹೋತ್ಸವ ಹಾಗೂ ಕಿತ್ತೂರು ರಾಣಿ ಚನ್ನಮ್ಮಾಜೀ ಅವರ ದ್ವಿಶತಮಾನ ವಿಜಯೋತ್ಸವ ಸಮಾರಂಭದಲ್ಲಿ ಕರ್ನಾಟಕ ಸರ್ಕಾರದ ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾವೇರಿ – ಗದಗ ಲೋಕಸಭಾ ಕ್ಷೇತ್ರದ ಸಂಸದರಾದ ಶ್ರೀ ಬಸವರಾಜ ಬೊಮ್ಮಾಯಿರವರು ಭಾಗವಹಿಸಿ ಮಾತನಾಡಿದರು. ಈ ಸಂಧರ್ಭದಲ್ಲಿ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳು, ಹರಪೀಠ ಹರಿಹರ, ಡಾ ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, ತರಳಬಾಳು ಮಠ, ಸಿರಿಗೆರೆ, ಶ್ರೀ ವಾಲ್ಮೀಕಿ ಪ್ರಸನ್ನಾನಂದಪುರಿ ಮಹಾಸ್ವಾಮಿಗಳು, ವಾಲ್ಮೀಕಿ ಪೀಠ, ರಾಜನಹಳ್ಳಿ, ಶ್ರೀ ಬಸವ ಮಾಚಿದೇವ ಮಹಾಸ್ವಾಮಿಗಳು, ಮಡಿವಾಳ ಪೀಠ, ಚಿತ್ರದುರ್ಗ, ಶ್ರೀ ಮ.ನಿ.ಪ್ರ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಸಿದ್ದರಹಳ್ಳಿ ಶ್ರೀಗಳವರು ಸಾನಿಧ್ಯ ವಹಿಸಿದ್ದರು. ಕೇಂದ್ರ ಜಲಶಕ್ತಿ ಹಾಗೂ ರೇಲ್ವೆ ಖಾತೆಗಳ ರಾಜ್ಯ ಸಚಿವರಾದ ಶ್ರೀ ವಿ.ಸೋಮಣ್ಣ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

## 4.71 ಲಕ್ಷ ಕೋಟಿ ರೂ. ಹೂಡಿಕೆ



**ಬೆಂಗಳೂರು:** 2025ರ ಫೆಬ್ರವರಿಯಲ್ಲಿ ನಡೆಸಿದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ 10.27 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆಯ ಖಾತ್ರಿ ಸಿಕ್ಕಿತ್ತು. ಈ ಪೈಕಿ ಡಿಸೆಂಬರ್ ಕೊನೆಯ ಹೊತ್ತಿಗೆ 4.71 ಲಕ್ಷ ಕೋಟಿ ರೂ. ನೈಜ ಹೂಡಿಕೆ ಆಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಗುರುವಾರ ತಿಳಿಸಿದ್ದಾರೆ. ಜ.19ರಿಂದ 23ರವರೆಗೆ ದಾವೋಸ್ ನಲ್ಲಿ ನಡೆಯಲಿರುವ ವಿಶ್ವ ಮಟ್ಟದ ಆರ್ಥಿಕ ಶೃಂಗಸಭೆಗೆ ತೆರಳಲು ಸಿದ್ಧವಾಗುತ್ತಿರುವುದಕ್ಕೆ ಪೂರ್ವಭಾವಿಯಾಗಿ ಸಚಿವರು ಒಂದು ವರ್ಷದಲ್ಲಿ ರಾಜ್ಯದ ಕೈಗಾರಿಕಾ ಕ್ಷೇತ್ರದ ವಿವಿಧ ವಲಯಗಳಲ್ಲಿ ಆಗಿರುವ ಹೂಡಿಕೆ, ಅರ್ಜಿ ಸಲ್ಲಿಕೆ ಮುಂತಾದ ಪ್ರಗತಿಯ ಅಂಕಿಅಂಶಗಳನ್ನು ನೀಡಿದ್ದಾರೆ. ಈ ಬಗ್ಗೆ ವಿವರ ಮಾಹಿತಿ ನೀಡಿದ್ದಾರೆ.

## ಭಾರತದ ಏಕತೆಗೆ ಸಾಕ್ಷಿ ಕಾಶಿ

**ವಾರಾಣಸಿ:** ಕಾಶಿ–ತಮಿಳು ಸಂಗಮವು ಸಾಂಸ್ಕೃತಿಕ ಪ್ರಜ್ಞೆಯನ್ನು ಬಲಪಡಿಸುವ ಮೂಲಕ ಭಾರತದ ಏಕತೆಯನ್ನು ಎತ್ತಿ ಹಿಡಿದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ. ಕಾಶಿ–ತಮಿಳು ಸಂಘವೂ ನಮ್ಮ ಸಂಸ್ಕೃತಿಗಳ ನಡುವಿನ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸಿದೆ ಎಂದು ಮೋದಿ ತಮ್ಮ ಬ್ಲಾಗ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಕೆಲವು ದಿನಗಳ ಹಿಂದೆ, ಸೋಮನಾಥದ ಪವಿತ್ರ ಭೂಮಿಯಲ್ಲಿ ನಡೆದ ಸೋಮನಾಥ ಸ್ವಾಭಿಮಾನ ಪರ್ವದಲ್ಲಿ ಭಾಗವಹಿಸುವ ಸೌಭಾಗ್ಯ ನನಗೆ ಸಿಕ್ಕಿತು. ಇದು 1026 ರಲ್ಲಿ ಸೋಮನಾಥದ ಮೇಲೆ ನಡೆದ ಮೊದಲ ದಾಳಿಯ 1000 ನೇ ವರ್ಷ ಇದು. ಈ ಕ್ಷಣವನ್ನು ವೀಕ್ಷಿಸಲು ದೇಶಾದ್ಯಂತ ಜನರು ಸೋಮನಾಥದಲ್ಲಿ



ಸೇರಿದ್ದರು, ಭಾರತದ ಜನರು ತಮ್ಮ ಇತಿಹಾಸ ಮತ್ತು ಸಂಸ್ಕೃತಿಯೊಂದಿಗೆ ಆಳವಾಗಿ ಸಂಪರ್ಕ ಹೊಂದಿದ್ದಾರೆ ಎಂದು ಅವರು ಬರೆದುಕೊಂಡಿದ್ದಾರೆ.

# ಸಂಕ್ರಾಂತಿ ಸಂಭ್ರಮ ಶಾಂತಿ

### ಸೂರ್ಯ ದಕ್ಷಿಣಪಥದಿಂದ ಉತ್ತರಕ್ಕೆ ಪಥ ಸಂಚಲನ | ನಾಡಿನ ಎಲ್ಲೆಡೆ ಸಡಗರದ ವಾತಾವರಣ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ನಾಡಿನ ಎಲ್ಲೆಡೆ ಮಕರ ಸಂಕ್ರಾಂತಿ ಹಬ್ಬದ ವಾತಾವರಣ ಮನೆ ಮಾಡಿದೆ. ಪ್ರಮುಖ ದೇವಾಲಯಗಳಲ್ಲಿ ವಿಶೇಷ ಪೂಜೆಗಳನ್ನು ಸಲ್ಲಿಸಲಾಗಿದೆ. ಪ್ರಮುಖವಾಗಿ ಗವಿಪುರದಲ್ಲಿರುವ ಗವಿಗಂಗಾಧರ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು ನಡೆದಿವೆ. ಗವಿಗಂಗಾಧರ ದೇವಸ್ಥಾನದ ಶಿವಲಿಂಗವನ್ನು ಸೂರ್ಯರಶ್ಮಿ ಸ್ಪರ್ಶಿಸಲಿದ್ದು, ಈ ವಿಶೇಷ ಕೌತುಕಕ್ಕೆ ಕ್ಷಣಗಣನೆ ಆರಂಭವಾಗಿದೆ.

**ಉತ್ತರಕ್ಕೆ ಪಥ ಸಂಚಲನ:** ಸೂರ್ಯ ದಕ್ಷಿಣಪಥದಿಂದ ಉತ್ತರಕ್ಕೆ ಪಥ ಸಂಚಲನ ಮಾಡುವ ವೇಳೆ ಸೂರ್ಯ ಕಿರಣವು ಶಿವ ಲಿಂಗವನ್ನು ಸ್ಪರ್ಶಿಸಲಿದೆ. ಹೀಗಾಗಿ ಇಂದು ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಯುತ್ತಿದೆ.

ಬೆಳ್ಳಗ್ಗೆ 5 ಗಂಟೆಯಿಂದಲೇ ಗಂಗಾಧರನಿಗೆ ವಿಶೇಷ ಪೂಜೆ ಆರಂಭವಾಗಿದೆ. ಗಂಗಾಧರನಿಗೆ ಪಂಚಾಭಿಷೇಕ, ಪುಷ್ಪಾಭಿಷೇಕ, ಮಹಮಂಗಳಾರತಿ ಮಾಡಿದ ನಂತರ ಭಕ್ತರಿಗೆ ದೇವರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ.





### ಅಂಗಗಳ ಪಾದಸ್ಪರ್ಶಿಸುವ ಕಿರಣ

ಚಿಕ್ಕಬಳ್ಳಾಪುರ ತಾಲ್ಲೂಕಿನ ಐತಿಹಾಸಿಕ ರಂಗಸ್ಥಳ ವೈಷ್ಣವ ಕ್ಷೇತ್ರದಲ್ಲಿ ರಂಗನಾಥ ಸ್ವಾಮಿಯ ಪಾದವನ್ನು ಸೂರ್ಯನ ಕಿರಣಗಳು ಸ್ಪರ್ಶಿಸಿದ ಐತಿಹಾಸಿಕ ಕ್ಷಣ ಗಮನ ಸೆಳೆದದಿದೆ. ವಿವಿಧ ಬಗೆಯ ಹೂಗಳಿಂದ ರಂಗನಾಥ ಸ್ವಾಮಿಗೆ ವಿಶೇಷ ಪೂಜಾ ಕಾರ್ಯ ನಡೆದಿವೆ. ಬೆಂಗಳೂರಿನ ಗವಿಗಂಗಾಧರೇಶ್ವರ ದೇಗುಲದಲ್ಲೂ ಸೂರ್ಯ ರಶಿ ಗಂಗಾಧರೇಶ್ವರನನ್ನು ಸ್ಪರ್ಶಿಸಿರುವುದು ಭಕ್ತರ ಸಂತಸಕ್ಕೆ ಕಾರಣವಾಗಿದೆ.

### ಜಾನುವಾರುಗೆ ಸಿಂಗಾರ

ಹೈದರಾಬಾದ್ ಕರ್ನಾಟಕದ ಗ್ರಾಮೀಣ ಭಾಗದಲ್ಲಿ ರೈತರು ಸಂಕ್ರಾಂತಿಯನ್ನು ಸಂಭ್ರಮದಿಂದ ಆಚರಿಸಿದ್ದಾರೆ. ಬೀದರ್, ರಾಯಚೂರು, ಬೀದರ್, ಕಲ್ಬುರ್ಗಿ ಗ್ರಾಮಿಣ ಜನರು ವರ್ಷವಿಡೀ ದುಡಿದ ಜಾನುವಾರುಗಳಿಗೆ ಇಂದು ಶೃಂಗರಿಸಿ ಯಾವುದೇ ರೋಗರುಜಿನಗಳು ಬಾರದಿರಲಿ ಎಂದು ಕಿಚ್ಚು ಹಾಯಿಸಿದ್ದಾರೆ. ಕಷ್ಟಪಟ್ಟು ಬೆಳೆದ ದವಸ–ಧಾನ್ಯ ರಾಶಿಗೆ ಪೂಜೆ ಸಲ್ಲಿಸಿ ಸಂಭ್ರಮಿಸಿದ್ದು ವಿಶೇಷವಾಗಿದೆ.

### ಪೊಂಗಲ್, ಸಂಭ್ರಮ

ಬೆಂಗಳೂರು ಜಯನಗರ ವಿಧಾನಸಭಾ ಕ್ಷೇತ್ರದ ರಾಗಿಗುಡ್ಡ ವಿವೇಕಾಂದ ವಸತಿ ಸಂಕೀರ್ಣ ಸ್ಲಂ ಪ್ರದೇಶದಲ್ಲಿ ಬಿಜೆಪಿ ನಾಯಕರು ಪೊಂಗಲ್ ತಯಾರಿಸುವ ಮೂಲಕ ಸಂಕ್ರಾಂತಿ ಹಬ್ಬ ಆಚರಿಸಿದ್ದಾರೆ. ಸಂಸದ ತೇಜಸ್ವಿಸೂರ್ಯ, ಛಲವಾದಿ ನಾರಾಯಣಸ್ವಾಮಿ ಮತ್ತಿತರರು ಪೊಂಗಲ್ ತಯಾರಿಸುವ ಮೂಲಕ ಸಂಭ್ರಮಾಚರಣೆ ಮಾಡಿ ಗಮನ ಸೆಳೆದಿದ್ದಾರೆ.

### ಎಳ್ಳು ಬೆಲ್ಲ ತಿಂದು ಒಳ್ಳೆ ಮಾತು

ಸೂರ್ಯ ಧನುರ್ ರಾಶಿಯಿಂದ ಮಕರ ರಾಶಿಗೆ ಪ್ರವೇಶ ಮಾಡುವ ಪರ್ವ ದಿನವನ್ನು ಮಕರ ಸಂಕ್ರಾಂತಿ ಎಂದು ವಿಶೇಷವಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ನಾಡಿನಾದ್ಯಂತ ಸಂಭ್ರಮದಿಂದ ಹಬ್ಬ ಆಚರಿಲಾಗಿದೆ. ಎಳ್ಳು–ಬೆಲ್ಲ ತಿಂದು ಒಳ್ಳೆಯ ಮಾತನಾಡೋಣ ಎಂದು ಒಬ್ಬರಿಗೊಬ್ಬರು ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುವ ದೃಶ್ಯ ನಾಡಿನೆಲ್ಲೆಡೆ ಕಂಡುಬಂದಿದೆ.

## ಮಹಾ ಸ್ವಾಮೀಜಿ ದೈವಾಧೀನ



ಕಲಬುರ್ಗಿ: ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕಗುರುಪೀಠ ಶಾಖಾ ಮಠ ತಿಂಥಿಣಿ ಬ್ರಿಜ್ ಕಲಬುರ್ಗಿ ವಿಭಾಗೀಯ ಪೀಠದ ಪರಮಪೂಜ್ಯ ಶ್ರೀ ಸಿದ್ದರಾಮಾನಂದಪುರಿ ಮಹಾಸ್ವಾಮಿಗಳು ದೈವಾಧೀನರಾಗಿದ್ದಾರೆ. ಧಾರ್ಮಿಕ ಕಾರ್ಯಗಳ ಜೊತೆಗೆ ಸಮಾಜದ ಏಳಿಗೆಯ ಬಗ್ಗೆ ಅಪಾರ ಕಾಳಜಿ, ಶ್ರದ್ಧೆ ಹೊಂದಿದ್ದ ಶ್ರೀಗಳ ಅಗಲಿಕೆ ನಾಡಿಗೆ ತುಂಬಲಾರದ ನಷ್ಟ. ಶ್ರೀಗಳ ದಿವ್ಯಾತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

## ಕಡಲೆ ಬೆಳೆಗಾರರ ನೆರವಿಗಾಗಿ ಪಿಎಂಗೆ ಪತ್ರ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಮಾರುಕಟ್ಟೆ ಬೆಲೆ ಕುಸಿತದಿಂದ ಸಂಕಷ್ಟದಲ್ಲಿರುವ ಕಡಲೇಬೇಳೆ ಬೆಳೆಗಾರರ ನೆರವಿಗೆ ಧಾವಿಸಲು ಕೂಡಲೇ ಬೆಂಬಲ ಬೆಲೆಯಡಿ ಖರೀದಿ ಕೇಂದ್ರ ಆರಂಭಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹ್ವಾಣ್ ಅವರಿಗೆ ಪತ್ರ ಬರೆದಿದ್ದಾರೆ.

ಕಡಲೇಬೇಳೆ ಕರ್ನಾಟಕದ ಪ್ರಮುಖ ದ್ವಿದಳ ಧಾನ್ಯ ಬೆಳೆಗಳಲ್ಲಿ ಒಂದಾಗಿದೆ. 9.24 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದ್ದು, 6.27 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ನಿರೀಕ್ಷಿಸಲಾಗಿದೆ. ಧಾರವಾಡ, ಗದಗ, ಬೆಳಗಾವಿ, ವಿಜಯಪುರ, ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ಬಾಗಲಕೋಟೆ, ದಾವಣಗೆರೆ ಮತ್ತು ಚಿಕ್ಕಮಗಳೂರು ಮುಂತಾದ ಪ್ರದೇಶಗಳ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಇದು ಆದಾಯದ ಮೂಲವಾಗಿದೆ.

## ಡಿಸಿಎಂ ಡಿಕೆಶಿಗೆ ದಿಲ್ಲಿಗೆ ಬುಲಾವ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ರಾಜ್ಯ ರಾಜಕೀಯ ಬೆಳವಣಿಗೆ ಹಿನ್ನೆಲೆಯಲ್ಲಿ ಚರ್ಚೆ ನಡೆಸಲು ದೆಹಲಿಗೆ ಬರುವಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಆಹ್ವಾನ ನೀಡಿರುವುದಾಗಿ ತಿಳಿದು ಬಂದಿದೆ.

ರಾಜ್ಯ ರಾಜಕಾರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಹೈಕಮಾಂಡ್ ನಾಯಕರ ನಡುವೆ ತ್ರಿಕೋಣ ಬಿಂದುವಾಗಿ ಸಂದೇಶ ವಾಹಕರಂತೆ ಕೆಲಸ ಮಾಡುತ್ತಿರುವ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ ಇಂದು ಸಂಕ್ರಾಂತಿ ಹಬ್ಬದ ದಿನವು ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಮಹತ್ವದ ಚರ್ಚೆ ನಡೆಸಿದ್ದಾರೆ.

ಮೈಸೂರಿನ ವಿಮಾನ ನಿಲ್ದಾಣದಲ್ಲಿ ರಾಹುಲ್ ಗಾಂಧಿಯವರನ್ನು ಭೇಟಿ ಮಾಡಿದ ಉಪಮುಖ್ಯಮಂತ್ರಿಯವರು ಅಧಿಕಾರ ಹಂಚಿಕೆಯ ಗೊಂದಲವನ್ನು ಬಗೆಹರಿಸಬೇಕು ಎಂದು ಒತ್ತಾಯಿಸಿದ್ದರು.

## ಖಂಡ್ರೆ ಬರ್ತ್‌ಡೇ ಸರಳವಾಗಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ತಮ್ಮ 63ನೇ ಜನ್ಮದಿನ ಅತ್ಯಂತ ಸರಳವಾಗಿ ಆಚರಿಸಿಕೊಂಡಿದ್ದಾರೆ. ಪಟ್ಟಣದ ಖಂಡ್ರೆ ನಿವಾಸಕ್ಕೆ ಗುರುವಾರ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಸಾನ್ನಿಧ್ಯದಲ್ಲಿ ಗುರುಬಸವ ಪಟ್ಟದ್ದೇವರು, ಹುಲಸೂರು ಗುರುಬಸವೇಶ್ವರ ಸಂಸ್ಥಾನ ಮಠದ ಶಿವಾನಂದ ಸ್ವಾಮೀಜಿ, ಮೇಹಕರ್–ತಡೋಳಾ ಶ್ರೀಮಠದ ರಾಜೇಶ್ವರ ಶಿವಾಚಾರ್ಯ, ಅನುಭವ ಮಂಟಪದ ಸಂಚಾಲಕ ಶಿವಾನಂದ ಸ್ವಾಮೀಜಿ ಭೇಟಿ ನೀಡಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರನ್ನು ಶಾಲು ಹೊದಿಸಿ ಸನ್ಮಾನಿಸಿ, ಹಣ್ಣಿನ ಬುಟ್ಟಿ ನೀಡಿ ಆಶೀರ್ವದಿಸಿದರು. ಸಚಿವ ಈಶ್ವರ ಖಂಡ್ರೆ ಅವರು ತಮ್ಮ ತಂದೆ ಶತಾಯುಷಿ ಡಾ.ಭೀಮಣ್ಣ ಖಂಡ್ರೆ ಅವರ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದು ಆರೋಗ್ಯ ಸ್ಥಿರವಾಗಿರುವ ಹಿನ್ನೆಲೆಯಲ್ಲಿ ಈ ಬಾರಿ ಬರ್ತ್ ಡೇ ಆಚರಿಸಿಕೊಳ್ಳದಿರಲು ನಿರ್ಧಾರ ಪ್ರಕಟಿಸಿದ್ದರು. ಸಂಸದ ಸಾಗರ ಖಂಡ್ರೆ, ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಉಪಾಧ್ಯಕ್ಷ ಹಣಮಂತರಾವ ಚವ್ಹಾಣ ಸೇರಿದಂತೆ ಹಲವರಿದ್ದರು.

## ರಾಜ್ಯರಾಜಕೀಯಕ್ಕೆ ಎಚ್ಡಿಕೆ ಒಲವು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯ ರಾಜಕೀಯದಿಂದ ದೂರ ಸರಿಯುವುದಿಲ್ಲ. ನಾನು ರಾಜಕಾರಣದಲ್ಲಿ ಇದ್ದೇನೆ. ನಾನು ಎಲ್ಲಿರಬೇಕು ಎಂದು ತೀರ್ಮಾನ ಮಾಡುವುದು ರಾಜ್ಯದ ಜನತೆ. ರಾಜ್ಯ ರಾಜಕೀಯಕ್ಕೆ ಯಾವಾಗ ಬರಬೇಕು ಎಂದು ಜನತೆಯ ಆಶಯದ ಮೇರೆಗೆ ತೀರ್ಮಾನ ಮಾಡುತ್ತೇನೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.



ಬೆಂಗಳೂರಿನ ತಮ್ಮ ನಿವಾಸದ ಬಳಿ ಮಾಧ್ಯಮಗಳು ಕೇಳಿದ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಸಚಿವ, ನಾವು ಎನ್ಡಿಎ ಮೈತ್ರಿಯಲ್ಲಿದ್ದೇವೆ. ಈ ಮೈತ್ರಿಯಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ಕೊಡಬಾರದು. ನಮ್ಮ ಉದ್ದೇಶ ರಾಜ್ಯದಲ್ಲಿ ಉತ್ತಮ ಸರ್ಕಾರ ತರಬೇಕು ಎನ್ನುವುದು. ಇದು ನನ್ನ ವೈಯಕ್ತಿಕ ಉದ್ದೇಶ ಎಂದಿದ್ದಾರೆ. ರಾಜ್ಯದಲ್ಲಿ ಈಗ ಆಡಳಿತ ಹೇಗೆ ನಡೆಯುತ್ತಿದೆ ಎಂದು ನಾನು ನಿರಂತರವಾಗಿ ಗಮನಿಸುತ್ತಿದ್ದೇನೆ. ಒಳ್ಳೆಯ ಸರ್ಕಾರ ಬಂದು ಜನತೆ ನೆಮ್ಮದಿಯಿಂದ ಇರಬೇಕು. ಈ ನಿಟ್ಟಿನಲ್ಲಿ ನಾಡಿನ ಜನತೆ ನಾನು ಯಾವ ಸ್ಥಾನದಲ್ಲಿ ಇರಬೇಕು ಅಂತ ತೀರ್ಮಾನ ಮಾಡಿದರೆ ಅದರಂತೆ ನಡೆಯುತ್ತೇನೆ. ಈ ವಿಷಯ ನನ್ನ ಕೈಯಲ್ಲಿ ಇಲ್ಲ ಎಂದು ಮಾರ್ಮಿಕವಾಗಿ ಉತ್ತರಿಸಿದ್ದಾರೆ.

**ಶಿಡ್ಲಘಟ್ಟ ಪ್ರಕರಣ:** ಮುಖ್ಯ ಕಾರ್ಯದರ್ಶಿ ಇನ್ನೂ ಸ್ಪಂದಿಸಿಲ್ಲ ಎಂದ ಹೆಚ್ಡಿಕೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ನಿರಂತರವಾಗಿ ಅಧಿಕಾರಿಗಳ ಮೇಲೆ ದೌರ್ಜನ್ಯ ನಡೆಸುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಇದು ಸರಿಯಲ್ಲ ಎಂದು ನುಡಿದಿದ್ದಾರೆ.

## ಮಹಾ ದಾಸೋಹಕ್ಕೆ 10 ಕ್ವಿಂಟಲ್ ಬೇಸನ್



• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ದಕ್ಷಿಣ ಭಾರತದ ಕುಂಭಮೇಳ ಎಂದೇ ಪ್ರಸಿದ್ಧವಾಗಿರುವ ಕೊಪ್ಪಳ ನಗರದ ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವದಲ್ಲಿ 15 ದಿನಗಳ ಕಾಲ ನಡೆವ ಮಹಾ ದಾಸೋಹಕ್ಕೆ ಮಂಡಲಗಿರಿ ಗ್ರಾಮಸ್ಥರಿಂದ 10 ಕ್ವಿಂಟಲ್ ಬೇಸನ್ ತಯಾರಿ ಕಾರ್ಯ ನಡೆಯಿತು. ತಾಲೂಕಿನ ಮಂಡಲಗಿರಿ ಗ್ರಾಮದಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಮಹಿಳೆಯರೆಲ್ಲ ಸೇರಿಕೊಂಡು ಗವಿಸಿದ್ದಪ್ಪಜ್ಜನ ಜಾತ್ರೆಗೆ ವಿಶೇಷವಾಗಿ 10 ಕ್ವಿಂಟಲ್ ಬೇಸನ್ ತಯಾರಿ ಕಾರ್ಯವನ್ನು ತಮ್ಮ ಮನೆಯ ಹಬ್ಬದ ಕಾರ್ಯಕ್ರಮದಂತೆ ಸಂಭ್ರಮ ಸಡಗರದಿಂದ ಪಾಲ್ಗೊಂಡು ಸಿಹಿ ಬೇಸನ್ ತಯಾರಿಸಿದ್ದಾರೆ. 10 ಕ್ವಿಂಟಲ್ ಬೇಸನ್ ತಯಾರಿಗೆ 5 ಕ್ವಿಂಟಾಲ್ ಸಕ್ಕರೆ, ಮೂರು ಕ್ವಿಂಟಲ್ ಪುಟಾಣಿ ಹಿಟ್ಟು, 10 ಕೆಜಿ ಡಾಲ್ಡಾ, 5 ಕೆ.ಜಿ ತುಪ್ಪ, 5 ಕೆಜಿ ಗೋಡಂಬಿ, ಎಂಟು ಕೆಜಿ ದ್ರಾಕ್ಷಿ ಹಾಗೂ 250 ಗ್ರಾಂ ಯಾಲಕ್ಕಿ ಬಳಕೆ ಮಾಡಿರುವುದಾಗಿ ಬೇಸನ್ ತಯಾರಿಯ ಬಾಣಸಿಗರು ಪತ್ರಿಕೆಗೆ ತಿಳಿಸಿದ್ದಾರೆ.

**ಸಿಎಂ ಬಾಯಿಯೇ ಬಚ್ಚಲಾಗಿದೆ. ಯಾರಿಗೂ ಅವರು ಮರ್ಯಾದೆ ಕೊಡೋದಿಲ್ಲ. ಇದನ್ನೇ ಅವರ ಪಕ್ಷದವರು ಅನುಕರಿಸುತ್ತಾರ: ಪ್ರತಾಪ ಸಿಂಹ, ಮಾಜಿ ಸಂಸದ**

### ಖಂಡ್ರೆ ನಿವಾಸಕ್ಕೆ ಇಳಕಲ್‌ನ ಶ್ರೀಗಳು ಭೇಟಿ ಆರೋಗ್ಯ ವಿಚಾರಣೆ

# ಡಾ.ಭೀಮಣ್ಣ ಖಂಡ್ರೆ ಆರೋಗ್ಯ ಯಥಾಸ್ಥಿತಿ



**ಇಳಕಲ್ ಶ್ರೀಗಳು ಭೇಟಿ**

ಇಳಕಲ್‌ನ ವಿಜಯಮಹಾಂತೇಶ್ವರ ಸಂಸ್ಥಾನ ಮಠದ ಗುರುಮಹಾಂತ ಸ್ವಾಮೀಜಿ ಅವರು ಮಂಗಳವಾರ ರಾತ್ರಿ ಭೇಟಿ ನೀಡಿ ಡಾ.ಭೀಮಣ್ಣ ಖಂಡ್ರೆ ಅವರ ಆರೋಗ್ಯ ವಿಚಾರಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಸಂಸದ ಸಾಗರ ಖಂಡ್ರೆ, ಡಾ.ಗೀತಾ ಖಂಡ್ರೆ ಸೇರಿದ ಕುಟುಂಬದ ಎಲ್ಲ ಸದಸ್ಯರನ್ನು ಮಾತನಾಡಿಸಿ ಎಲ್ಲರಲ್ಲಿ ಧೈರ್ಯ ತುಂಬಿದರು. ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಅನುಭವ ಮಂಟಪದ ಸಂಚಾಲಕ ಶಿವಾನಂದ ಸ್ವಾಮೀಜಿ, ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಆಡಳಿತಾಧಿಕಾರಿ ಮೋಹನ ರೆಡ್ಡಿ ಸೇರಿದಂತೆ ಹಲವರು ಜತೆಗಿದ್ದರು.

• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಾಜಿ ಅಧ್ಯಕ್ಷ, ಮಾಜಿ ಸಚಿವ, ಶತಾಯುಷಿ ಡಾ.ಭೀಮಣ್ಣ ಖಂಡ್ರೆ ಅವರ ಆರೋಗ್ಯದಲ್ಲಿ ಯಥಾಸ್ಥಿತಿ ಕಂಡು ಬಂದಿದೆ.

ಕಳೆದ 18–20 ದಿನಗಳಿಂದ ಡಾ.ಭೀಮಣ್ಣ ಖಂಡ್ರೆಅವರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದಾರೆ.

ಮಂಗಳವಾರ ಆರೋಗ್ಯದಲ್ಲಿ ಸ್ವಲ್ಪ ಮಟ್ಟಿನ ಚೇತರಿಕೆ ಕಂಡಿದ್ದು, ಅದೇ ಸ್ಥಿತಿ ಬುಧವಾರ ಮುಂದುವರೆದಿದೆ.

ವ್ಯತ್ಯಾಸ ಕಂಡುಬಂದಿದ್ದ ರಕ್ತದೊತ್ತಡ(ಬಿಪಿ) ಸದ್ಯ ನಿಯಂತ್ರಣದಲ್ಲಿದೆ. ಉಸಿರಾಟದ ತೊಂದರೆ ಇರುವ ಹಿನ್ನೆಲೆಯಲ್ಲಿ ಆಕ್ಸಿಜನ್ ಮುಂದುವರೆಸಲಾಗುತ್ತಿದೆ. ಮನೆಯಲ್ಲಿಯೇ ಚಿಕಿತ್ಸೆ ಮುಂದುವರೆಸಿದ್ದು, ವೈದ್ಯರು ದಿನದ 24 ಗಂಟೆ ನಿಗಾ ವಹಿಸಿದ್ದಾರೆ.

**ಗಂಜಿ, ಜ್ಯೂಸ್ ಸೇವನೆ**

ಶತಾಯುಷಿ ಡಾ.ಭೀಮಣ್ಣ ಖಂಡ್ರೆ ಅವರು ಬುಧವಾರ ಬಿಳಿ ಜೋಳದ ಗಂಜಿ ಮತ್ತು ಸೇಬು ಹಣ್ಣಿನ ಜ್ಯೂಸ್ ಸೇವಿಸಿದ್ದಾರೆ. ಅವರ ಆರೋಗ್ಯ ಯಥಾಸ್ಥಿತಿ ಮುಂದುವರೆದಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

> ತಮ್ಮ ತಂದೆ ಡಾ.ಭೀಮಣ್ಣ ಖಂಡ್ರೆ ಅವರ ಮೇಲಿನ ಪ್ರೀತಿ, ಕಾಳಜಿಯಿಂದ ಆರೋಗ್ಯ ವಿಚಾರಿಸಲು ರಾಜ್ಯದ ಮೂಲೆ ಮೂಲೆಯಿಂದ ಮಠಾಧೀಶರು, ಗಣ್ಯರು ಭೇಟಿ ನೀಡುತ್ತಿದ್ದಾರೆ. ತಂದೆಯವರ ಆರೋಗ್ಯ ಸುಧಾರಿಸುತ್ತಿದೆ. ಯಾರೂ ಆತಂಕ ಪಡಬೇಕಿಲ್ಲ.
>
> **ಈಶ್ವರ ಖಂಡ್ರೆ ಜಿಲ್ಲಾ ಉಸ್ತುವಾರಿ ಸಚಿವರು ಬೀದರ್**

> ಶತಾಯುಷಿ ಡಾ.ಭೀಮಣ್ಣ ಖಂಡ್ರೆ ಅವರು ಲಿಂಗಾಯತ ಸಮಾಜದ ದೊಡ್ಡ ಆಸ್ತಿ. ಡಾ.ಚನ್ನಬಸವ ಪಟ್ಟದ್ದೇವರು, ಡಾ.ಭೀಮಣ್ಣ ಖಂಡ್ರೆಅವರ ಗುರುಶಿಷ್ಯರ ಸಂಬಂಧ ಎಲ್ಲರಿಗೂ ಮಾದರಿಯಾಗಿದೆ. ಖಂಡ್ರೆಅವರ ಆರೋಗ್ಯದಲ್ಲಿ ಚೇತರಿಕೆ ಕಾಣಲಿ ಎಂದು ಬಸವಣ್ಣನವರಲ್ಲಿ ಪ್ರಾರ್ಥಿಸುತ್ತೇನೆ.
>
> **ಗುರುಮಹಾಂತ ಸ್ವಾಮೀಜಿ ವಿಜಯಮಹಾಂತೇಶ್ವರ ಮಠ ಇಳಕಲ್**

# ಸದಾಚಾರ, ಸುವಿಚಾರದಿಂದ ಭಗವಂತನ ಕೃಪೆ: ಹಾರಕೂಡ ಶ್ರೀ.

• **ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ:**



ಸದಾಚಾರ, ಸುವಿಚಾರದಿಂದ ಬಾಳಿದ ಜನರು ಭಗವಂತನ ಕೃಪೆಗೆ ಪಾತ್ರರಾಗುತ್ತಾರೆ ಎಂದು ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಆಲಗೂಡ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಜಾತ್ರಾಮಹೋತ್ಸವದ ಅಂಗವಾಗಿ ಆಯೋಜಿಸಿದ ಧರ್ಮ ಸಭೆಯ ಸಾನಿಧ್ಯವಹಿಸಿ ಮಾತನಾಡಿದ ಶ್ರೀಗಳು, ಒಂದು ಗ್ರಾಮದ ಭವ್ಯತೆಯನ್ನು ಅಳೆಯಬೇಕಾದರೆ, ಅಲ್ಲಿಯ ಕಟ್ಟಡಗಳಿಂದಲ್ಲ, ಆಸ್ತಿ–ಅಂತಸ್ತಿನಿಂದಲ್ಲ, ಅಲ್ಲಿಯ ಶ್ರೀಮಂತಿಕೆಯಿಂದಲ್ಲ, ಅಲ್ಲಿರುವ ಜನಾಂಗದಿಂದ, ಗ್ರಾಮದ ಜನರಿಂದ ಊರಿಗೆ ಹೆಸರು ಬರುತ್ತದೆ.

ಯಾವ ಗ್ರಾಮದಲ್ಲಿ ಭಾವೈಕ್ಯತೆ, ಭ್ರಾತೃತ್ವ ಭಕ್ತಿಯಿಂದ ಜನರು ಬದುಕುತ್ತಾರೋ ಆ ಗ್ರಾಮ ನಂದನ ವನವಾಗಿ ಶಾಂತಿಯ ತೋಟವಾಗಿ ಪರಿಣಮಿಸುತ್ತದೆ.

ಜಾತ್ರೆಗಳು ನಮ್ಮ ಜನರ ಶ್ರೇಯೋಭಿವೃದ್ಧಿಯ ಸಂಕೇತವಾಗಿ ಕಂಗೊಳಿಸಬೇಕು ಎಂದು ನುಡಿದರು.

ಕೆಯುಐಡಿಎಫ್ಸಿ ಸಾವಿತ್ರಿ ಶರಣು ಸಲಗರ ಹಾಗೂ ದಯಾನಂದ ಹಿರೇಮಠ ಮಾತನಾಡಿದರು. ಈ ಸಂದರ್ಭದಲ್ಲಿ

ಮಲ್ಲಿನಾಥ ಹಿರೇಮಠ, ಎಪಿಎಂಸಿ ಮಾಜಿ ಅಧ್ಯಕ್ಷರಾದ ಸಿದ್ರಾಮಪ್ಪ ಗುದಗೆ, ಶ್ರೀಕಾಂತ ಪಾಟೀಲ, ಎಸ್.ಎಸ್.ಪಾಟೀಲ, ಮಂಠಾಳ ಪಿಎ–ಸುವರ್ಣ ಮಲ್ಲಶೆಟ್ಟಿ, ನಾಗೇಶ ಮಹಾಜನ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ರವಿ ಠಮಕೆ ಸ್ವಾಗತಿಸಿದರು.

ಕುಮಾರಿ ಪ್ರತೀಕ್ಷಾ ದಿನೇಶ ಆಲಗೂಡ ಪ್ರಾರ್ಥನಾ ಗೀತೆ ಹಾಡಿದರು. ಕುಮಾರಿ ಸ್ನೇಹಾ ನಾಗಯ್ಯ ಸ್ವಾಮಿ ಭರತ ನಾಟ್ಯ ಪ್ರದರ್ಶನ ಮಾಡಿದರು. ರಮೇಶ ರಾಜೋಳೆ ನಿರೂಪಿಸಿದರು.

ನಾಗೇಶಸ್ವಾಮಿ ವಂದಿಸಿದರು.

# ಜ.19 ರಿಂದ ವೀರುಪಾಕ್ಷೇಶ್ವರ ಜಾತ್ರಾ ಮಹೋತ್ಸವ

• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**



ತಾಲೂಕಿನ ಮೇಹಕರ ಗ್ರಾಮದಲ್ಲಿ ಜ.19 ರಿಂದ ಫೆ.1ರ ವರೆಗೆ ಶ್ರೀ ಗುರು ವೀರುಪಾಕ್ಷೇಶ್ವರ ಜಾತ್ರಾಮಹೋತ್ಸವ ಜರುಗಲಿದೆ ಎಂದು ಪೀಠಾಧಿಪತಿ ರಾಜೇಶ್ವರ ಶಿವಾಚಾರ್ಯರು ತಿಳಿಸಿದ್ದಾರೆ. ರಂಭಾಪುರಿ ಜಗದ್ಗುರುಗಳ ದಿವ್ಯ ಸಾನಿಧ್ಯದಲ್ಲಿ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮಸಭೆ ಕಾರ್ಯಕ್ರಮಗಳು ನಡೆಯಲಿವೆ.

ಜ. 21 ರಂದು ರಂಭಾಪುರಿ ಜಗದ್ಗುರುಗಳ 35ನೇ ವರ್ಷದ ಪೀಠಾರೋಹಣ ವರ್ಧಂತಿ ಮಹೋತ್ಸವವನ್ನು ಆಚರಿಸಲಾಗುತ್ತದೆ. ಜ22 ರಿಂದ ಮಹಾರುದ್ರಾಭಿಷೇಕ ಹಾಗೂ ಜಪಯಜ್ಞ ಕಾರ್ಯಕ್ರಮಗಳು ನಡೆಯಲಿದ್ದು, ಫೆ.1 ರಂದು ಶ್ರೀ ಗುರು ವೀರುಪಾಕ್ಷೇಶ್ವರ ದೇವರ ಅದ್ದೂರಿ ಪಲ್ಲಕ್ಕಿ ಉತ್ಸವದೊಂದಿಗೆ ಜಾತ್ರಾಮಹೋತ್ಸವಕ್ಕೆ ಸಮಾರೋಪ ನಡೆಯಲಿದೆ.

ಈ ಐತಿಹಾಸಿಕ ಜಾತ್ರಾ ಮಹೋತ್ಸವದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಭಕ್ತಾದಿಗಳು ಭಾಗವಹಿಸುವ ನಿರೀಕ್ಷೆಯಿದೆ. ರಂಭಾಪುರಿ ಜಗದ್ಗುರುಗಳು ವೀರಶೈವ ಧರ್ಮದ ಆಧ್ಯಾತ್ಮಿಕ ದಿಕ್ಕುದೀಪರಾಗಿದ್ದಾರೆ. ಅವರ ದಿವ್ಯ ಸಾನಿಧ್ಯದಲ್ಲಿ ನಡೆಯುವ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮಸಭೆಗಳು ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಧರ್ಮಬೋಧನೆಯನ್ನು ಬಲಪಡಿಸುತ್ತವೆ. ಮೇಹಕರ ಗ್ರಾಮದ ಶ್ರೀ ಗುರು ವೀರುಪಾಕ್ಷೇಶ್ವರ ಜಾತ್ರಾ ಮಹೋತ್ಸವವು ಭಕ್ತಿ, ಶಿಸ್ತು ಮತ್ತು ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮಹತ್ವದ ಜಾತ್ರೆಯಾಗಿದ್ದು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪುನೀತರಾಗಬೇಕ ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

# ಶರಣ ಸಾಹಿತ್ಯದಲ್ಲಿ ಅಭಿವ್ಯಕ್ತಿ ಮತ್ತು ಮೌಲ್ಯಗಳ ಪ್ರತಿಪಾದನೆ

• **ಮಲ್ಲಮ್ಮ ನುಡಿ ವಾರ್ತೆ,ಕೆಂಭಾವಿ:**

ಬಸವಾದಿ ಶರಣರ ವಚನ ಪರಂಪರೆಯನ್ನು ಮುಂದುವರಿಸುತ್ತಿರುವ ಆಧುನಿಕ ವಚನಕಾರರು ತಮ್ಮ ವಚನಗಳ ಮೂಲಕ ಸಮಕಾಲೀನ ಸಮಸ್ಯೆಗಳ ಮೇಲೆ ಬೆಳಕು ಚಲ್ಲುವಂತ ರಚನೆಗಳನ್ನು ನೀಡುತ್ತಿದ್ದಾರೆ ಎಂದು ವಿಮರ್ಶಕ ಸಾಹಿತಿ ಶರಣಬಸಯ್ಯ ಹಿರೆಮಠ ಹೇಳಿದರು.

ಅರಳು ಮಲ್ಲಿಗೆ ಸಾಹಿತ್ಯ ವೇದಿಕೆ ರಾಜ್ಯ ಘಟಕ ಹೂವಿನಹಡಗಲಿ ಸಹಯೋಗದಲ್ಲಿ ಹಮ್ಮಿಕೊಂಡ ಗೂಗಲ್ ಮೀಟ್ ರಾಜ್ಯ ಮಟ್ಟದ ಆಧುನಿಕ ವಚನ ಗೋಷ್ಠಿ ಹಾಗು ವಚನ ವಿಮರ್ಶೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಅಲ್ಲಮ, ಅಕ್ಕ, ದಾಸಿಮಾರ್ಯ, ಭೋಗಣ್ಣ ಹೀಗೆ ಬಸವಾದಿ ಪ್ರಮಥರಿಂದ ಮೂಡಿಬಂದ ಶರಣ ಸಾಹಿತ್ಯ ಕನ್ನಡ ಸಾರಸ್ವತಕ್ಕೆ ಬಹುದೊಡ್ಡ ಕೊಡುಗೆ ನೀಡಿದೆ ಎಂದರು. ವಚನ ಸಾಹಿತಿ ವೀರಣ್ಣ ಕಲಕೇರಿ ಮಾತನಾಡಿ ಸಾಹಿತ್ಯ ನಿತ್ಯ ಹರಿಯುವ ಗಂಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಚನ ಸಾಹಿತ್ಯ ಬಹು ವೈಶಿಷ್ಟ್ಯಪೂರ್ಣ. ಸಂಸ್ಕೃತಿ, ನೀತಿ, ಮತ್ತು ಆಧುನಿಕ ಜೀವನದ ಸಮಸ್ಯೆಗಳು ಸೇರಿದಂತೆ ಮೌಲ್ಯಗಳ ಪ್ರತಿಪಾಧನೆಯಲ್ಲಿ ಅಭಿವ್ಯಕ್ತಿಯನ್ನು ಹೆಚ್ಚಿಸಿದ ಶರಣ ಸಾಹಿತ್ಯ, ಆಧುನಿಕ ವಚನ ಬರಹಗಾರರಿಂದ ಸಮಾಜವನ್ನು ತಿದ್ದುವ ಮತ್ತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ರಚನೆಗಳು ಹೆಚ್ಚು ಹೆಚ್ಚು ಮೂಡಿ ಬರುತ್ತಿರುವುದು ಸಂತಸದಾಯಕ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಅರಳು ಮಲ್ಲಿಗೆ ವೇದಿಕೆಯ ಸಂಸ್ಥಾಪಕ ಎಂ.ಪಿ.ಎಮ್ ಕೊಟ್ರಯ್ಯನವರು ಮಾತನಾಡಿ ನಮ್ಮ ಅರಳು ಮಲ್ಲಿಗೆ ತಂಡದ ಸಹಕಾರದಲ್ಲಿ ವೇದಿಕೆ ಮೂಲಕ ಯುವ ಬರಹಗಾರರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ನಾಡಿನ ಹಿರಿಯ ಬರಹಗಾರರು, ಲೇಖಕರು, ಉಪನ್ಯಾಸಕರನ್ನೊಳಗೊಂಡಂತೆ ನಿರಂತರ ಸಾಹಿತ್ಯಿಕ ಚಟುವಟಿಕೆಗಳು ಹಾಗೂ ರಚನಾ ಕಾರ್ಯಗಾರ ನಡೆಯುತ್ತಿದ್ದು ನಾವು ನಿವೆಲ್ಲರೂ ಸದುಪಯೋಗಪಡಿಸಿಕೊಳ್ಳಬೆಕು ಎಂದರು. ಮದ್ರಾಸ್ ವಿಶ್ವವಿದ್ಯಾಲಯದ ಆಧುನಿಕ ವಚನ ಸಂಶೋಧನಾರ್ಥಿ ಹೇಮಾ ಎನ್. ಆಧುನಿಕ ವಚನ ಸಾಹಿತ್ಯ ಕುರಿತು ಪ್ರಾಸ್ತಾವಿಕ ಮಾತನಾಡಿದರು. ವಚನ ಗೋಷ್ಠಿಯಲ್ಲಿ 25 ಕ್ಕೂ ಅಧಿಕ ಆಧುನಿಕ ವಚನಕಾರರು ತಮ್ಮ ಸ್ವರಚಿತ ವಚನ ವಾಚನ ಮಾಡಿದರು. ವಾಚನ ಮಾಡಿದ ವಚನಗಳಲ್ಲಿ ಅತ್ಯುತ್ತಮ, ಉತ್ತಮ ಮತ್ತು ಮೆಚ್ಚುಗೆಯ ವಚನಗಳನ್ನು ಆಯ್ಕೆ ಮಾಡುವ ಮೂಲಕ ಪ್ರಮಾಣಪತ್ರ ನೀಡಲಾಯಿತು. ಕಾರ್ಯಕ್ರಮವನ್ನು ವಾರುಣಿ ದೇಶಪಾಂಡೆ ನಡೆಸಿಕೊಟ್ಟರು ಸುಮಂಗಲಾ ಚಕ್ರಸಾಲಿ ಸ್ವಾಗತಿಸಿದರು, ಪೂರ್ಣಿಮಾ ಶೆಟ್ಟರ ವಂದಿಸಿದರು.

# ಆಸ್ಪತ್ರೆಯ ಅವ್ಯವಸ್ಥೆ ಸರಿಪಡಿಸಲು ಆಗ್ರಹ



• **ಮಲ್ಲಮ್ಮ ನುಡಿ ವಾರ್ತೆ,ಕೆಂಭಾವಿ:**

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಅಸ್ವಚ್ಛತೆ ಕಾಡುತ್ತಿದೆ ಇಲ್ಲಿನ ಕಲುಷಿತ ನೀರು ಹಾಗೂ ಮಲ ಮೂತ್ರ ವಿಸರ್ಜನೆ ಸಾರ್ವಜನಿಕ ಚರಂಡಿಗಳಲ್ಲಿ ಹರಿದು ಬರುತ್ತಿದ್ದರೂ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ನಮ್ಮ ಕರ್ನಾಟಕ ಸೇನೆಯ ಹೋಬಳಿ ಕಾರ್ಮಿಕ ಘಟಕದ ಅಧ್ಯಕ್ಷ ಗುರುರಾಜ ಎಸ್ ಅಂಗಡಿ ಆರೋಪಿಸಿದ್ದಾರೆ. ಈ ಕುರಿತು ತಾಲೂಕು ಆರೋಗ್ಯಾಧಿಕಾರಿಗೆ ಬರೆದ ಮನವಿ ಪತ್ರವನ್ನು ಸಮುದಾಯ ಆರೋಗ್ಯ ಕೇಂದ್ರದ ವೈದ್ಯರ ಮೂಲಕ ಸಲ್ಲಿಸಿದ್ದು ಆರೋಗ್ಯ ಕೇಂದ್ರವು ಸಾರ್ವಜನಿಕರ ಪಾಲಿಗೆ ಆಶಾಕಿರಣವಾಗಬೇಕಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಆಸ್ಪತ್ರೆಯು ರೋಗಗಳನ್ನು ಹರಡುವ ಕೇಂದ್ರವಾಗಿ ಮಾರ್ಪಡುತ್ತಿರುವುದು ಅತ್ಯಂತ ವಿಷಾದನೀಯ, ಆಸ್ಪತ್ರೆಯ ಅವ್ಯವಸ್ಥೆ ಸರಿಪಡಿಸಲು ಹಲವು ಬಾರಿ ವೈದ್ಯಾಧಿಕಾರಿಗಳ ಗಮನಕ್ಕೆ ತಂದರು ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದಾರೆ, ಕಲುಷಿತ ನೀರನ್ನು ಬೇಕಾಬಿಟ್ಟಿಯಾಗಿ ಸಾರ್ವಜನಿಕ ಚರಂಡಿಗೆ ಬಿಡುತ್ತಿರುವುದು ಬೇಜವಾಬ್ದಾರಿತನಕ್ಕೆ ಸಾಕ್ಷಿಯಾಗಿದೆ. ಸ್ವಚ್ಛತೆಯ ಜವಾಬ್ದಾರಿ ಹೊತ್ತ ಗುತ್ತಿಗೆದಾರರು ಮತ್ತು ಸಂಬಂಧಪಟ್ಟ ಸಿಬ್ಬಂದಿಗಳು ಸಾರ್ವಜನಿಕರ ಹಿತದೃಷ್ಟಿಯನ್ನು ಮರೆತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಕೂಡಲೇ ಹಿರಿಯ ಅಧಿಕಾರಿಗಳು ಪರಿಶೀಲನೆ ನಡೆಸಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಮನವಿಯಲ್ಲಿ ಆಗ್ರಹಿಸಿದ್ದಾರೆ ಈ ವೇಳೆ ನಾರಾಯಣ ಸೂರ್ಯವಂಶಿ, ಬಸ್ಸುದೊರೆ, ಕೃಷ್ಣ, ಸೋಮನಾಥ ಸೇರಿದಂತೆ ಇತರರು ಇದ್ದರು.

# ಶ್ರೀ ಶಂಭುಲಿಂಗೇಶ್ವರರ ೯೦ನೇ ಜಾತ್ರಾ ಮಹೋತ್ಸವ.

• **ಮಲ್ಲಮ್ಮ ನುಡಿ ವಾರ್ತೆ,ಬೀದರ್ :**



ಬೀದರ ತಾಲೂಕಿನ ಸುಕ್ಷೇತ್ರ ರೇಕುಳಗಿಯ ಪವಾಡ ಪುರುಷ ಶಂಭುಲಿಂಗೇಶ್ವರರ ಬಸಮ್ಮತಾಯಿಯವರ 90ನೇ ಜಾತ್ರಾ ಮಹೋತ್ಸವ ಜ.16 ರಿಂದ 18 ವರೆಗೆ ಮೂರು ದಿನಗಳ ಕಾಲ ನಡೆಯಲಿದೆ. ಸುತ್ತಮುತ್ತಲಿನ ಹಳ್ಳಿಗಳು ಹಾಗೂ ಕರ್ನಾಟಕ ,ಆಂಧ್ರ, ತೆಲಂಗಾಣ, ಮಹಾರಾಷ್ಟ ಹೀಗೆ ಅನೇಕ ಭಕ್ತರ ಆರಾಧ್ಯ ದೇವರು ಭಕ್ತರ ಬೇಡಿಕೆಗಳನ್ನು ಈಡೇರಿಸುವ ಪಾವಡ ಪುರುಷ ಶ್ರೀ ಶಂಭುಲಿಂಗೇಶ್ವರರು ಎಂದು ಕರೆಯುತ್ತಾರೆ. ಇದೆ 16 ರಂದು ಶುಕ್ರವಾರ ಮೊದಲ ದಿನ ಅಗ್ನಿ ಪೂಜೆ, ರುದ್ರಾಭಿಷೇಕ, ಪಲ್ಲಕ್ಕಿ ಮೆರವಣಿಗೆ,ಗೀಗೀ ಪದಗಳು ಹಾಗೂ ಮಂತ್ರ ಮಹರ್ಷಿಗಳಾದ ಪೂಜ್ಯ ಶ್ರೀ ಗುರೂಜಿ ಇವರ ನೇತೃತ್ವದಲ್ಲಿ ಧರ್ಮಸಭೆ ಹಾಗೂ ಸಂಗೀತ ದರ್ಬಾರ, ಕೀರ್ತನೆ ಕಾರ್ಯಕ್ರಮ ಜರಗುವುದು.ಜ17 ರಂದು ಶನಿವಾರ ಸಾಯಂಕಾಲ 6:00ಗೆ ರಥೋತ್ಸವ ಸಂಗೀತ ದರ್ಬಾರ, ಭಜನ ಕೀರ್ತನೆ ಕಾರ್ಯಕ್ರಮ ಜರಗುವುದು.ಜ.18 ರಂದು ರವಿವಾರ ಮುಂಜಾನೆ 8:00 ಗಂಟೆಯಿಂದ ಜಂಗಿ ಕುಸ್ತಿಗಳು ನಡೆಯುವುದು. ಜಂಗಿ ಕುಸ್ತಿಯಲ್ಲಿ ವಿಜೇತರಾದ ಮೊದಲಿಗರಿಗೆ 21/– ರೂಪಾಯಿಯಿಂದ 2511/–ರೂಪಾಯಿವರೆಗೆ, ಕೊನೆಯಲ್ಲಿ ಪ್ರಥಮ ವಿಜೇತರಾದ ಕುಸ್ತಿದಾರರಿಗೆ ಬಹುಮಾನವಾಗಿ 5 ತೊಲಿ ಬೆಳ್ಳಿ ಕಡಗ ನೀಡಲಾಗುವುದು. ಭಕ್ತಾದಿಗಳು ಜಾತ್ರೆ ಹಾಗೂ ರಥೋತ್ಸವದಲ್ಲಿ ಪಾಲ್ಗೊಳ್ಳಬೇಕಾಗಿ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನ ಪಂಚ ಕಮಿಟಿಯ ಅಧ್ಯಕ್ಷ ಸಂಗಪ್ಪಾ ಪಾಟೀಲ ಕಾರ್ಯದರ್ಶಿ ವೈಜಿನಾಥ ಹಚ್ಚೆ ತಿಳಿಸಿದ್ದರು.

# ವಿದ್ಯಾನಗರ ಬಡಾವಣೆಯಲ್ಲಿ ರಂಗೋಲಿ ಸ್ಪರ್ಧೆಗೆ ಸ್ಪಂದನೆ

• **ಮಲ್ಲಮ್ಮ ನುಡಿ ವರ್ತೆ ಬೀದರ:**

ಸಂಕ್ರಾಂತಿ ಹಬ್ಬದ ಹಿನ್ನೆಲೆಯಲ್ಲಿ ಜೈ ಶ್ರೀ ರಾಮ್ ಚಾರಿಟೇಬಲ್ ಎಜುಕೇಶನ್ ಸೊಸೈಟಿ ವತಿಯಿಂದ ಪ್ರತಿರ್ಷದಂತೆ ಈ ಬಾರಿಯೂ ರಂಗೋಲಿ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು. ರಂಗೋಲಿ ಸ್ಪರ್ಧೆ ಗೆ ಮಹಿಳೆಯರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.ಸುಮಾರು 50ಕ್ಕು ಹೆಚ್ಚು ಜನ ನೋಂದಾಯಿಸಿದ ಯುವತಿಯರು, ವಿದ್ಯರ್ಥಿನಿಯರಿಗೆಶ್ರೀ ರಾಮ ರ್‍ಬಾರ್ ಮಂದಿರದ ಆವರಣದಲ್ಲಿ ರಂಗೋಲಿ ಬಿಡಿಸಲು ವ್ಯವಸ್ಥೆ ಮಾಡಲಾಗಿತ್ತು. ಸ್ಪರ್ಧರ್ಥಿಗಳು ವಿವಿಧ ನಮೂನೆಗಳ ಮತ್ತು



ವಿನ್ಯಾಸಗಳ ಆರ್ಷಕ ಬಣ್ಣದ ಚಿತ್ತಾರ ಬಿಡಿಸಿ ಗಮನ ಸಳೆದರು. ಜನಪ್ರಿಯ ಚುಕ್ಕಿ ರಂಗೋಲಿ, ರೇಖೆಗಳ ವಿನ್ಯಾಸ ಹೊಂದಿರುವ ರಂಗೋಲಿ ಮತ್ತು ಆಧುನಿಕ ಚಿತ್ರರಂಗೋಲಿಗಳನ್ನು ಬಿಡಿಸಿದ್ದು ವಿಶೇಷವಾಗಿತ್ತು. ರಂಗೋಲಿ ಸ್ಪರ್ಧೆ ಗೆ ಸೊಸೈಟಿ ಅಧ್ಯಕ್ಷ ಚಂದ್ರಶೇಖರ್ ಪೊಲೀಸ್ ಹಾಗೂ ಸೊಸೈಟಿಯ ಉಪಾಧ್ಯಕ್ಷ ಶ್ರೀಕಾಂತ ಪಾಟೀಲ ಅವರಿಂದ ಚಾಲನೆ ನೀಡಲಾಯಿತು. ಈ ಸಂಭ್ರಮವನ್ನು ಮೊದಲು ಸಂಕೇತಿಸುವುದೇ ರಂಗೋಲಿ.ಮನೆಯ ಮುಂದೆ ಚಿತ್ತಾರ್ಷಕವಾಗಿ ಮಹಿಳೆಯರು ರಂಗೋಲಿ ಬಿಡಿಸಿದ್ದಾರೆಂದರೆ ಮನೆಯಲ್ಲಿ ವಿಶೇಷತೆ, ಹಬ್ಬದ ಆಚರಣೆಯಿದೆ ಎಂದು ಶ್ರೀಕಾಂತ ಪಾಟೀಲ ಮಾತನಾಡಿದರು.ಸ್ಪರ್ಧೆ ಯ ನರ್ಣಾಯಕರಾಗಿ ಆಗಮಿಸಿದ ನಗರಸಭೆ ಸದಸ್ಯ ರಾಜೇಶ್ ಪಪ್ಪು ಮತ್ತು ವಿಶ್ವನಾಥ್ ಬರ್ವೆಲ್ ಮಾಲೀಕರಾದ ಕಲ್ಯಾಣ್ ರಾವ್ ಬಿರಾದರ್, ಬಾಬುರಾವ ಸಂಗೊಳ್ಳಗಿ ಸ್ಪದ–ರ್ಧೆ ಯಲ್ಲಿ ಭಾಗವಹಿಸಿದ ಮೂರು ಜನರಿಗೆ ಪ್ರಥಮ ಹಾಗೂ ದ್ವಿತೀಯ ತೃತೀಯ ಬಹುಮಾನ ಘೋಷಣೆ ಮಾಡಿದರು. ನಂತರ ಇನ್ನುಳಿದ ಸ್ಪರ್ಧೆ ರ್ಥಿಗಳಿಗೆ ಸಮಾಧಾನಕರ ಬಹುಮಾನ ನೀಡಿ ಗೌರವಿಸಲಾಯಿತು.ನಗರ ಸಭೆ ಸದಸ್ಯ ರಾಜೇಶ್ ಪಪ್ಪು ಅವರು ರಂಗೋಲಿ ಬಿಡಿಸುವಮೂಲಕವೇ ಆರಂಭವಾಗುವ ಮಹಿಳೆಯರ ದಿನಚರಿಗೆ ಒಂದು ಸ್ಪರ್ಧೆ ರ್ಏಡಿಸಿ ಮಹಿಳೆಯರ ಕಲಾಭಿವ್ಯಕ್ತಿಗೆ ಪ್ರೋತ್ಸಾಹಿಸಿದ ಜೈ ಶ್ರೀ ರಾಮ್ ಚಾರಿಟೇಬಲ್ ಎಜುಕೇಶನ್ ಸೊಸೈಟಿ ಹಾಗೂ ಸಹಭಾಗಿತ್ವದ ಸಂಸ್ಥೆಗಳ ಕರ್‍ಯ ಅಭಿನಂದನೀಯ ಎಂದರು. ಕರ್‍ಯಕ್ರಮದಲ್ಲಿ ಎಳ್ಳು, ಬೆಲ್ಲ ಪರಸ್ಪರ ಹಂಚಿ ಸಂತೋಷ ವ್ಯಕ್ತಪಡಿಸಿದರು ಸಂಘದ ಸದಸ್ಯರಾದ ಪ್ರಭು ಆಲೊರೆ, ,ಪ್ರಭಾಕರ ಜಟ್ಲಾ, ಸಂಜು ಕುಮಾರ ರೆಡ್ಡಿ,ನಾಗೇಂದ್ರ ರೆಡ್ಡಿ, ಜಗದೀಶ ಜಟ್ಲಾ, ರಾಜಕುಮಾರ ಸೋನಾರ, ಮೋಹನ ಸೋನಾರ, ರಾಜಕುಮಾರ ಸ್ವಾಮಿ, ರಾಜು ಸ್ವಾಮಿ, ,ಸುಬ್ರಹ್ಮಣಂ ಬಾಲು ಚಾಲಕ, ವಿರೂಪಾಕ್ಷಪ್ಪ ಪಾಟೀಲ, ಮಲ್ಲಿಕರ್ಜುನ ಬೆಳಕೆರಿ, ಸಾಗರ, ರಾಚಪ್ಪ ಪಾಟೀಲ, ಶ್ರೀನಿವಾಸ ಗದ್ದೆ, ವಿಶ್ವನಾಥ ಕೊಂಡ.ಬಿ.ರಾಜ್ ಟೈಲರ, ಗಣೇಶ ಸಗ್ಗಮ, ಸರ್ಯಕಾಂತ ಕೊಟೆ, ನರೇಂದ್ರ ಚಾರಿ, ಬಸವರಾಜ ಟಿಪ ಟಾಪ, ಸಂದೀಪ್ ಟಿಪ್ ಟಾಪ್ ವಿಜಯ ಶಂಕರ ಇನ್ನೂ ಬಡಾವಣೆ ನಿವಾಸಿಗಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

### 12 ವರ್ಷ ಮನರೇಗಾದಲ್ಲಿನ ನ್ಯುನ್ಯತೆ ಮೋದಿ ಸರ್ಕಾರಕ್ಕೆ ಗೊತ್ತಾಗಲಿಲ್ಲವೇ?

# ಕೇಂದ್ರದ ವಿರೂದ್ಧ ಎಮ್.ಎಲ್.ಸಿ ಸಲಿಮ್ ಪ್ರಶ್ನೆ



• **ಮಲ್ಲಮ್ಮ ನುಡಿ ವಾರ್ತೆ ಬೀದರ್:**

ನರೇಂದ್ರ ಮೋದಿ ಅವರು ಅಧಿಕಾರಕ್ಕೆ ಬಂದು 12 ವರ್ಷಗಳಾಗುತ್ತಿವೆ. ಇಲ್ಲಿಯ ವರೆಗೆ ಮನರೆಗಾದಲ್ಲಿ ನ್ಯುನ್ಯತೆ ಗೊತ್ತಾಗಲಿಲ್ಲವೆ? ಇಷ್ಟು ದಿನ ಅವರೇನು ಕತ್ತೆ ಕಾಯ್ತಿದ್ದರೇನು? ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ, ಕೆಪಿಸಿಸಿ ಕಾಯಾಧ್ಯಕ್ಷ ಸಲಿಮ್ ಅಹಮ್ಮದ್ ಪ್ರಶ್ನೆ ಮಾಡಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಟಿ ಉದ್ದೇಶಿಸಿ ಮಾತನಾಡಿರುವ ಅವರು, ಮೋದಿ ಸಾಹೆಬ್ರು ಅಧಿಕಾರಕ್ಕೆ ಬಂದು 12 ವರ್ಷ ಆಯ್ತು ಆಗಲೇ ಅವರಿಗೆ ಗೊತ್ತಾಗಲಿಲ್ವ ಯೋಜನೆ ಸರಿ ಇರಲಿಲ್ಲ ಅಂತ ಅವರಿಗೆ ನಾಚಿಕೆಯಾಗಬೇಕು ಎಂದು ಅವರು ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದರು.

ಆಗ ಗೋಡ್ಸೆ ಗಾಂಧಿಯವರನ್ನು ಕೊಂದಿದ್ರು, ಈಗ ಬಿಜೆಪಿಯವರು ಗಾಂಧೀಜಿ ಅವರ ವಿಚಾರಧಾರೆ ಹೋರಾಟಗಳನ್ನು ಕೊಂದಿದ್ದಾರೆ. ಅವರಿಗೆ ಮಹಾತ್ಮ ಗಾಂಧಿಯವರ ವಿಚಾರಧಾರೆಗಳ ಬಗ್ಗೆ ನಂಬಿಕೆ ಇಲ್ಲ..20 ವರ್ಷಗಳ ಯೋಜನೆಯ ಬದಲಾವಣೆ ಮಾಡಲು ಹೊರಟಿರುವ ಇವರಿಗೆ ನಾಚಿಕೆ ಮಾನ, ಮರ್ಯಾದೆ, ಇದೆಯಾ? ಎಂದು ಪ್ರಶ್ನೆ ಮಾಡಿರುವ ಅವರು, ಸಣ್ಣಪುಟ್ಟ ಬದಲಾವಣೆಗಳಿದ್ದರೆ ಮಾರ್ಪಾಡು ಮಾಡಲಿ ಆದರೆ ಗಾಂಧೀಜಿಯವರ ಹೆಸರನ್ನು ಯಾಕೆ ತೆಗೆಯ ಹಾಕಲು ಮುಂದಾಗಿದ್ದಾರೆ ಎಂದು ಆರೋಪಿಸಿದರು. ಗಾಂಧಿಜಿಯವರ ಹೆಸರು ತೆಗೆದ ಬಳಿಕ ಇನ್ಮುಂದೆ ಬಿಜೆಪಿಯವರು ಗಾಂಧಿಜಿಯವರ ಪ್ರತಿಮೆ ಮುಂದೆ ಕುಳಿತು ಹೋರಾಟ ಮಾಡವ ನೈತಿಕತೆ ಕಳೆದುಕೊಂಡಿರುವರು. ಆಗ ಇಂದಿರಾ ಗಾಂಧಿ, ರಾಜೀವ್ ಗಾಂಧಿ ನೆಹರು ತೆಗೆದು ಹಾಕಿರುವ ಬಿಜೆಪಿಗರು ಈಗ ಗಾಂಧೀಜಿಯವರನ್ನು ಸಹ ಬಿಡಲಿಲ.– ಇವರಿಗೆ ನಾಚಿಕೆ ಮಾನ ಮರ್ಯಾದೆ ಇಲ್ಲ ಎಂದು ಹರಿಹೈದರು. ಮಹಿಳಾ ಪೌರಾಯುಕ್ತೆ ಮೇಲೆ ಕಾಂಗ್ರೆಸ್ ಮುಖಂಡನ ದೌಲತ್ತು ವಿಚಾರ ಪ್ರಸ್ತಾಪಿಸಿರುವ ಅವರು, ಯಾರು ಎಷ್ಟೇ ದೊಡ್ಡವರಾಗಿದ್ರು ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇವೆ. ಮಹಿಳೆಯರನ್ನು ನಿಂದಿಸುವರನ್ನು ಯಾರನ್ನು ಬಿಡಲ್ಲ. ಘಟನೆ ಬಗ್ಗೆ ಕ್ಷಮೆ ಕೇಳಿದ್ದಾರೆ, ಎಫ್.ಐ.ಆರ್ ಆಗಿದ್ರೆ ಕೂಡಲೇ ಅವರನ್ನು ಅರೆಸ್ಟ್ ಮಾಡ್ಬೇಕು. ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವರನ್ನು ಬಂಧಿಸುವಂತೆ ಒತ್ತಾಯಿಸಿದ ಅವರ,. ಮಹಿಳೆಯರನ್ನು ಅವಮಾನಿಸುವರನ್ನು ನಮ್ಮ ಪಕ್ಷ ಯಾವುದೇ ಕಾರಣ–ಕ್ಕೂ ರಕ್ಷಿಸುವುದಿಲ್ಲ ಎಂದು ಪುನರೂಚ್ಛರಿಸಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಸವರಾಜ ಜಾಬಶೆಟ್ಟಿ, ಮಾಜಿ ವಿಧಾನ ಪರಿಷತ್ ಸದಸ್ಯ ಅರವಿಂದಕುಮಾರ ಅರಳಿ, ಕೆಪಿಸಿಸಿ ಹಿರಿಯ ಮುಖಂಡ ಅಬ್ದುಲ್ ಮನ್ನಾನ್ ಸೇಠ್, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದತ್ತಾತ್ರಿ ಮೂಲಗೆ ಪತ್ರಿಕಾಗೋಷ್ಠಿಯಲ್ಲಿದ್ದರು.

# ಇಂದು ಬೀದರ ಕೋಟೆ ಮೇಲೆ ಏರ್ ಶೋ



• **ಮಲ್ಲಮ್ಮ ನುಡಿ ವರ್ತೆ ಬೀದರ:**

ಜನವರಿ.15 (ಕರ್ನಾಟಕ ವಾರ್ತೆ):– ಭಾರತೀಯ ವಾಯುಪಡೆ ಬೀದರ ವತಿಯಿಂದ ಬೀದರ ಕೋಟೆಯ ಆವರಣದ ಮೇಲೆ ದಿನಾಂಕ: 16–01–2026 ರಂದು ಮಧ್ಯಾಹ್ನ 3 ಗಂಟೆಗೆ ಬೀದರ್ ಏರ ಶೋ ಹಮ್ಮಿಕೊಳ್ಳಲಾಗಿದೆ.

ಭಾರತೀಯ ವಾಯುಪಡೆಯ ಸೂರ್ಯ ಕಿರಣ್ ಏರೋಬ್ಯಾಟಿಕ್ಸ್ ತಂಡದಿಂದ ಏರ್ ಶೋ ನಡೆಯಲಿದ್ದು, ಇದರಲ್ಲಿ ಅದ್ಭುತ ವೈಮಾನಿಕ ಕಸರತ್ತುಗಳನ್ನು ಕಾಣಬಹುದಾಗಿದೆ. ಬೀದರ ಜಿಲ್ಲೆಯ ಎಲ್ಲಾ ಸಾರ್ವಜನಿಕರಿಗೆ ಏರ ಶೋ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದ್ದು,

ಮಧ್ಯಾಹ್ನ 3 ಗಂಟೆಯೊಳಗೆ ಸಾರ್ವಜನಿಕರು ಬೀದರ ಕೋ–ಟೆಯ ಒಳಗಡೆ ನಿಗದಿತ ಸ್ಥಳದೊಳಗೆ ಉಪಸ್ಥಿತರಿದ್ದು, ಬೀದರ ಏರ್ ಶೋ ವೀಕ್ಷಿಸಬಹುದಾಗಿದೆ ಎಂದು ಬೀದರ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿದ್ದರಾಮೇಶ್ವರರ 854ನೇ ಜಯಂತ್ಯುತ್ಸವ



• **ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:**

ಪಟ್ಟಣದ ತಹಸೀಲ್ದಾರ ಕಚೇರಿಯಲ್ಲಿ ಬೋವಿ ಸಮಾಜದ ವತಿಯಿಂದ ಹಮ್ಮಿಕೊಂಡ ಶಿವಯೋಗಿ ಸಿದ್ದರಾಮೇಶ್ವರರ 854ನೇ ಜಯಂತ್ಯುತ್ಸವ ಕಾಠ್ಯಕ್ರಮದಲ್ಲಿ ತಾಲೂಕ ದಂಡ ಅಧಿಕಾರಿ ತಹಸೀಲ್ದಾರ ಅಮಿತಕುಮಾರ ಕುಲಕರ್ಣಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ನಂತರ ಮಾತನಾಡಿ, ಯೋಗದಿಂದ ವೈಚಾರಿಕ ಬೆಳಕು ಮೂಡಿಸಿದ ಶಿವಯೋಗಿ ಸಿದ್ದರಾಮ ಶರಣ ಸಂಸ್ಕೃತಿಯ ಪ್ರಥಮರೆಂದೆ ಖ್ಯಾತಿವೆತ್ತ ಇವರು ಕಾಯಕ ಯೋಗಿ ಶಿವಯೋಗಿ ಕರ್ಮಯೋಗಿಯಾಗಿ ಧರ್ಮ ಸಮಾಜದ ಉದ್ಧಾರಗೈದ ಮಹಾಶರಣ ಎಂದು ನುಡಿದರು.

ಚೆನ್ನಬಸವಣ್ಣನವರನ್ನು ತಮ್ಮ ಗುರುವನ್ನಾಗಿ ಮಾಡಿಕೊಂಡು ಶೂನ್ಯ ಸಿಂಹಾಸನಾಧೀಶ ಅಲ್ಲಮಪ್ರಭುಗಳ ದಿವ್ಯ ಮಾರ್ಗದರ್ಶನದಲ್ಲಿ ಶಿವಯೋಗಿ

**ಭವ್ಯ ಮೆರವಣಿಗೆ**

ತಹಸೀಲ್ ಕಾರ್ಯಾಲಯದಿಂದ ತಹಸೀಲ್ದಾರ ಸೀಲ್ದಾರ ಅಮಿತಕುಮಾರ ಕುಲಕರ್ಣಿ ಅವರು ಮೆರವಣಿಗೆಗೆ ಚಾಲನೆ ನೀಡಿದರು. ಬೋವಿ ಸಮಾಜ ಸೇರಿದಂತೆ ಸರ್ವ ಸಮಾಜದ ಜನರು, ಮುಖಂಡರು ಭಾಗಿಯಾಗಿದ್ದು ವಿಶೇಷವಾಗಿತ್ತು.

ಸಿದ್ದರಾಮೇಶ್ವರ ಮಹಾನ್ ಕಾವ್ಯ ಕೈಗೊಂಡವರು. ಇವರ ಸಂದೇಶ ಮಾನವ ಬದುಕಿಗೆ ಪ್ರೇರಣೆ ನೀಡುತ್ತದೆ ಎಂದು ಹೇಳಿದರು.

ತಾಪಂ ಮಾಜಿ ಅಧ್ಯಕ್ಷ ಶ್ರೀರಂಗ ಪರಿಹಾರ ಮಾತನಾಡಿ ಸಿದ್ದರಾಮೇಶ್ವರರು ಅನುಭವ ಮಂಟಪದ ಅಧ್ಯಕ್ಷರಾಗಿ ಕಪಿಲಸಿದ್ದ ಮಲ್ಲಿಕಾರ್ಜುನ ಅಂಕಿತನಾಮದಿಂದ ಸಾವಿರಾರು ವಚನಗಳನ್ನು ರಚಿಸಿ ಸಾಹಿತ್ಯ ಜಗತ್ತಿಗೆ ಧಾರೆ ಎರೆದವರು, ಬೋವಿ ಸಮಾಜಕ್ಕೆ ದಾರಿ ದೀಪವಾಗಿ ಪ್ರೇರಣಾ ಶಕ್ತಿಯಾಗಿರುವರು ಎಂದರು.

ತಾಪಂ ಇಒ ಹಣಮಂತರಾಯ್ ಕೌಟಗೆ, ಪ್ರವೀಣ ಬಿರಾದಾರ, ಮುಖಂಡರಾದ ಸುಭಾಷ ಮೀರ್ಚೆ, ಬಾಲಾಜಿ ತೇಲಂಗೆ, ಸಾಯಿನಾಥ ಕಾಂಬಳೆ, ಸಂತೋಷ ಸೋಲಾಪೂರೆ, ಪ್ರಕಾಶ ಹುಲಸೂರೆ, ರಾಜಕುಮಾರ ಗಾಯಕವಾಡ್, ಸುಭಾಷ ಗಾಯಕವಾಡ್, ಸಂತೋಷ ಬಿರಾದಾರ, ಸಂತೋಷ ತೋರಣೇಕರ್, ಮಹೇಶ ಸಜ್ಜನ್, ಬಾಲಾಜಿ ಒಡೆಯರ್, ರಾಜಕುಮಾರ, ಸಂಜುಕುಮಾರ ಒಡೆಯರ್, ಹಣಮಂತ ರಾಮ್ಲು, ವೆಂಕಟ ಪವಾರ, ಕಾಶಿನಾಥ ಪವಾರ, ಶಾಲಿವಾನ್, ಸುನೀಲ್ ರಾಮ್ಲು ಹಾಗೂ ಬೋವಿ ಸಮಾಜದ ಬಾಂಧವರು ಭಾಗವಹಿಸಿದ್ದರು.

# ಭಾಲ್ಕಿಯಲ್ಲಿ ಫೆಬ್ರವರಿ 4ರಂದು ಭವ್ಯ ಹಿಂದೂ ಸಮ್ಮೇಳನ– ವಿವಿಧ ಸಮಿತಿಗಳ ರಚನೆ



ಭಾಲ್ಕಿ: ಹಿಂದೂ ಧರ್ಮದ ಸಂರಕ್ಷಣೆ, ಸನಾತನ ಸಂಸ್ಕೃತಿಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಸಮಾಜದಲ್ಲಿ ಏಕತೆ ಮತ್ತು ಅಭಿವೃದ್ಧಿಯನ್ನು ಬಲಪಡಿಸುವ ಉದ್ದೇಶದಿಂದ ಫೆಬ್ರವರಿ 4ರಂದು ಭಾಲ್ಕಿ ನಗರದಲ್ಲಿ ಭವ್ಯವಾಗಿ ಹಿಂದೂ ಸಮ್ಮೇಳನ ಆಯೋಜಿಸಲು ನಿರ್ಧರಿಸಲಾಗಿದೆ.

ಈ ಕುರಿತು ಪಟ್ಟಣ ಅಷ್ಟೂರೆ ಕಲ್ಯಾಣ ಮಂಟಪದಲ್ಲಿ, ವಿವಿಧ ಸಮಾಜಗಳ ಮುಖಂಡರ ಹಾಗೂ ವಿವಿಧ ಸಂಘಟನೆಗಳ ಪ್ರಮುಖರ ಪ್ರತಿನಿಧಿಗಳ ಸಮ್ಮುಖದಲ್ಲಿ ಗುರುವಾರ ಆಯೋಜಿಸಿದ ಪೂರ್ವ ಭಾವಿ ಸಭೆಯಲ್ಲಿ ಚರ್ಚಿಸಿದ ಪ್ರಮುಖರು, ವಿವಿಧ ಸಮಿತಿಗಳನ್ನು ರಚನೆ ಮಾಡಿ ಜವಾಬ್ದಾರಿಗಳನ್ನು ಹಂಚಿಕೆ ಮಾಡಿದರು.

ಸಮ್ಮೇಳನ ಆಯೋಜನಾ ಸಮಿತಿಯ ಅಧ್ಯಕ್ಷರಾಗಿ ರಾಚಪ್ಪ ಪಾಟೀಲ,ಉಪಾಧ್ಯಕ್ಷರಾಗಿ ಸೋಮನಾಥಪ್ಪ ಅಷ್ಟೂರೆ ಹಾಗೂ ವಿಲಾಸ ಬಕ್ಕಾ ಅವರನ್ನು ಆಯ್ಕೆ ಮಾಡಲಾಯಿತು. ಕಾರ್ಯದರ್ಶಿಗಳಾಗಿ ಉದ್ದವ ಕನ್ಸೆ,ಪ್ರಕಾಶ ಮಾಶೆಟ್ಟೆ ಮತ್ತು ಉತ್ತಮ ಪುರಿ, ಖಜಾಂಚಿಯಾಗಿ ಅಶ್ವಿನ ಭೋಸಲೇ, ಸಂಘಟನಾ ಕಾರ್ಯದರ್ಶಿಗಳಾಗಿ ಶಿವು ಲೋಖಂಡೆ, ಪ್ರಸನ್ನ ಖಂಡ್ರೆ, ಚನ್ನಬಸವ ಬಳತೆ ಮತ್ತು ಜೈ ಕಿಶೇನ ಬಿಯಾನಿ ಅವರನ್ನು ನೇಮಿಸಲಾಯಿತು.

ಕಾರ್ಯಕಾರಣಿ ಸದಸ್ಯರಾಗಿ ದತ್ತಾತ್ರಿ ಜಾಧವ, ರಮೇಶ ದ್ಯವೆ, ಓಂಕಾರ ಮೊರೆ, ಸಂಜುಕುಮಾರ ಶಿಂಧೆ, ಕಪಿಲ ಕಲ್ಯಾಣಿ, ಸುರೇಶ ಹುಬ್ಬಳೆಕರ, ಸಚಿನ್ ಜಾಧವ, ರಾಹುಲ ಸಾವಳೆ, ಜೈಹಿಂದ ಕುಂಬಾರ ಹಾಗೂ ಶಿವಕುಮಾರ ರಾಜಭವನ ಅವರನ್ನು ಸೇರಿಸಲಾಯಿತು.

ಪ್ರಚಾರ ಸಮಿತಿಯ ಅಧ್ಯಕ್ಷರಾಗಿ ಜೈರಾಜ ದಾಬಶೆಟ್ಟೆ, ಸದಸ್ಯರಾಗಿ ಸಂತೋಷ ಬಿ.ಜಿ. ಪಾಟೀಲ ಮತ್ತು ಈಶ್ವರ ರುಮ್ಮಾ. ಯೋಗ ತಂಡದ ಮುಖ್ಯಸ್ಥರಾಗಿ ಹರಿದೇವ ರುದ್ರಮಣಿ ಅವರನ್ನು ಆಯ್ಕೆ ಮಾಡಲಾಯಿತು.

ನಂತರ ಮಾತನಾಡಿದ ಗಣ್ಯರು, ಫೆಬ್ರವರಿ 4ರಂದು ನಡೆಯಲಿರುವ ಹಿಂದೂ ಸಮ್ಮೇಳನವು ಭಾಲ್ಕಿಯ ಇತಿಹಾಸದಲ್ಲೇ ಒಂದು ಸ್ಮರಣೀಯ ಹಾಗೂ ಏಕತೆಯ ಸಂದೇಶ ನೀಡುವ ಮಹತ್ವದ ಕಾರ್ಯಕ್ರಮವಾಗಲಿದೆ. ಈ ಹಿಂದೂ ಸಮ್ಮೇಳನವು ಕೇವಲ ಒಂದು ಕಾರ್ಯಕ್ರಮವಲ್ಲ, ಅದು ಸಮಾಜದ ಏಕತೆ, ಸಂಸ್ಕೃತಿ ಸಂರಕ್ಷಣೆ ಮತ್ತು ಯುವಪೀಳಿಗೆಗೆ ಸನಾತನ ಮೌಲ್ಯಗಳ ಅರಿವು ಮೂಡಿಸುವ ಮಹತ್ವದ ವೇದಿಕೆಯಾಗಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಇಂದಿನಿಂದಲೇ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸುವ ಉದ್ದೇಶದಿಂದ ಸಮಿತಿಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯಪ್ರವೃತ್ತರಾಗುವಂತೆ ಕರೆ ನೀಡಲಾಯಿತು.

ಈ ಸಂದರ್ಭದಲ್ಲಿ ಪ್ರಮುಖರಾದ ಶಿವಲಿಂಗ ಕುಂಬಾರ, ಸುಧೀರ ನಾಯಕ, ಶಿವು ಲೋಕಂಡೆ, ಮಾಜಿ ಶಾಸಕ ಪ್ರಕಾಶ ಖಂಡ್ರೆ, ಮಾಜಿ ಎನ್ ಎಸ್ ಎಸ್ ಕೆ ಅಧ್ಯಕ್ಷ ಡಿ.ಕೆ. ಸಿದ್ರಾಮ, ಭರತ ಖಂಡ್ರೆ, ವೀರಣ್ಣ ಕಾರಬರಿ, ಡಿ.ಡಿ. ಸಿಂಧೆ, ಅರವಿಂದ ಕುಲಕರ್ಣಿ, ಜೈಕಿಶನ ಬೀಯಾನಿ, ರವಿ ಕುಂಬಾರ, ಜಗದೀಶ ಖಂಡ್ರೆ, ಜಗದೀಶ ಭೂರೇ, ಸತೀಶ ಮುದ್ದಾಳೆ, ದಯಾನಂದ ಪವಾರ, ಚಂದ್ರಕಾಂತ ತಳವಾಡೆ, ರಾಜಕುಮಾರ ಮಾನಕರಿ ಸೇರಿದಂತೆ ಹಲವರು ಇದ್ದರು.

# ಶ್ರೀ ಸಿದ್ದರಾಮಾನಂದಪುರಿ ಮಹಾಸ್ವಾಮಿಗಳಿಗೆ ಶ್ರದ್ಧಾಂಜಲಿ

• **ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:**

ಕಾಗಿನೆಲೆ ಮಹಾ ಸಂಸ್ಥಾನದ ಕನಕಪೀಠದ ಪೀಠಾದಿಪತಿಗಳಾದ ಶ್ರೀ ಪರಮಪೂಜ್ಯ ಶ್ರೀ ಸಿದ್ದರಾಮಾನಂದಪುರಿ ಮಹಾಸ್ವಾಮಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ತಾಲ್ಲೂಕಿನ ತಾಳಮಡಗಿ ಗ್ರಾಮದಲ್ಲಿ ಗೊಂಡ ಸಮಾಜದ ವತಿಯಿಂದ ಸಿದ್ದರಾಮಾನಂದಪುರಿ ಮಹಾಸ್ವಾಮಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಬಳಿಕ ಗೊಂಡ ಸಮಾಜದ ಯುವ ಮುಖಂಡ ಸುನಿಲ ಸಾಹೇಬ್ ಮಾತನಾಡಿ,ಕಾಗಿ ನೆಲೆ ಶ್ರೀಗಳು ಅತ್ಯಂತ ಸರಳ ಹಾಗೂ ನಿಸ್ವಾರ್ಥ ಸೇವೆ ಮೈಗೂಡಿಸಿಕೊಂಡಿದ್ದರು. ರಾಜ್ಯದ ಯಾವುದೇ ಮೂಲೆಗೆ ಕರೆದರೂ ಯಾವುದೇ ಅಪೇಕ್ಷೆವಿಲ್ಲದೆ ಸ್ವಂತ ಕಾರಿನಲ್ಲಿ ಪ್ರಯಾಣ ಬೆಳಸಿ ಕನಕದಾಸರ ಹಾಗೂ ಹಾಲುಮತ ಸಮಾಜದ ಕುರಿತು ಉಪದೇಶ ಹಾಗೂ ಆಶೀರ್ವಾಚನ ನೀಡುತ್ತಿದ್ದರು. ಇಂತಹ ಮಹಾ



ಸ್ವಾಮಿಗಳ ಅಗಲಿಕೆಯಿಂದ ಹಾಲುಮತ ಸಮಾಜಕ್ಕೆ ದೊಡ್ಡ ಮಟ್ಟದಲ್ಲಿ ಆಘಾತವಾಗಿದೆ.ಪರಮಾತ್ಮ ಅವರ ಆತ್ಮಕ್ಕೆ ಶಾಂತಿ ಕರುಣಿಸಲಿ,ಮುಂದೆ ಅವರು ಇದೆ ನೆಲದಲ್ಲಿ ಹುಟ್ಟಿಬರಲಿ ಎಂದು ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಗೊಂಡ ಸಮಾಜದ ಉಪಾಧ್ಯಕ್ಷ ಅರ್ಜುನ ಕಪಲಾಪುರ್,ರೇವಣಸಿದ್ಧ ಚಿನಕೇರಿ, ಆಕಾಶ ನಿರ್ಣಾ,ಕೇದರ ವಣಕೇರಿ,ರಾಜಕುಮಾರ ಡೆಬ್ಬಿ, ಅನಿಲ ಹಿಲಾಲಪುರ್,ಸುಭಾಸ್ ನಿಂಪಣ್ಣಿ,ಅಮ್ಜದ್ ಪಟೇಲ್,ನಾಗೇಶ ವಿಶ್ವಕರ್ಮ,ದಿಲೀಪ ಜಮಾದಾರ,ಮಂಜುನಾಥ ನಿಂಬುರ್,ಸುಭಾಸ್ ನಂದಗಾವ, ಶ್ರೀಮಂತ ಭಾವಿದೊಡ್ಡಿ,ಕಾರ್ತಿಕ ಬಂಡೆಪ್ಪನೋರ್,ಸತೀಶ ನಿಂಪಣ್ಣಿ,ವಿಶಾಲ ಭಾವಿದೊಡ್ಡಿ,ಕೇದರ್ ಬಾಜೋಳಗಿ,ಈರಪ್ಪ ಮೊಳಕೇರಾ, ಅನೀಲ ಹಡಪದ, ಧೂಳಪ್ಪ ಹಡಪದ ಸೇರಿ ಅನೇಕರು ಇದ್ದರು.

# ಪರಮಪೂಜ್ಯ ಶ್ರೀ ಸಿದ್ಧರಾಮಾನಂದ ಮಹಾಸ್ವಾಮಿಗಳವರ ಭಕ್ತಿ ಪೂರಕವಾಗಿ ಶ್ರದ್ಧಾಂಜಲಿ



• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಕಲಬುರಗಿ ವಿಭಾಗ (ತಿಂಥಣಿ ಬ್ರಿಡ್ಜ್)ದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಸಿದ್ಧರಾಮಾನಂದ ಮಹಾಸ್ವಾಮಿಗಳವರು ಅನಾರೋಗ್ಯದಿಂದ ಸ್ವರ್ಗಸ್ಥರಾದ ಸುದ್ದಿ ಅತ್ಯಂತ ದುಃಖಕರವಾಗಿದೆ. ಶ್ರೀಗಳಿಗೆ ನಗರದ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಸೂಪರ್ಮಾರ್ಕೆಟ್ ಸರ್ಕಲ್‌ನಲ್ಲಿ ಜಿಲ್ಲಾ ಕುರುಬ ಸಮಾಜದ ಬಂಧುಗಳ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲು ಸಭೆ ಏರ್ಪಡಿಸಲಾಗಿದೆ ಈ ಸಭೆಯಲ್ಲಿ ಸಮಾಜದ ಬಂಧುಗಳು ಹಾಗೂ ಸಮಸ್ತ ಭಕ್ತಾದಿಗಳು ಬಂದು ಭಾಗವಹಿಸಿ ಶ್ರೀಗಳಿಗೆ ಭಕ್ತಿ ಪೂರಕವಾಗಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಯುವ ಘಟಕದ ರಾಜ್ಯಾಧ್ಯಕ್ಷರಾದ ಭಗವಂತರಾಯ ಗೌಡಪಾಟೀಲ್, ಕರ್ನಾಟಕ ಪ್ರದೇಶ ಕುರುಬರ ಸಂಘದ ಜಿಲ್ಲಾ ಅಧ್ಯಕ್ಷರಾದ ಗುರುನಾಥ್ ಪೂಜಾರಿ, ಮಹಿಳಾ ಜಿಲ್ಲಾಧ್ಯಕ್ಷರಾದ ನಿರ್ಮಲ ಬರಗಾಲಿ,

ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಯಲ್ಲಾಗುಂಡ ಹಿರೇಕುರು ಅರ್ಜುನ್ ಹತ್ತಿ, ಗಣಪತಿ ಮೀಣಜಗಿ, ರವಿ ಕಟ್ಟಿಮನಿ, ತಾಲೂಕು ಅಧ್ಯಕ್ಷರಾದ ಬಸವರಾಜ್ ಹೊಸಳ್ಳಿ, ಲಕ್ಷ್ಮಣ ಪೂಜಾರಿ, ಸಮಾಜದ ಮುಖಂಡರುಗಳಾದ ಸುಭಾಷ್ ಚಂದ್ರ ಸಂಭಾಜಿ, ಪರಮೇಶ್ ಅಲಗೂಡ, ಕುಪೇಂದ್ರ ಬರ್ಗಾಲಿ, ನಾಗೇಶ್ ಮುಚಖೇಡ, ಬಂಗಾರೆಪ್ಪ ಆಡಿನ್, ನಾಗೇಂದ್ರಪ್ಪ ವಕೀಲ್, ಶರಣು ಬೇಲೂರ್, ಶಿವಾನಂದ ಮಾರ್ಕಂಡೆ, ರಾಜು ಟಾಕಿ, ಪ್ರಕಾಶ್ ಕೂರ್ನಳ್ಳಿ, ಸಿದ್ದು ಕನಕ, ಜಗನ್ನಾಥ ಆಲೂರು, ಮಹಿಳಾ ಸಂಘಟನೆಯ ಸುವರ್ಣ, ಮಾಯಶ್ರೀ, ಸಂಗೀತ ಪೂಜಾರಿ, ರಾಜೇಶ್ವರಿ ಪೂಜಾರಿ ಸೇರಿದಂತೆ ಇತರರು ಇದ್ದರು.

# ಸನಾತನ ಹಿಂದೂ ಧರ್ಮ ಯಾವುದೇ ಮತ ಪಂಗಡಗಳಿಗೆ ಮತ್ತು ಸೀಮಿತವಲ್ಲ

• **ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:**

ಸನಾತನ ಹಿಂದೂ ಧರ್ಮ ಯಾವುದೇ ಮತ ಪಂಗಡಗಳಿಗೆ ಮತ್ತು ಸೀಮಿತವಲ್ಲ ಸಮಾಜದಿಂದ ರಾಷ್ಟ್ರ ಬಲಿಷ್ಠವಾಗುತ್ತದೆ. ಹಿಂದೂ ಧರ್ಮ ವಿಶ್ವದ ಸಮಸ್ತ ಜನತೆ ಜೀವನ ಪದ್ಧತಿಯಾಗಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜಿಲ್ಲಾ ಕಾರ್ಯವಾಹ ಭಾರ್ಗವಾಚಾರ್ಯ ಹೇಳಿದರು.

ತಾಲೂಕಿನ ಮುಧೋಳ(ಬ) ಗ್ರಾಮದ ಮಹಾದೇವ ಮಂದಿರದಲ್ಲಿ ಇತ್ತೀಚಿಗೆ ಹಿಂದೂ ಸಮ್ಮೇಳನ ವತಿಯಿಂದ ಹಮ್ಮಿಕೊಂಡಿದ್ದ ವಿರಾಟ ಹಿಂದೂ ಸಮಾವೇಶದಲ್ಲಿ ಮಾತನಾಡಿದರು. ಸಂಘ ಸಮಾಜವನ್ನು ಜಾಗೃತಿ ಮಾಡುವ ಕೆಲಸ ಮಾಡುತ್ತಿದೆ. ವಿನಹ ಸಮಾಜವನ್ನು ಜಾತಿ ಹೆಸರಿನಲ್ಲಿ ಒಡೆಯುತ್ತಿಲ್ಲ. ಪಂಚ ಪರಿವರ್ತನೆ ಮೂಲಕ ರಾಷ್ಟ್ರದ ಗೌರವವನ್ನು ಹೆಚ್ಚಿಸುವ ಕಾರ್ಯ ಸಂಘ ಮಾಡುತ್ತಿದೆ ಎಂದರು.

ಕುಟುಂಬದಲ್ಲಿ ಪರಿವರ್ತನೆ, ಸಾಮಾಜಿಕ ಸಾಮರಸ್ಯ, ಪರಿಸರ




ಸಂರಕ್ಷಣೆ, ನಾಗರೀಕ ಶಿಷ್ಟಾಚಾರ ಮತ್ತು ಸ್ವದೇಶಿ ಜೀವನದ ಮೂಲಕ ಸಮಾಜದಲ್ಲಿ ಆದರ್ಶ ವ್ಯಕ್ತಿಯನ್ನಾಗಿ ಬದುಕುವ ಉದ್ದೇಶ ನಮ್ಮೆಲ್ಲರದಾಗಿದೆ ಎಂದರು.

ಸಭೆ ಸಾನ್ನಿಧ್ಯ ವಹಿಸಿದ ಹಡಗಾಪುರ ಮಠದ ಪೀಠಾಧಿಕಾರಿ ದಾರುಕಲಿಂಗ ಸ್ವಾಮಿ ಮಾತನಾಡಿ, ಯಾರು ದೃಢ ನಿಶ್ಚಯ ಮಾಡಿ ಯಾವುದೇ ಕಷ್ಟ ಬಂದರೂ, ಸತ್ಯವನ್ನು ಬಿಡದೆ ನಿಲ್ಲುವರೂ, ಅವರೇ ನಿಜವಾದ ಸತ್ಪುರುಷರು. ಈ ಸತ್ಯ ನಿಷ್ಠೆ ನಿಜವಾದ ಶಕ್ತಿಯಾಗಿದೆ. ಸಮಾಜ ಒಡೆಯುವ ಶಕ್ತಿಯನ್ನು ಹಿಮ್ಮೆಟ್ಟಿಸಿ ಸತ್ಯ, ಸುಂದರ ಮತ್ತು ಸ್ವಚ್ಛ ರಾಷ್ಟ್ರ ನಿರ್ಮಾಣದ ಕನಸು ಸಾಕಾರಗೊಳಿಸಲು ನಾವೆಲ್ಲರು ಒಂದಾಗಬೇಕು ಎಂದು ಹೇಳಿದರು.

ಕಾರ್ಯಕರ್ತ ರಾಜೇಂದ್ರ ಪಾಂಚಾಳ ಪ್ರಾಸ್ತಾವಿಕ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಂತೆಪ್ಪ ಶಂಕು, ರಾಜಕುಮಾರ ಬಿಚ್ಚುಕುಂದೆ, ಸುಭಾಷ ಪಂಚವಾರೆ, ದೇವರಾವ ಗೊಂದಳಿ, ಅಪೂರ್ಣ ಬಿಚ್ಚುಕುಂದೆ, ಯಮುನಾಬಾಯಿ ಪಂಚಾಳ, ಸೇರಿದಂತೆ ಭಜನೆ ಮಂಡಳಿ, ಕೋಲಾಟ ಕಲಾವಿದರು, ಮತ್ತು ಗೊಂದಳಿ ಸಮಾಜದ ಪ್ರಮುಖರು ಎಲ್ಲರೂ ಸೇರಿ ಭವ್ಯ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು, ಮೆರವಣಿಗೆಯಲ್ಲಿ ಸ್ವಾಮಿ ವಿವೇಕಾನಂದ, ರಾಮ ಲಕ್ಷ್ಮಣ ರೂಪಕ ಎಲ್ಲರ ಗಮನ ಸೆಳೆಯಿತು.ಗುರುನಾಥ ಸ್ವಾಗತಿಸಿದರು. ನಾಗನಾಥ ಶಂಕು ನಿರೂಪಿಸಿದರು.

# ಔರಂಗಾಬಾದನ ಮರಾಠವಾಡಾ ವಿಶ್ವವಿದ್ಯಾಲಯಕ್ಕೆ ತ್ಯಾಗ, ಬಲಿದಾನದಿಂದ ನಾಮಾಂತರ

• **ಮಲ್ಲಮ್ಮ ನುಡಿ ವಾರ್ತೆ,ಬಸವಕಲ್ಯಾಣ :**

ಬಸವಕಲ್ಯಾಣದ ಬಸವ ಶಿಕ್ಷಣ ಸಂಸ್ಥೆಯ ಡಾ॥ ಅಂಬೇಡ್ಕರ್ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಔರಂಗಾಬಾದ (ಈಗಿನ ಛತ್ರಪತಿ ಸಂಭಾಜಿ ನಗರ) ನಲ್ಲಿನ ಡಾ.ಬಾಬಾಸಾಹೇಬ ಅಂಬೇಡ್ಕರ್ ಮರಾಠವಾಡಾ ವಿಶ್ವವಿದ್ಯಾಲಯದ ನಾಮಾಂತರ ದಿನದ ಸಂಭ್ರಮದ ಅಂಗವಾಗಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನರಸಿಂಗರಾವ ಕಾಂಬಳೆ ಅವರು ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಭಾವಚಿತ್ರ ಹಾಗೂ ಭವ್ಯ ಪ್ರತಿಮೆಗೆ ಪೂಜೆ ಸಲ್ಲಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಜೈಶೇನಪ್ರಸಾದ ಅವರು ಮಾತನಾಡಿ,ಔರಂಗಾಬಾದನ ವಿಶ್ವವಿದ್ಯಾಲಯಕ್ಕೆ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಹೆಸರಿಡಬೇಕೆಂದು ಸತತವಾಗಿ 20 ವರ್ಷಗಳ ಅಧಿಕ ಅನೇಕ ದಲಿತರು ಹೋರಾಟ ಮಾಡಿದರು. ಈ ಹೋರಾಟದಲ್ಲಿ ದಲಿತರು ತಮ್ಮ ಪ್ರಾಣವನ್ನೇ ತ್ಯಾಗ ಮಾಡಿ, ಹೋರಾಟವನ್ನು ಚುರುಕುಗೊಳಿಸಿದರು. 20 ವರ್ಷಗಳ ಅಧಿಕ, ತ್ಯಾಗ, ಬಲಿದಾನದ ಮೂಲಕ 1994 ಜನವರಿ 14 ರಂದು ಅಂದಿನ ಸರಕಾರವು ಔರಂಗಾಬಾದ ವಿಶ್ವವಿದ್ಯಾಲಯಕ್ಕೆ ಡಾ.ಬಾಬಾಸಾಹೇಬ ಅಂಬೇಡ್ಕರ್ ಹೆಸರಿಡುವ ಮೂಲಕ ನಾಮಾಂತರ ಮಾಡಲಾಯಿತು ಎಂದರು. ಈ ಸಂದರ್ಭದಲ್ಲಿ, ಶ್ರೀಧರ ಛಲವಾದಿ, ಶೇಖ ಎಸ್.ಕೆ., ವಿಜಯಕುಮಾರ ರಾಯಪಳ್ಳೆ, ಸತೀಶ ಕಾಂಬಳೆ, ನಿತ್ಯಾನಂದ ಮಂಠಾಳಕರ, ವಿಲಾಸ ಜಾಧವ, ಶಿವಶರಣಪ್ಪ ದೇಸಾಯಿ, ಶಿಲ್ಪಾ ಕಾಲೇಬಾಗ, ದೀಪಕ ಮೋರೆ ಹಾಗೂ ಎಲ್ಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಆಯ್ಕೆ



• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ನಗರದ ರಾಮನಗರದಲ್ಲಿ ಶ್ರೀ.ಶ್ರೀ.ಶ್ರೀ ಸವಿತಾ ನಂದನಾಥ ಸ್ವಾಮಿಜೀಗಳ ಸೂಚನೆ ಮೇರೆಗೆ ಚುನಾವಣಾಧಿಕಾರಿಗಳಾದ ಗಣೇಶ ಚಿನ್ನಾಕರ್, ಮಲ್ಲಣ್ಣ ಗೋಗಿ, ರಾಜೇಂದ್ರ ಅಷ್ಟಗಿಕರ್ ಹಾಗೂ ಮಲ್ಲಿಕಾರ್ಜುನ ಮಾನೆ ಸಮಾಜದ ಹಿರಿಯ ಮುಖಂಡರು ಮತ್ತು ಸಮಾಜ ಸರ್ವ ಸದಸ್ಯರುಗಳ ಸಮ್ಮುಖದಲ್ಲಿ ಜಿಲ್ಲಾ ಸವಿತಾ ಸಮಾಜ ಸಭೆ ನಡೆಸಿ ಈ ಸಭೆಯಲ್ಲಿ ಜಿಲ್ಲಾ ಸವಿತಾ ಸಮಾಜ ಕಲಬುರಗಿ ಅಧ್ಯಕ್ಷ ಮತ್ತು ಪದಾಧಿಕಾರಿಗಳ ಅವಿರೊಧ್ಧ ಆಯ್ಕೆ ಮಾಡಲಾಯಿತು.



ಭಾಲ್ಕಿಯ ಸಚಿವ ಖಂಡ್ರೆ ನಿವಾಸಕ್ಕೆ ಆಗಮಿಸಿದ ಕೇದಾರನಾಥದ ಜಗದ್ಗುರು ಶ್ರೀಮದ್ ಹಿಮವತ್ ಕೇದಾರ ವೈರಾಗ್ಯಸಿಂಹಾಸನಾದೀಶ್ವರ 1008 ಜಗದ್ಗುರು ಡಾ. ಭೀಮಾಶಂಕರ ಭಗವತ್ಪಾದರು. ಮಾಜಿ ಸಚಿವ ಡಾ. ಭೀಮಣ್ಣ ಖಂಡ್ರೆಯವರ ಆರೋಗ್ಯ ವಿಚಾರಿಸಿ, ಅವರು ಶೀಘ್ರ ಗುಣಮುಖ ರಾಗಲೆಂದು ಹಾರೈಸಿದರು. ಸಚಿವ ಈಶ್ವರ ಖಂಡ್ರೆ ಇದ್ದರು.

# ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳೋಣ :ಸಿದ್ದಲಿಂಗಪ್ಪ ಶ್ಯಾಗೋಟಿ..

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ಮಂಗಳೂರಿನ ಕರ್ನಾಟಕ ಪಬ್ಲಿಕ್ ಶಾಲೆ (ಪ್ರಾಥಮಿಕ ವಿಭಾಗ) ಯಲ್ಲಿ ಹಮ್ಮಿಕೊಂಡಿದ್ದ ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ ಹಾಗೂ ವಿವಿಧ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣಾ ಸಮಾರಂಭದಲ್ಲಿ ವಿಶ್ವಬಂಧು ಸೇವಾ ಗುರುಬಳಗದ ಮುಖ್ಯಸ್ಥರಾದ ಸಿದ್ದಲಿಂಗಪ್ಪ ಶ್ಯಾಗೋಟಿ ರವರು ಮಾತನಾಡಿ ಭಾರತದ ಸನಾತನ ಧರ್ಮ, ಸಂಸ್ಕೃತಿ, ಪರಂಪರೆಯನ್ನು ಜಗತ್ತಿಗೆ ಸಾರಿದ ಮಹಾನ್ ವ್ಯಕ್ತಿ ಸ್ವಾಮಿ ವಿವೇಕಾನಂದರು.. ವಿದ್ಯಾರ್ಥಿಗಳು ಗುರಿಯನ್ನು ಹೊಂದಿ ಏಕಾಗ್ರತೆಯಿಂದ ಅಧ್ಯಯನ ಮಾಡಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ತಿಳಿಸಿ ಸ್ವಾಮಿ ವಿವೇಕಾನಂದರು ಮಹಾನ್ ವ್ಯಕ್ತಿಗಳಿಗೆ ಸ್ಪೂರ್ತಿ ಹಾಗೂ ಆದರ್ಶವಾಗಿದ್ದಾರೆ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾರುತಿ ಹಾದಿಮನಿ ರವರು ಸ್ವಾಮಿ ವಿವೇಕಾನಂದರ ಕುರಿತು ಉಪನ್ಯಾಸ ನೀಡಿದರು.. ನೌಕರರ ಸಂಘದ ಖಜಾಂಚಿಗಳಾದ ಬಸವರಾಜ ಬೆಲ್ಲದ, ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ಮಂಗಳೇಶ ಯಲಿಗಾರ, ಪ್ರೌಢಶಾಲಾ ಮುಖ್ಯ ಶಿಕ್ಷಕರಾದ ಹನಮಂತಪ್ಪ ಅವರಾದಿ ರವರು ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಶಾಲೆಯ ಮುಖ್ಯ ಶಿಕ್ಷಕರಾದ ಶಕುಂತಲಾ ಪಾಟೀಲ್ ರವರು ಮಾತನಾಡಿ ವಿಶ್ವಬಂಧು ಸೇವಾ ಗುರುಬಳಗದ ಸೇವಾ ಕಾರ್ಯಗಳಿಗೆ



ಮೆಚ್ಚುಗೆ ವ್ಯಕ್ತಪಡಿಸಿದರು.

ವಿವಿಧ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಾದ ಶಿವಪ್ಪ ಉಪ್ಪಾರ, ಸಮೂಹ ಸಂಪನ್ಮೂಲ ವ್ಯಕ್ತಿ ರವಿ ಮಳಗಿ, ಶಾಲೆಯ ಶಿಕ್ಷಕರು ಬಳಗದ ಬಸವರಾಜ ಸಿದ್ರಾಹುತ, ಶಿವಪ್ಪ ದುರಗಪ್ಪ ಉಪಸ್ಥಿತರಿದ್ದರು ಬಳಗದ ಪ್ರಮುಖರಾದ ಮಹಾವೀರ ಕಲ್ಭಾವಿ ರವರು ನಿರೂಪಿಸಿದರು, ಮಂಜುನಾಥ ಕೊಡಕೇರಿ ರವರು ಪ್ರಾಸ್ತಾವಿಕವಾಗಿ ಮಾತನಾಡಿದರು, ಬಾಬುಸಾಬ ಗುಡಿಹಿಂದಲ್ ವಂದಿಸಿದರು.

# ಸಂಕ್ರಾಂತಿ ರಜೆಯಂದು ಮೋಜು ಮಾಡುತ್ತಿರುವ ಪ್ರವಾಸಿಗರು

• **ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ :**



ದಕ್ಷಿಣದಕಾಶಿಎಂದೇಖ್ಯಾತಿಯಾಗಿರುವ ಶ್ರೀ ಕ್ಷೇತ್ರ ಗೋಕರ್ಣಕ್ಕೆ ಪ್ರತಿದಿನ ಸಾವಿರಾರು ಪ್ರವಾಸಿಗರು ಹಾಗೂ ಭಕ್ತರು ಆಗಮಿಸುತ್ತಾರೆ. ರಜಾ ಅವಧಿಯಲ್ಲಿ ಎಲ್ಲಿ ನೋಡಿದರೂ ಗೋಕರ್ಣದ ಬೀಚ್‌ಗಳಲ್ಲಿ ಪ್ರವಾಸಿಗರೇ ಕಂಡುಬರುತ್ತಾರೆ. ಮಕರ ಸಂಕ್ರಾಂತಿಯ ನಿಮಿತ್ತ ಗುರುವಾರ ರಜೆ ಇರುವುದರಿಂದ ಮುಖ್ಯ ಕಡಲತೀರದಲ್ಲಿ ಒಂಟೆ, ಕುದುರೆಯ ಮೂಲಕ ಸವಾರಿ ಹಾಗೂ ಸಮುದ್ರದಲ್ಲಿಯೂ ಬೋಟ್ ಮೂಲಕ ದಿನವನ್ನು ಕಳೆದರು.

ಸಂಕ್ರಾಂತಿ ಹಬ್ಬದ ರಜಾ ದಿನದ ಹಿನ್ನೆಲೆಯಲ್ಲಿ ಗುರುವಾರ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಗೋಕರ್ಣದಲ್ಲಿ ಕಂಡುಬರುತ್ತಿದ್ದಾರೆ. ಅದರಲ್ಲಿಯೂ ಸುಲಭ ಎಂದರೆ ಮುಖ್ಯ ಕಡಲತೀರ. ಶ್ರೀ ಮಹಾಬಲೇಶ್ವರ ದೇವಸ್ಥಾನದಲ್ಲಿ 150 ಮೀ. ಅಂತರದಲ್ಲಿಯೇ ಮುಖ್ಯ ಕಡಲತೀರ ಇರುವುದರಿಂದ ಸಹಜವಾಗಿಯೇ ಪ್ರವಾಸಿಗರಿಗೆ ಹಾಗೂ ಭಕ್ತರಿಗೆ ಇಲ್ಲಿಗೆ ತೆರಳಲು ಅನುಕೂಲವಾಗಿದೆ. ಈ ಕಡಲತೀರವು ಅತ್ಯಂತ ಸುರಕ್ಷಿತವಾಗಿದ್ದು, ಜನರು ಇರುವುದರಿಂದ ಯಾವುದೇ ರೀತಿಯ ಭಯ ಇರುವುದಿಲ್ಲ.

ಕೆಲವು ಬೀಚ್‌ಗಳಿಗೆ ನಡೆದುಕೊಂಡು ಹೋಗಬೇಕಾಗಿರುವುದರಿಂದ ಅಲ್ಲಲ್ಲಿ ಅಭದ್ರತೆಗಳು ಕೂಡ ಉಂಟಾಗುತ್ತವೆ. ಆದರೆ ಅದು ಸ್ಥಳೀಯರಿಂದಲ್ಲ. ಹೊರಗಿನಿಂದ ಬಂದ ಪ್ರವಾಸಿಗರ ಗುಂಪು. ಪ್ರವಾಸಕ್ಕೆಂದು ಬಂದ ಹುಡುಗಿಯರನ್ನು ಚುಡಾಯಿಸುವ ಕಾರ್ಯವು ಆಗಾಗ ನಡೆಯುತ್ತದೆ. ಹೀಗಾಗಿ ಕೆಲವರು ಕೇವಲ ಮುಖ್ಯ ಕಡಲತೀರಕ್ಕೆ ಬರುತ್ತಾರೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಜೋಡಿ ಪ್ರವಾಸಿಗರೇ ಇರುವುದರಿಂದ ಹಾಗೂ ಗುಂಪು ಗುಂಪಾಗಿ ಬರುವುದರಿಂದ ಅಂತಹ ದೊಡ್ಡ ಮಟ್ಟದ ಆತಂಕವಿಲ್ಲ.

ಗೋಕರ್ಣ ಕೇವಲ ಧಾರ್ಮಿಕ ಹಾಗೂ ಪ್ರವಾಸಿ ತಾಣದ ಜತೆಗೆ ಇಲ್ಲಿಯ ಬೆಟ್ಟಗುಡ್ಡಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಕೆಲವು ಬೀಚ್‌ಗಳಿಗೆ ತೆರಳಬೇಕಾದರೆ ಹೊಸ ಮರಗಳು ಕಂಡುಬರುತ್ತವೆ. ಹೀಗಾಗಿ ನೆರಳಿದ್ದಲ್ಲಿ ಪ್ರವಾಸಿಗರು ತೆರಳಿ ಆಯಾಸವನ್ನು ನೀಗಿಸಿಕೊಳ್ಳುತ್ತಾರೆ. ಇನ್ನು ಪೊಲೀಸರು ಕೂಡ ಆಯಾಕಟ್ಟಿನ ಜಾಗದಲ್ಲಿ ಸಿಸಿ ಕ್ಯಾಮರಾ ಅಳವಡಿಸಿದ್ದಾರೆ. ಪ್ರವಾಸಿಗರಿಗೆ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ಪೊಲೀಸ್ ಠಾಣೆಯಲ್ಲಿಯೇ ಕುಳಿತು ಸಿಸಿ ಟಿವಿ ವೀಕ್ಷಣೆ ನಡೆಸುತ್ತಾರೆ. ಇನ್ನು ಮಾರ್ಚ್, ಏಪ್ರಿಲ್, ಮೇ, ತಿಂಗಳಲ್ಲಿ ಕೆಲವರಿಗೆ ರಜಾ ಇರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಗೋಕರ್ಣಕ್ಕೆ ಬಂದರೂ ಇಲ್ಲಿಯೇ ವಾಸ್ತವ್ಯ ಎಲ್ಲರೂ ಮಾಡುವುದಿಲ್ಲ. ಬಾಡಿಗೆ ವಾಹನ ಪಡೆದು ಕುಮಟಾ, ಮುರ್ಡೇಶ್ವರ, ಯಾಣ, ಇಡಗುಂಜಿ, ಕಾರವಾರ ಸೇರಿದಂತೆ ವಿವಿಧ ಸ್ಥಳಗಳಿಗೆ ತೆರಳುತ್ತಾರೆ. ಆದರೆ ಕೆಲವರು ಹೋಮ್‌ಸ್ಟೇಗಳನ್ನು ಹೆಚ್ಚು ಮಾಡಿಕೊಂಡಿದ್ದಾರೆ. ಕ್ರಿಸ್‌ಮಸ್ ಮತ್ತು ಹೊಸವರ್ಷಾಚರಣೆಯಲ್ಲಿ ಮಾತ್ರ ಜನರು ಇಲ್ಲಿ ವಾಸ್ತವ್ಯ ಮಾಡುತ್ತಾರೆ. ಆಗ ಪ್ರತಿಯೊಂದು ರೂಮಿಗೂ ಮೂರು, ನಾಲ್ಕು ಪಟ್ಟು ದರ ಜಾಸ್ತಿ ಮಾಡುತ್ತಾರೆ. ಆದರೆ ಉಳಿದ ಸಮಯದಲ್ಲಿ ಕೆಲವು ಹೋಮ್‌ಸ್ಟೇಗಳು ಖಾಲಿ ಇರುವ ಪರಿಸ್ಥಿತಿಯಿದೆ.

ಪ್ರವಾಸಿಗರು ಮತ್ತು ಭಕ್ತರ ಬಗ್ಗೆ ಪೊಲೀಸ್ ಇಲಾಖೆ ಸದಾ ನಿಗಾ ಇಟ್ಟಿದೆ. ಕೆಲವು ಆಯಾಕಟ್ಟಿನ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಆದರೆ ಪ್ರವಾಸಿಗರು, ಭಕ್ತರು ಕೂಡ ತಮ್ಮ ಕರ್ತವ್ಯವನ್ನು ಮರೆಯಬಾರದು. ನಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ವ್ಯವಸ್ಥೆಗಳನ್ನು ನಾವು ಮಾಡಿಕೊಂಡಿದ್ದೇವೆ. ಗೋಕರ್ಣಕ್ಕೆ ಪ್ರತಿದಿನ ಸಾವಿರಾರು ಭಕ್ತರು ಹಾಗೂ ಪ್ರವಾಸಿಗರು ಬರುವುದು ಸಾಮಾನ್ಯ.

**ಶ್ರೀಧರ ಎಸ್.ಆರ್**
**ಪೊಲೀಸ್ ನಿರೀಕ್ಷಕರು ಗೋಕರ್ಣ**

# ಸರ್ವೋಚ್ಚ ನ್ಯಾಯಾಧೀಶರಿಂದ ಮಲ್ಲಪ್ಪ ಸಂಕಿನ್ ಗೆ ವಿಶೇಷ ಸನ್ಮಾನ.



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷನಾಗಿ ಸತತ 2ನೇ ಬಾರಿಗೆ ಚುನಾಯಿತನಾಗಿರುವ ಮಲ್ಲಪ್ಪ ಸಂಕಿನ್ ರವರಿಗೆ ಡಾ.ಸಿದ್ಧರಾಜ ರೆಡ್ಡಿ ಸಂಪಾದಕತ್ವದಲ್ಲಿ ನೂತನವಾಗಿ ಆರಂಭಿಸಿರುವ ಗಿರಿ ದರ್ಶನ ಕನ್ನಡ ದಿನಪತ್ರಿಕೆಯ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ವಿಶೇಷ ಸನ್ಮಾನ ಮಾಡಲಾಯಿತು.

ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಾಲಯದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಡಾ.ಶಿವರಾಜ ಪಾಟೀಲ್ ಅವರು ಸನ್ಮಾನಿಸಿದರು.

ಖಾಸಾಮಠದ ಶ್ರೀ ಶಾಂತವೀರ ಗುರುಮುರುಘರಾಜೇಂದ್ರ ಸ್ವಾಮೀಜಿ ಅವರು ಸಾನ್ನಿಧ್ಯ ವಹಿಸಿದ್ದರು. ಶಾಸಕರಾದ ಚೆನ್ನಾರೆಡ್ಡಿ ಪಾಟೀಲ್, ಶರಣಗೌಡ ಕಂದಕೂರ, ಪ್ರೊ. ಚೆನ್ನಾರೆಡ್ಡಿ ಪಾಟೀಲ್ ಕುರಕುಂದ, ಡಾ.ಸಿ.ಎಂ. ಪಾಟೀಲ್, ಚನ್ನಪ್ಪಗೌಡ ಮೋಸಂಬಿ, ಮಹೇಶರೆಡ್ಡಿ ಮುದ್ನಾಳ, ಜಿಲ್ಲಾ ಕನ್ನಡ ಪತ್ರಿಕಾ ಸಂಪಾದಕರ ಅಧ್ಯಕ್ಷ ಸಿದ್ದಪ್ಪ ಲಿಂಗೇರಿ, ಡಾ. ಸಿದ್ಧರಾಜ ರೆಡ್ಡಿ ಸೇರಿದಂತೆ ಇನ್ನಿತರರಿದ್ದರು.

# ಸಹಸ್ರಾರು ಭಕ್ತರ ಮಧ್ಯೆ ಜರುಗಿದ ಮಲ್ಲಯ್ಯನ ಜಾತ್ರೆ

ವರದಿ: ಡಿ.ಕೆ. ದೇವಿಂದ್ರ
ಯಾದಗಿರಿ.

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಉತ್ತರ ಕರ್ನಾಟಕ ಹಾಗೂ ನೆರೆ ರಾಜ್ಯಗಳ ಭಕ್ತರ ಆರಾಧ್ಯದೈವನಾಗಿರುವ ತಾಲ್ಲೂಕಿನ ಮೈಲಾಪೂರದ ಬೆಟ್ಟದ ಮೇಲಿರುವ ಗುಹಾಂತರದಲ್ಲಿ ನೆಲೆಸಿರುವ ಮೈಲಾರಲಿಂಗೇಶ್ವರನ ಜಾತ್ರೆ ಬುಧವಾರ ಮಕರ ಸಂಕ್ರಮಣ ದಿನದಂದು ಸಹಸ್ರಾರು ಭಕ್ತರ ಮಧ್ಯೆ ಶಾಂತಿಯುತವಾಗಿ ಜರುಗಿತು.

ವರ್ಷದಲ್ಲಿ ಮಕರ ಸಂಕ್ರಾಂತಿ ಹಾಗೂ ದೀಪಾವಳಿ ದಿನದಂದು 2 ಭಾರಿ ಮಲ್ಲಯ್ಯನ ಜಾತ್ರೆ ಜರುಗುತ್ತದೆ, ಆದರೆ ಮಕರ ಸಂಕ್ರಾಂತಿ ದಿನದಂದು ಜರುಗುವ ಜಾತ್ರೆಗೆ ಕರ್ನಾಟಕ, ತೆಲಂಗಾಣ, ಮಹಾರಾಷ್ಟ್ರ, ಆಂಧ್ರಪ್ರದೇಶ ಸೇರಿದಂತೆ ನಾನಾ ಭಾಗಗಳಿಂದ ಲಕ್ಷಾಂತರ ಭಕ್ತರು ರವಿವಾರದಿಂದಲೇ ಮೈಲಾಪೂರಕ್ಕೆ ಆಗಮಿಸಿ, ಚಳಿಯನ್ನು ಲೆಕ್ಕಿಸದೇ ಜಾತ್ರೆಯಲ್ಲಿ ಪಾಲ್ಗೊಂಡರು.

ಇಂದು ಬೆಳಿಗ್ಗೆ 6 ಗಂಟೆಯಿಂದಲೇ ಅಸಂಖ್ಯಾತ ಭಕ್ತರ ಪವಿತ್ರ ಹೊನ್ನಕೆರೆಯಲ್ಲಿ ಪುಣ್ಯ ಸ್ನಾನ ಮಾಡಿ, ದೇವರ ದರ್ಶನ ಪಡೆಯಲು ಗಂಟೆಗಳ ಕಾಲ ಸರಧಿಯಲ್ಲಿ ನಿಂತು ಮಲ್ಲಯ್ಯನಿಗೆ ಏಳು ಕೋಟಿಗೆ, ಏಳು ಕೋಟಿಗೆ ಎಂಬ ಜೈಕಾರ ಹಾಕುತ್ತ ಉಲ್ಲಾಸದಿಂದ ಗದ್ದಲದ ನಡುವೆ ಗುಹಾಂತರ ದೇವಾಲಯ ತಲುಪಿ ಮಲ್ಲಯ್ಯನ ದರ್ಶನ ಪಡೆದು ಬೆಳ್ಳಿ, ಬಂಗಾರ, ಹಣವನ್ನು ದೇವರ ಹುಂಡಿಯಲ್ಲಿ ಹಾಕಿ ಭಕ್ತಿ ಸಮರ್ಪಿಸಿದರು.

ಜಾತ್ರೆಗೆ ಬರುವ ಸಕಲ ಭಕ್ತರಿಗೆ ಮಲ್ಲಯ್ಯನ ದರ್ಶನವಾಗಲಿ ಎಂದು ಜಿಲ್ಲಾಡಳಿತ ತಲಾ 300 ರೂ. ಟಿಕೇಟ್ ದರ ನಿಗಧಿಪಡಿಸಿರುವುದರಿಂದ ಅಲ್ಲಿಯೂ ಕೂಡ ಭಕ್ತರು ಜನಸಂದಣಿ ಮಧ್ಯೆ ದರ್ಶನ ಪಡೆದರು.

ಗ್ರಾಮೀಣ ಭಾಗದಿಂದ ರೈತ ಕುಟುಂಬಗಳು ದೇವಸ್ಥಾನ ಕೆಳಗೆ ಅಲ್ಲಲ್ಲಿ ಗುಂಪು-ಗುಂಪಾಗಿ ಅಡುಗೆ ಮಾಡಿ, ಮಲ್ಲಯ್ಯನಿಗೆ ನೈವೇದ್ಯ ಅರ್ಪಿಸಿ, ಅಲ್ಲಿದ್ದ ವಗ್ಗರು ಹಾಗೂ ಕೆಲ ಜನರಿಗೆ ಊಟ ಮಾಡಿಸುತ್ತಿರುವುದು ಕಂಡು ಬಂದಿತು, ಮಧ್ಯಾಹ್ನ 12 ಗಂಟೆಯ ನಂತರ ಧಾರ್ಮಿಕ ಸಂಪ್ರದಾಯದಂತೆ ದೇವಸ್ಥಾನದಿಂದ ಮಲ್ಲಯ್ಯನ ಕುದುರೆ ಹಾಗೂ ಪಲ್ಲಕ್ಕಿಯಲ್ಲಿ ಮೂರ್ತಿಯನ್ನು ಭವ್ಯ ಮೆರವಣಿಗೆಯ ಮೂಲಕ ಬೆಟ್ಟದ ಮೇಲಿಂದ ಹೊನ್ನಕೆರೆಗೆ ತೆರಳಿದರು, ಈ ಸಂದರ್ಭದಲ್ಲಿ ಗ್ರಾಮೀಣ ಭಾಗದಿಂದ ಆಗಮಿಸಿದ ಭಕ್ತರು ತಮ್ಮ ಜಮೀನಿನಲ್ಲಿ ಬೆಳೆದಿದ್ದ ಭತ್ತ, ಜೋಳ, ಶೇಂಗಾ, ಸಜ್ಜೆ ಇನ್ನಿತರ ಬೆಳೆಗಳನ್ನು ಮೇಲೆ ಎಸೆದು ತಮ್ಮ ಭಕ್ತಿ ಅರ್ಪಿಸಿದರು.

ಹೊನ್ನಕೆರೆಗೆ ತೆರಳಿದ ಪಲ್ಲಕ್ಕಿ ಪೂಜಾರಿಗಳು ಪೊಲೀಸರ ಬಿಗಿ ಭದ್ರತೆಯಲ್ಲಿ ಮಲ್ಲಯ್ಯನ ಮೂರ್ತಿ ಹಾಗೂ ಕುದುರೆಯನ್ನು ಪುಣ್ಯ ಸ್ನಾನ ಮಾಡಿಸಿ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ, ಮೆರವಣಿಗೆ ಮೂಲಕ ದೇವಸ್ಥಾನ ಕೆಳಗೆ ಇರುವ ಪಾದಗಟ್ಟೆಗೆ ಆಗಮಿಸಿತು.

ಈ ಸಮಯದಲ್ಲಿ ಮೊದಲಿನ ಸಂಪ್ರದಾಯದಂತೆ ಅನುಭವಿ ಪೂಜಾರಿಯಿಂದ ಸರಪಳಿ ಹರಿದರು, ಈ ಸಂದರ್ಭದಲ್ಲಿ ಇಡೀ ಪ್ರದೇಶ ಬಂಡಾರ ಎರೆಚಿರುವುದರಿಂದ ಹಳದಿಮಯವಾಗಿತ್ತು, ನಂತರ ಪಲ್ಲಕ್ಕಿ ಮೆಟ್ಟಿಲುಗಳ ಮೂಲಕ ಬೆಟ್ಟದ ಮೇಲಿರುವ ಗುಹಾಂತರ ದೇವಸ್ಥಾನ ತಲುಪಿ, ಪಲ್ಲಕ್ಕಿ ದೇವಸ್ಥಾನ ಗರ್ಭಗುಡಿ ಪ್ರದಕ್ಷಣೆಯೊಂದಿಗೆ ಮೂಲ ಸ್ಥಳದಲ್ಲಿ ಸ್ಥಾಪಿಸಲಾಯಿತು.

# ಮೈಲಾರಲಿಂಗೇಶ್ವರ ಜಾತ್ರೆಯಲ್ಲಿ ಕಾನೂನು ಅರಿವು.



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ಜಿಲ್ಲೆಯ ಮೈಲಾಪುರ ಗ್ರಾಮದ ಮೈಲಾರಲಿಂಗೇಶ್ವರ ಜಾತ್ರೆಯಲ್ಲಿ ಯಾದಗಿರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಉಚಿತ ಕಾನೂನು ಸಲಹಾ ಕೇಂದ್ರ ಪ್ರಾರಂಭಿಸಿದ್ದು , ಸದರಿ ಕೇಂದ್ರಕ್ಕೆ ಸರ್ವೋಚ್ಚನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಗೌರವಾನ್ವಿತ ಶ್ರೀ ಶಿವರಾಜ್ .ವಿ. ಪಾಟೀಲ್ ನ್ಯಾಯಮೂರ್ತಿಗಳು ನೆರೆದಿದ್ದ ಜನರಿಗೆ ಪ್ರಾಧಿಕಾರದ ವಿವಿಧ ಯೋಜನೆಗಳ ಕರ ಪತ್ರಗಳನ್ನು ವಿತರಿಸುವ ಮೂಲಕ ಚಾಲನೆ ನೀಡಿದರು.

ಜಾತ್ರೆಯ ಅಂಗವಾಗಿ ಜಾತ್ರೆಯಲ್ಲಿ ಸೇರುವ ಜನರಿಗೆ ಕಾನೂನು ಅರಿವು ಮೂಡಿಸುವದರ ಸಲುವಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಯಾದಗಿರಿ ಶ್ರೀ ಮರುಳಾಸಿದ್ದಾರಾಧ್ಯಾ ಹೆಚ್ ಜೆ ರವರ ನಿರ್ದೇಶನದಂತೆ ಉಚಿತ ಕಾನೂನು ಸಲಹಾ ಕೇಂದ್ರವನ್ನು ಪ್ರಾರಂಭಿಸಲು ಯೋಜಿಸಲಾಗಿತ್ತು. ಜಾತ್ರೆಯಲ್ಲಿ ನೆರೆದಿದ್ದ ಜನರಿಗೆ ಓಂಐಖಂ ದ ವಿವಿಧ ಯೋಜನೆಗಳ ಕರಪತ್ರಗಳನ್ನು ಮತ್ತು ಏಖಐಖಂ ದಿಂದ ಪ್ರಕಟವಾದ ಪುಸ್ತಕಗಳನ್ನು ವಿತರಿಸಲಾಯಿತು. ಬಾಲ್ಯವಿವಾಹ ನಿಷೇಧ ಕಾಯ್ದೆ, ಖಾಯಂ ಜನತಾ ನ್ಯಾಯಾಲಯ ಮತ್ತು ರಾಷ್ಟ್ರೀಯ ಲೋಕ್ ಅದಾಲತ್ ಕುರಿತು ಧ್ವನಿಮುದ್ರಿಕೆಗಳ ಮೂಲಕ ಪ್ರಚುರಪಡಿಸಲಾಯಿತು.

ಈ ಸಂದರ್ಭದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಯಾದಗಿರಿ ಶ್ರೀ ಮರಿಯಪ್ಪ ರವರು ಹಾಗೂ ಪ್ರಾಧಿಕಾರದ ಸಿಬ್ಬಂದಿಗಳು ಹಾಗೂ ಕಾನೂನು ಸ್ವಯಂ ಸೇವಕರು ಪ್ರಾಧಿಕಾರದ ಕರ ಪತ್ರಗಳನ್ನು ಹಾಗೂ ಪುಸ್ತಕಗಳನ್ನು ವಿತರಿಸಿದರು ಅಲ್ಲದೆ ಕೇಂದ್ರಕ್ಕೆ ಭೇಟಿ ನೀಡಿದ ಜನರಿಗೆ ವಿವಿಧ ಕಾನೂನುಗಳ ಕುರಿತು ಮಾಹಿತಿ ನೀಡಿದರು.

# ಖಲೀಲುಲ್ಲಾ ಖಾನ್ ಅವರಿಗೆ ಪಿಎಚ್.ಡಿ. ಪ್ರಶಸ್ತಿ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು:

ನಗರ 13 ನೇ ವಾರ್ಡಿನ ನಿಜಾಂ ಮೊಹಲ್ಲಾ ನಿವಾಸಿ ಜಮಾತೆ ಇಸ್ಲಾಮಿ ಹಿಂದ್ ಹಿರಿಯರಾದ ಅಕ್ರಂರ ಉದ್ದೀನ್ ಖಾನ್ ರವರ ಕಿರಿಯ ಪುತ್ರ ಖಲೀಲುಲ್ಲಾ ಖಾನ್ ಅವರಿಗೆ ಇಂಗ್ಲಿಷ್ ಸಾಹಿತ್ಯದಲ್ಲಿ ಪಿಎಚ್.ಡಿ. ಪ್ರಶಸ್ತಿ ಮೈಸೂರು: ಹಾಸನ ಜಿಲ್ಲೆಯ ವಾಣಿವಿಲಾಸ ಸರ್ಕಾರಿ ಪಿಯು ಕಾಲೇಜಿನ ಇಂಗ್ಲಿಷ್ ಉಪನ್ಯಾಸಕರಾದ ಶ್ರೀ ಖಲೀಲುಲ್ಲಾ ಖಾನ್ ಅವರಿಗೆ ಮೈಸೂರು ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿ ಪ್ರದಾನ ಮಾಡಲಾಗಿದೆ.

"Cartographing Women's Lives: A Study of the Select Works of Kamala Markandaya" ಎಂಬ ಶೀರ್ಷಿಕೆಯ



ಅವರ ಸಂಶೋಧನಾ ಪ್ರಬಂಧವನ್ನು ಬೆಂಗಳೂರು ನಗರದ ಅಲ್-ಅಮೀನ್ ರಿಸರ್ಚ್ ಫೌಂಡೇಷನ್‌ನ ಇಂಗ್ಲಿಷ್ ವಿಭಾಗದ ಪ್ರಾಧ್ಯಾಪಕರಾದ ಡಾ. ಆರ್.ಬಿ. ತಮ್ಮಯ್ಯ ಅವರ ಮಾರ್ಗದರ್ಶನದಲ್ಲಿ ಪೂರ್ಣಗೊಳಿಸಲಾಗಿದೆ. ಮೈಸೂರು ವಿಶ್ವವಿದ್ಯಾಲಯದ 75ನೇ ಘಟಿಕೋತ್ಸವದಲ್ಲಿ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅವರು ಖಲೀಲುಲ್ಲಾ ಖಾನ್ ಅವರಿಗೆ ಪಿಎಚ್.ಡಿ. ಪ್ರಮಾಣಪತ್ರವನ್ನು ಪ್ರದಾನ ಮಾಡಿದರು.

# ಮಕ್ಕಳ ಹಕ್ಕುಗಳ ಗ್ರಾಮಸಭೆ ಕಾರ್ಯಕ್ರಮ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಯಾದಗಿರಿ ಜಿಲ್ಲೆಯ ಗುರಿಮಿತಕಲ್ ತಾಲೂಕಿನ ಯಂಪಾಡ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಹಕ್ಕುಗಳ ದಿನಾಚರಣೆ-ಯ ಅಂಗವಾಗಿ ಮಕ್ಕಳ ಹಕ್ಕುಗಳ ಗ್ರಾಮಸಭೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಯಾದಗಿರಿಯ ಆಪ್ತ ಸಮಾಲೋಚಕರಾದ ದೇವಪ್ಪ ಗಿರಿಗಿರಿ ಅವರು ಭಾಗವಹಿಸಿ ಮಾತನಾಡಿದರು. ಅವರು ಪ್ರತಿವರ್ಷದಂತೆ ಮಕ್ಕಳ ಹಕ್ಕುಗಳ ದಿನಾಚರಣೆಯ ಹಿನ್ನೆಲೆಯಲ್ಲಿ ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಗ್ರಾಮಸಭೆಗಳನ್ನು ನಡೆಸುವ ಮಹತ್ವವನ್ನು ವಿವರಿಸಿದರು. ಈ ವೇಳೆ ಮಕ್ಕಳ ಹಕ್ಕುಗಳು, ಮಕ್ಕಳ ಸಹಾಯವಾಣಿ 1098, ಬಾಲ್ಯವಿವಾಹ ನಿಷೇಧ ಕಾಯ್ದೆ, ಬಾಲಕಾರ್ಮಿಕ ಸಮಸ್ಯೆ ಹಾಗೂ ಮಕ್ಕಳ ರಕ್ಷಣೆಯ ಕುರಿತು ಅಗತ್ಯ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಪೋಷಕತ್ವ ಯೋಜನೆಯ ಸಂಯೋಜಕರಾದ ಕು. ನಾಗಪ್ಪ ಗಮಗ ಅವರು ಮಾತನಾಡಿ, ಬಾಲ ನ್ಯಾಯ ಕಾಯ್ದೆ 2015ರ ಕಲಂ 44ರ ಪ್ರಕಾರ ಜಾರಿಯಲ್ಲಿರುವ ಪೋಷಕತ್ವ ಯೋಜನೆಯ ಕುರಿತು ವಿವರಿಸಿದರು. ಈ ಯೋಜನೆಯಡಿ ಜೈವಿಕವಲ್ಲದ ಕುಟುಂಬಕ್ಕೆ ತಾತ್ಕಾಲಿಕವಾಗಿ ಅಥವಾ ಗರಿಷ್ಠ ಎರಡು ವರ್ಷಗಳವರೆಗೆ ಮಗುವಿನ ಪಾಲನೆ, ಪೋಷಣೆ ಹಾಗೂ ರಕ್ಷಣೆ ಕಲ್ಪಿಸುವ ಉದ್ದೇಶವಿದೆ ಎಂದು ತಿಳಿಸಿದರು. ಜೊತೆಗೆ ಶಾಲೆಯಿಂದ ಹೊರಗುಳಿದ ಮಕ್ಕಳು, ಮಕ್ಕಳ ಮೇಲಿನ ದೌರ್ಜನ್ಯ ಹಾಗೂ ಶಾಲೆಗಳ ಮೂಲಭೂತ ಸೌಕರ್ಯಗಳ ಕುರಿತು ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯಂಪಾಡ ಶಾಲೆಯ ಮುಖ್ಯಗುರುಗಳಾದ ಶ್ರೀ ಮೈಲಾರಿ ತಾತಲಗೇರಾ ಮುಖ್ಯಗುರುಗಳಾದ ಶ್ರೀ ಶರಣಪ್ಪ ಅವರು ಯಂಪಾಡ ತಾಂಡಾದ ಮುಖ್ಯ ಗುರು ಉಪಸ್ಥಿತರಿದ್ದರು. ಮೂರು ಶಾಲೆಗಳ ವಿದ್ಯಾರ್ಥಿಗಳು, ಎಸ್‌ಡಿಎಂಸಿ ಅಧ್ಯಕ್ಷರು, ಪಿಡಿಓ ಹಾಗೂ ಇತರ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಜಾವೀದ ಹುಸೇನ ಹವಲ್ದಾರ ರಾಜ್ಯ ಮಟ್ಟದ ಪ್ರಶಸ್ತಿ ಸ್ವೀಕಾರ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಹಾರೂಗೇರಿಯಲ್ಲಿ ನಡೆದ ಆಜೂರ ಪ್ರತಿಷ್ಠಾನದ ವತಿಯಿಂದ ಸುರಪುರದ ಸಾಹಿತಿಗಳಾದ ಜಾವೀದ ಹುಸೇನ ಹವಲ್ದಾರ ರವರು ರಚಿಸಿರುವ ತಂದೆ ತಾಯಿಯರ ಋಣ ಎಂಬ ಕೃತಿಗೆ ರಾಜ್ಯ ಮಟ್ಟದ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಸುರಪುರ ಸಂಸ್ಥಾನದ ಪ್ರಸ್ತುತ ಅರಸರಾದ ಡಾ.ರಾಜಾ ಕೃಷ್ಣಪ್ಪ ನಾಯಕರು ಬಲವಂತ ಬಹರಿ ಬಹದ್ದೂರ ಸಂಸ್ಥಾನ ಸುರಪುರ ರವರು, ಹಿರಿಯ ಸಾಹಿತಿಗಳಾದ ಡಿ.ಎನ್. ಅಕ್ಕಿ ಇಂಡಿ , ಭೀಮಣ್ಣ ಬೋನಾಳ ಕಲ್ಬುರ್ಗಿ, ಹರಿರಾವ್ ಅದವಾನಿ ಸುರಪುರ , ಡಾ. ಆರ್. ಬಿ. ಚಿಲುಮಿ ಧಾರವಾಡ, ಡಾ.ಲಕ್ಷ್ಮಣ ಎಸ್ ಚೌರಿ ಗೋಕಾಕ,

ಡಾ.ಅನಂತ ಮೂರ್ತಿ ಕೋಲಾರ, ಸಿದ್ಧರಾಮ ಹೊನ್ಕಲ್ ಶಹಾಪುರ, ಶ್ರೀ ಶಿವಕುಮಾರ ಮಸ್ಕಿ ಸುರಪುರ, ಶ್ರೀನಿವಾಸ ಜಾಲವಾದಿ ಸುರಪುರ , ಶರಣಬಸವ ಯಾಳವಾರ ಸುರಪುರ, ಪ್ರಕಾಶ ಚಂದ ಟಿ ಜೈನ ಸುರಪುರ, ಅಮರಯ್ಯ ಮಠ ಶಿವಮೊಗ್ಗ, ಶಕೀಲ್ ಐ ಎಸ್ ಹುಮನಾಬಾದ, ನಿಂಗನಗೌಡ ದೇಸಾಯಿ ಕೆಂಭಾವಿ,

ಪ್ರಕಾಶ ಎಸ್.ಅಂಗಡಿ ಕನ್ನೆಳ್ಳಿ, ಶೆಟ್ಟಿ ಕಾಂಪಿಟೇಶನ್ ಪ್ರೌಢ ಶಾಲೆಯ ಮುಖ್ಯಸ್ಥರಾದ ತಿರುಪತಿ ಎನ್ ಶೆಟ್ಟಿ ಮುಂತಾದವರಿದ್ದರು ಸೇರಿ ಹರ್ಷ ವ್ಯಕಪಡಿಸಿದರು.

# ಮಾಜಿ ಶಾಸಕ ಕೆ. ಮಹೇಂದ್ರಕರ್ ಅವರ 29ನೇ ಪೂಣ್ಯಸ್ಮರಣೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ:



ತಾಲ್ಲೂಕಿನ ಮದರಗಾಂವ್ ಗ್ರಾಮದಲ್ಲಿ ಹೂಲಸೂರ ಮತ ಕ್ಷೇತ್ರದ ಮಾಜಿ ಶಾಸಕ ದಿವಂಗತ್, ಕೆ. ಮಹೇಂದ್ರಕರ್ ಅವರ 29ನೇ ಪೂಣ್ಯಸ್ಮರಣೋತ್ಸವ ಕಾರ್ಯಕ್ರಮ ಜರುಗಿತು. ಮಾಜಿ ಸಚಿವ ರಾಜಶೇಖರ್ ಪಾಟೀಲ ಅವರು ದಿವಂಗತ್, ಕೆ. ಮಹೇಂದ್ರಕರ್ ಅವರ 29ನೇ ಪುಣ್ಯಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪುಷ್ಪನಮನ ಸಲ್ಲಿಸಿದರು, ಬಳಿಕ ಮಾತನಾಡಿದ ಅವರು ಮಾಜಿ ಶಾಸಕ ದಿವಂಗತ್, ಕೆ. ಮಹೇಂದ್ರಕರ್ ಅವರು ಹೂಲಸೂರ ಮತ ಕ್ಷೇತ್ರದ ಎರಡು ಬಾರಿ ಶಾಸಕರಾಗಿ ಕ್ಷೇತ್ರದಲ್ಲಿ ಹಲವಾರು ಜನಪರವಾದ ಸಮಾಜ ಮುಖಿ ಕಾರ್ಯಕ್ರಮಗಳು ಮಾಡಿದ್ದಾರೆ.

ಅವರ ಸೇವೆ ಸ್ಮರಣಿಯವಾಗಿದೆ ಎಂದು ಹೇಳಿದರು. ಕೆ.ಮಹೇಂದ್ರಕರ್ ಅವರ ಸುಪುತ್ರರು, ಮದರಗಾಂವ್ ಹಾಲು ಉತ್ಪಾದಕ ಸಹಕಾರ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಮಹೇಂದ್ರಕರ್ ಅವರು, ಅವರ ತಂದೆ ಮಹೇಂದ್ರಕರ ಅವರು ಹಾಕಿಕೊಂಟ್ಟಂತಹ ಮಾರ್ಗದಲ್ಲಿ ನಡೆಯುತ್ತಿದ್ದು, ಮುಂಬರುವ ದಿನಗಳಲ್ಲಿ ಮಲ್ಲಿಕಾರ್ಜುನ ಮಹೇಂದ್ರಕರ್ ಅವರಿಗೆ ರಾಜಕಿಯದಲ್ಲಿ ಉತ್ತಮ ಅವಕಾಶ ದೂರಕಲಿ ಎಂದು ಹಾರೈಸಿದರು. ಮೆನ್ಮಾರ ಭಿಕ್ಕು ತೆಜಾನಿ, ಅಣದೂರನ ಭಂತೆ ಸಂಘರಕ್ಷಿತ ಅವರು ದಿವ್ಯಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು, ಧರ್ಮ ಪ್ರಚಾರಕ ಧರ್ಮಣ್ಣ ಫಾಂಗ್ರೆ ಸಾನಿಧ್ಯ ವಹಿಸಿದರು. ಇದೇ ವೇಳೆ ಔರಾದ ಕ್ಷೇತ್ರದ ಕಾಂಗ್ರೆಸ್ ಹಿರಿಯ ಮುಖಂಡ ಭೀಮಸೇನರಾವ್ ಸಿಂಧೆ, ಹುಮನಾಬಾದ್ ತಾಲ್ಲೂಕು ಪಂಚಾಯಿತಿ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಬಾಬು ಟೈಗರ್ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ರಾಜಶೇಖರ್ ಪಾಟೀಲ ಮದರಗಾಂವ್, ಕ್ಷೇತ್ರ ಶಿಕ್ಷಣಾಧಿಕಾರಿ ವೇಂಕಟೇಶ ಗುಡಾಳ, ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಗೋವಿಂದ, ದಲಿತ ಸಂಘಟನೆಯುವ ಮುಖಂಡ ಲಕ್ಷ್ಮಿಪುತ್ರ ಮಾಳಗೆ, ನ್ಯಾಯವಾದಿ ವಿಜಯಕುಮಾರ ನಾತೆ, ಪ್ರಮುಖರಾದ ಮಲ್ಲಿಕಾರ್ಜುನ ಶರ್ಮಾ, ಸುರೇಶ ಘಂಗ್ರೆ, ಪ್ರಭು ತಾಳಮಡಗಿ, ಹುಲ್ಲೆಪ್ಪಾ ಪವಿತ್ರ, ಸುಂದರ್ ಸಿಂಧಬಂದಗಿ, ಶಿಕ್ಷಕ ಶಶಿಧರ ಗಾವಳಕರ್, ಸತೀಶ ರನ್ನಾಕರ್, ಸೇರಿದಂತೆ ಅನೇಕರು, ಇದ್ದರು,

ಕೆ. ಮಹೇಂದ್ರಕರ್ ಅವರ ಸುಪುತ್ರರು, ಮದರಗಾಂವ್ ಹಾಲು ಉತ್ಪಾದಕ ಸಹಕಾರ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಮಹೇಂದ್ರಕರ್ ಅವರು ಸ್ವಾಗತಿಸಿ, ವಂದಿಸಿದರು.

# ಕಲಾವಿದರನ್ನು ಪ್ರೋತ್ಸಾಹಿಸೋಣ: ಶಿವು ಬಳಿಚಕ್ರ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.




ನಮ್ಮ ರಾಜ್ಯದಲ್ಲಿ ಅನೇಕ ರೀತಿಯ ಕಲೆ, ಸಾಹಿತ್ಯ, ಸಂಸ್ಕೃತಿ ಹೊಂದಿದ ನಾಡಾಗಿದ್ದು ನಮ್ಮ ಭಾಗದ ಎಲೆಮರಿ ಕಾಯಿಯಾಗಿ ತಮ್ಮಲ್ಲಿರುವ ಕಲೆಯನ್ನು ಪ್ರದರ್ಶನ ಮಾಡುವ ಕಲಾವಿದನಿಗೆ ಪ್ರೋತ್ಸಾಹ ಮತ್ತು ಬೆಂಬಲ ನೀಡೋಣ ಎಂದು ಸಹಭಾವನ ಸೇವಾ ಸಂಸ್ಥೆಯ ಅಧ್ಯಕ್ಷ ಶಿವು ಬಳಿಚಕ್ರ ಹೇಳಿದರು. ಗುರುಮಿಟ್ಕಲ್ ತಾಲೂಕಿನ ಸುಕ್ಷೇತ್ರ ಕಾಳೆಬೆಳಗುಂದಿಯಲ್ಲಿ ಶ್ರೀ ಮಾತಾ ಭದ್ರಕಾಳಿ ಬನದೇಶ್ವರನ ಕಲ್ಯಾಣ ಮಹೋತ್ಸವ ಅಂಗವಾಗಿ ರಸಂಮಂಜರಿ ಕಾರ್ಯಕ್ರಮದಲ್ಲಿ ಖ್ಯಾತ ಗಾಯಕ ಗುಂಡು ಬಿ. ಕುಂಬಾರ್, ಹಾಸ್ಯ ಕಲಾವಿದ ದೇವರಾಜ ಯಲಿಗಬ್ಬೂರ್ ರವರಿಗೆ ಗೌರವಿಸಿ ಸನ್ಮಾನಿಸಿ ಮಾತನಾಡಿದರು. ಕಲ್ಯಾಣ ಕರ್ನಾಟಕ ಭಾಗದ ಕಲಾವಿದರನ್ನು ಪ್ರೋತ್ಸಾಹಿಸುವಲ್ಲಿ ಹಿಂದುಳಿಯಬಾರದು, ನಮ್ಮ ಭಾಗದಲ್ಲಿ ಎಲ್ಲಾ ರೀತಿಯ ಕಲಾವಿದರಗಿದ್ದು, ಸಂಪೂರ್ಣವಾಗಿ ಬೆಂಬಲಿಸಿ, ಪ್ರೋತ್ಸಾಹಿಸುವ ಮನೋಭಾವನೆಯನ್ನು ನಾವೆಲ್ಲರೂ ಬೆಳೆಸಿಕೊಳ್ಳಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ನಾಗಲಿಂಗಯ್ಯ ಸ್ವಾಮಿ ಬಳಿಚಕ್ರ, ಸಹಭಾವನ ಸೇವಾ ಸಂಸ್ಥೆಯ ಉಪಧ್ಯಕ್ಷ ಮರೆಪ್ಪ, ಸಮನ್ವಯ ಸೇವಾ ಸಂಸ್ಥೆಯ ಅಧ್ಯಕ್ಷ ಡಿ.ಕೆ. ದೇವಿಂದ್ರ, ಹಣಮಂತ ನಾಯಕ ಕೊಹಿಲೂರ್, ಮಹೆಬೂಬಸಾಬ್ ಕತ್ತೆಣೋರ್, ಇರ್ಫಾನ್ ಫೈಲ್ ಮುಂತಾದವರಿದ್ದರು.

# ಮದ್ಯಪಾನ, ಮಾರಾಟ ನಿಷೇಧ ಜಾರಿಗೆ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಯಾದಗಿರಿ ಜಿಲ್ಲೆಯ ಶಹಾಪೂರ ತಾಲ್ಲೂಕಿನ ಶ್ರೀ ಸಂಗಮೇಶ್ವರ ಮತ್ತು ಬಲಭೀಮೇಶ್ವರ ಜಾತ್ರೆ ನಿಮಿತ್ಯ ಮದ್ಯಪಾನ ಮಾರಾಟ ನಿಷೇಧಾಜ್ಞೆ ಜಾರಿಗೊಳಿಸಿ ಆದೇಶವನ್ನು ಯಾದಗಿರಿ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ಹೊರಡಿಸಿದ್ದಾರೆ.

ಈ ಜಾತ್ರೆಯ ಸಂದರ್ಭದಲ್ಲಿ ಯಾವುದೇ ತರಹದ ಅಹಿತಕರ ಘಟನೆಗಳು ನಡೆಯದಂತೆ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮುನ್ನೆಚ್ಚರಿಕೆ ಕ್ರಮವಾಗಿ ಶಹಾಪೂರ ನಗರದ ವ್ಯಾಪ್ತಿಯಲ್ಲಿ ಮದ್ಯಪಾನ, ಮದ್ಯ ಮಾರಾಟ ನಿಷೇಧಾಜ್ಞೆ ಜಾರಿಗೊಳಿಸಿ ಆದೇಶಿಸಿದೆ.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 21ರ ಪ್ರಕಾರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶಹಾಪೂರ ತಾಲ್ಲೂಕಿನಲ್ಲಿ ಶ್ರೀ ಸಂಗಮೇಶ್ವರ ಮತ್ತು

ಬಲಭೀಮೇಶ್ವರ ಜಾತ್ರಾ ಮಹೋತ್ಸವದ ನಿಮಿತ್ಯ, ಶಹಾಪೂರ ನಗರದಲ್ಲಿ 2026ರ ಜನವರಿ 15 ರಂದು ಬೆಳಿಗ್ಗೆ 6 ಗಂಟೆಯಿಂದ 2026ರ ಜನವರಿ 16ರ ಸಂಜೆ 6 ಗಂಟೆಯ ವರೆಗೆ ಎಲ್ಲಾ ವೈನ್‌ಶಾಪ್, ಬಾರ್‌ಗಳನ್ನು ಸಗಟು ಮತ್ತು

ಚಿಲ್ಲರೆ ಮದ್ಯ ಮಾರಾಟ ನಿಷೇಧಿಸಿ ಆದೇಶಿಸಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಷ್ಟ್ರೀಯ ಹೆದ್ದಾರಿ: ಸರ್ವಿಸ್ ರಸ್ತೆಗೆ ಮನವಿ




• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು:**

ಕುಶಾಲನಗರ ಶ್ರೀರಂಗಪಟ್ಟಣ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದಲ್ಲಿ ಸರ್ವಿಸ್ ರಸ್ತೆ ನಿರ್ಮಾಣ ಮಾಡಬೇಕೆಂದು ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರ್ ಕುಮಾರ್ ತಿಳಿಸಿದ್ದಾರೆ ನಗರದ ಪತ್ರಕರ್ತರ ಸಂಘದ ಕಚೇರಿಯಲ್ಲಿ ಕರೆಯಲಾಗದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಈಗಾಗಲೇ ಹೆದ್ದಾರಿಯ ಕಾಮಗಾರಿಕೆ ಬರದಿಂದ ಪ್ರಾರಂಭವಾಗಿದೆ ಸಾಗುತ್ತಿದೆ ಹೆದ್ದಾರಿ ಅಂಚಿನ ಚರಂಡಿ ನಿರ್ಮಿಸಲಾಗುತ್ತಿದೆ ಜಮೀನು ಮಧ್ಯದಲ್ಲಿರುವ ರಸ್ತೆ ಹಾದುಹೋಗಿದೆ ಕೆಲವು ಕಡೆ ರಸ್ತೆಯನ್ನು ವಿಸ್ತರಿಸಲಾಗುತ್ತಿದೆ ಕೃಷಿ ಮಾಡಲು ಜಮೀನಿಗೆ.

ಹೋಗಲು ರಸ್ತೆ ಆಗದಂತೆ ಇತಿ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿಸಿದ್ದಾರೆ ಜಮೀನಿನ ಮಧ್ಯ ರಸ್ತೆ ಹಾದು ಹೋಗಿರುವ ರೈತರ ಭೂಮಿಗೆ ಪಂಪ್‌ಸೆಟ್ ಮೂಲಕ ಮತ್ತೊಂದು ಬದಿಯ ಜಮೀನಿಗೆ ನೀರು ಹಾಯಿಸಲು ಆಗದಂತೆ ಸ್ಥಿತಿಯಾಗಿದೆ ಕೆಲವು ಕಡೆ ನಡೆಸಿಕೊಂಡು ಹೋದಂತಗಿದೆ ಇದರಿಂದ ರೈತರಿಗೆ ಕೃಷಿಯಿಂದಲೇ ವಿಮರ್ಕವಾಗದಂತವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ರೈತರಿಗೆ ಸ್ಪಂದಿಸಲಿಲ್ಲ ಈ ಸಂಪರ್ಕ ರಸ್ತೆ ಇಲ್ಲದೆ ಹಾಗೂ ಹಲವರಿಗೆ ಸೂಕ್ತ ಪರಿಹಾರ ಸಿಗದೇ ಪರಿತೃಪ್ತಿ ತುಸುತಿದ್ದಾರೆ ರೈತರ ಹಿತ ದೃಷ್ಟಿಯಿಂದ ರೈತ ಸಂಘವು ಸಂಭದಿಸಿದಂತೆ ಚುನಾಯಿದಿಗಳು ಹಾಗೂ ಅಧಿಕಾರಿಗಳಿಗೆ ಮನವಿ ಮಾಡಲಾಗುವುದು ಸ್ಪಂದಿಸದಲ್ಲಿ ತೊಂದರೆಯ ಒಳಗಿರುವ ರೈತರು ನೊಂದಿಗೆ ಸೇರಿ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.

ತಂಬಾಕುಗೆ ಬೆಲೆ ಕುಸಿಯುತಿದೆ ಅದರಿಂದ ಸೂಕ್ತ ಬೆಲೆ ಕೊಡಿಸು ಕೊಡಬೇಕೆಂದು ಸಂಸದರು ಮನೆಗಳ ಮುಂದೆ ಧರಣಿ ಹಮ್ಮಿಕೊಂಡಿದ್ದರೂ ಕೂಡ ಕೇಂದ್ರದ ಸಚಿವರು ಎಚ್ ಡಿ ಕುಮಾರಸ್ವಾಮಿ ಮೇಲೆ ಒತ್ತಡ ಹಾಕಿ ಕೂಡ ಮನವಿ ಕೂಡ ಸಲ್ಲಿಸಿದ್ದೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ರೈತ ಪ್ರಧಾನ ಕಾರ್ಯದರ್ಶಿ ಅಗ್ರಹಾರ ರಾಮೇಗೌಡ. ರೈತರ ಸಂಘದ ಕಲ್ಲಳ್ಳಿ ಕಲ್ಲಹಳ್ಳಿ ವಿಶ್ವಕಂಠಪ್ಪ ತಾಲೂಕು ಅಧ್ಯಕ್ಷ ಬೆಂಕಿ ಪೂರ ಚಿಕ್ಕಣ್ಣವೆಂಕಟಚಲಪತಿ ಹಾಗೂ ನಿತರ ಹಾಜರಿದ್ದರು.

# ಪಿಯು ಕಾಲೇಜ್ ಉದ್ಘಾಟಿಸಿದ ಶಾಸಕ ಬಸವರಾಜ ರಾಯರೆಡ್ಡಿ



• **ಮಲ್ಲಮ್ಮನುಡಿ ವಾರ್ತೆ ಕುಕನೂರ:**

ತಾಲೂಕಿನ ಇಟಗಿ ಗ್ರಾಮದ ಸರ್ಕಾರಿ ಆದರ್ಶ ವಿದ್ಯಾಲಯಕ್ಕೆ ಸುಮಾರು ನಾಲ್ಕು ಐದು ನೂರು ವಿದ್ಯಾರ್ಥಿಗಳಿಗಾಗಿ ಹಾಸ್ಟೆಲ್ ಮಾಡಲಾಗುವುದು ಎಂದು ಸಿಎಂ ಆರ್ಥಿಕ ಸಲಹೆಗಾರ ಹಾಗೂ ಶಾಸಕ ಬಸವರಾಜ ರಾಯರೆಡ್ಡಿ ಹೇಳಿದರು.

ತಾಲೂಕಿನ ಇಟಗಿ ಗ್ರಾಮದ ಸರ್ಕಾರಿ ಆದರ್ಶ ವಿದ್ಯಾಲಯದ ಪದವಿ ಪೂರ್ವ ಕಾಲೇಜನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಳೆದ ವರ್ಷ ಬಜೆಟ್ಟಿನಲ್ಲಿ ನಾನೇ ಆದರ್ಶ ವಿದ್ಯಾಲಯದಲ್ಲಿ ಪಿಯು ಕಾಲೇಜನ್ನು ಪ್ರಾರಂಭಿಸಲು ಅನುದಾನ ಮಂಜೂರು ಮಾಡಿಸಿದ್ದೆ ಅದರಂತೆ ಇಟಗಿ ಆದರ್ಶ ವಿದ್ಯಾಲಯ ಕೂಡ ಪದವಿಪೂರ್ವ ಕಾಲೇಜು ಆಗಿದ್ದು ವಿಜ್ಞಾನ ಹಾಗೂ ಕಾಮರ್ಸ್ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ. ಇನ್ನು ಆದರ್ಶ ವಿದ್ಯಾಲಯಕ್ಕೆ ಇನ್ನು ಏನು ಬೇಕಾಗುತ್ತೆ ಎಂದು ನೋಡಿ, ಅವಶ್ಯಕತೆ ಇರುವಂತ ಎಲ್ಲವನ್ನು ಮಾಡಿಕೊಡುತ್ತೇನೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಡಾ. ತೋಟದ ಸಿದ್ದರಾಮ ಸ್ವಾಮೀಜಿಗಳಿಗೆ ಹಾಗೂ ಶಾಸಕ ಬಸವರಾಜ ರಾಯರೆಡ್ಡಿ ಅವರಿಗೆ ಕಾಲೇಜು ವತಿಯಿಂದ ಹಾಗೂ ಸಿಡಿಸಿ ಸದಸ್ಯರಿಂದ ಪದಾಧಿಕಾರಿಗಳು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಡಾ. ತೋಟದ ಸಿದ್ದರಾಮ ಮಹಾಸ್ವಾಮಿಗಳು, ಜಿಲ್ಲಾಧಿಕಾರಿಗಳಾದ ಸುರೇಶ್ ಹಿಟ್ನಾಳ್, ಕುಕನೂರು ತಾಲೂಕು ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ್‌ಕುಮಾರ್ ಬಿರಾದಾರ್, ಗ್ಯಾರಂಟಿ

ಸಮಿತಿಯ ಅಧ್ಯಕ್ಷ ಸಂಗಮೇಶ್ ಗುತ್ತಿ, ಹಿರಿಯ ಮುಖಂಡರಾದ ಹನುಮಂತಗೌಡ ಚಂಡೂರ್, ಯಂಕಣ್ಣ ಯೆರಾಸಿ, ಕೆರೆಬಸಪ್ಪ ನಿಡಗುಂದಿ, ಸಿದ್ದಯ್ಯ ಕಳ್ಳಿಮಠ, ಶರಣಪ್ಪ ಗಾಜಿ, ಬಸವ ಪ್ರಭು ಪಾಟೀಲ್, ಕಾಲೇಜಿನ ಪ್ರಾಚಾರ್ಯರಾದ

ಬೀರಪ್ಪ ಕಾನಕೊಡ್ತಿ, ಸೇರಿಸಿ ಉಪಾಧ್ಯಕ್ಷರಾದ ಹನುಮರೆಡ್ಡಪ್ಪ ದೇಸಾಯಿ, ಕಾವ್ಯ ಬಿ ಪಾಟೀಲ್, ಶ್ರೀಕಾಂತ್ ಪೂಜಾರ್, ಗ್ರಾಮ ಪಂಚಾಯತಿ ಅಧ್ಯಕ್ಷರಾದ ರತ್ನವ್ವ ಭಜಂತ್ರಿ, ಎಸ್ ಬಿ ಎಂ ಸಿ ಅಧ್ಯಕ್ಷರಾದ ಕಳಕನಗೌಡ ಸಾದರ್, ಆದರ್ಶ ಶಾಲೆಯ ಮುಖ್ಯೋಪಾಧ್ಯಾಯರಾದ ರಾಮರಡ್ಡೆಪ್ಪಹಾಲಕೇರಿ, ಸೇರಿದಂತೆ ಮುಖಂಡರು ಸಾರ್ವಜನಿಕರು ಆದರ್ಶ ವಿದ್ಯಾಲಯದ ಶಿಕ್ಷಕರು ಸಿಬ್ಬಂದಿ ವರ್ಗ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇತರರು ಉಪಸ್ಥಿತರಿದ್ದರು.

# ಸಿದ್ದರಾಮಾನಂದ ಪುರಿ ಸ್ವಾಮೀಜಿ ಲಿಂಗೈಕ್ಯ ಭಕ್ತರಿಗೆ ತುಂಭಲಾರದ ನಷ್ಟ: ಶರಣಬಸಪ್ಪ ದಾನಕೈ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :**

ಹಾಲುಮತ ಸಮಾಜದ ಹಾಗು ಇತರ ಸಮುದಾಯದ ಭಕ್ತರಿಗೆ ಸಂಸ್ಕಾರ ಸಂಸ್ಕೃತಿಗಳ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸಿ ಸಮಾಜವನ್ನು ಸಂಘಟನೆಯನ್ನು ಮಾಡುತ್ತಾ ಸಮಾಜದವರು ಉತ್ತಮ ದಾರಿಯಲ್ಲಿ ಸಾಗುವಂತೆ ಅವರಿಗೆ ಮಾಹಿತಿ ಮಾರ್ಗದರ್ಶನ ನಿಡುತ್ತಾ ಬಂದಿರುವ ಶ್ರೀ ಗಳವರ ಅಗಲಿಕೆಯಿಂದ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಕೊಪ್ಪಳ ಜಿಲ್ಲಾ ಹಾಲುಮತ ಸಮಾಜದ ಮುಖಂಡ ಶರಣಬಸಪ್ಪ ದಾನಕೈ ಅವರು ಸಂತಾಪ ಸೂಚಿಸಿದ್ದಾರೆ.

ಶ್ರೀಗಳವರು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗದೆ, ಅಧ್ಯಾತ್ಮ ಮತ್ತು ಸಾಮಾಜಿಕ ಸೇವೆಯ ಮೂಲಕ ಎಲ್ಲರನ್ನೂ ಪ್ರೀತಿಸುತ್ತಿದ್ದರು ಅವರ ಸರಳತೆ, ಜ್ಞಾನ ಮತ್ತು ಸಮಾಜಮುಖಿ ಚಿಂತನೆಗಳು ನಮಗೆಲ್ಲರಿಗೂ ದಾರಿದೀಪಗಳಾಗಿವೆ, ಶ್ರೀಗಳವರು ಸಮಾಜದ ಮೇಲೆ ಸಾಮಾಜಿಕ ಕಳಕಳಿ ಹೊಂದಿದ್ದರು,

ತುಳಿತಕ್ಕೊಳಗಾದವರ ಮತ್ತು ಹಿಂದುಳಿದ ವರ್ಗಗಳ ಏಳಿಗೆಗಾಗಿ ಅವರು ನಿರಂತರವಾಗಿ ಶ್ರಮ ಪಟ್ಟಿದ್ದಾರೆ

ಇದರ ಜೋತೆಗೆ ಅಧ್ಯಾತ್ಮ ಪ್ರಸಾರವನ್ನು ಮಾಡುತ್ತಾ ಕನಕದಾಸರ ತತ್ವಗಳನ್ನು ಮತ್ತು ಭಕ್ತಿ ಮಾರ್ಗವನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ,ಇವರು ಉನ್ನತ ಸ್ಥಾನದಲ್ಲಿದ್ದರೂ ಸರಳ ವ್ಯಕ್ತಿತ್ವವನ್ನು ಉಳ್ಳವರಾಗಿದ್ದರು,

ಅವರು ತೋರುತ್ತಿದ್ದ ವಿನಯ ಮತ್ತು ನಗುಮುಖದ ಮಾತುಗಳು ಭಕ್ತರ ಮನ ಮನೆಯಲ್ಲಿ ಹೃದಯದಲ್ಲಿ ಅಚ್ಚಳಿಯದೆ ಉಳಿಯಲು ಸಾದ್ಯವಾಗಿದೆ ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಕೊಪ್ಪಳ ಜಿಲ್ಲಾ ಹಾಲುಮತ ಸಮಾಜದ ಮುಖಂಡ ಶರಣಬಸಪ್ಪ ದಾನಕೈ ಸಂತಾಪ ವ್ಯಕ್ತಪಡಿಸಿದ್ದಾರೆ,

ಶ್ರೀಗಳವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ನಾಡಿನ ಸಕಲ ಭಕ್ತರಿಗೂ ಆ ಭಗವಂತ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

# ಸಚಿವರಿಗೆ ಹಾರೈಸಿದ ಶ್ರೀ ಹಾವಲಿಂಗೇಶ್ವರ ಶಿವಾಚಾರ್ಯರು



**ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**

. ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭೆ ರಾಷ್ಟ್ರೀಯ ಅಧ್ಯಕ್ಷರು ಕರ್ನಾಟಕ ಸರ್ಕಾರದ ಅರಣ್ಯ, ಪರಿಸರ, ಜೀವಿಶಾಸ್ತ್ರ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಅವರಿಗೆ ಜನ್ಮ ದಿನದ ಪ್ರಯುಕ್ತ ಸಚಿವರ

ಸ್ವಗೃಹಕ್ಕೆ ಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯರು ಹುಟ್ಟುಹಬ್ಬದ ಶುಭ ಕೋರಿ ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ನಮ್ಮ ಕರ್ನಾಟಕ ಸೇನೆ ಜಿಲ್ಲಾ ಅಧ್ಯಕ್ಷರಾದ ಗಣೇಶ ಪಾಟೀಲ್ ಇದ್ದರು

ಭಗವಂತ ಶ್ರೀಯುತರಿಗೆ ಉತ್ತಮ ಆಯುಷ್ಯ,

ಆರೋಗ್ಯ ಕರುಣಿಸಲಿ. ರಾಜಕೀಯವಾಗಿ,

ಸಾಮಾಜಿಕವಾಗಿ ಉತ್ತರೋತ್ತರ

ಅಭಿವೃದ್ಧಿ ಹೊಂದಿ ಸಮಾಜಕ್ಕೆ ಇನ್ನಷ್ಟು ಸೇವೆ ಸ

'ಲ್ಲಿಸುವ ಶಕ್ತಿ ಭಗವಂತ ಕೊಡಲಿ ಆಶೀರ್ವದಿಸಿದರು.

# ಶ್ರೀ ಸಿದ್ದರಾಮನಂದಪುರಿ ಮಹಾಸ್ವಾಮಿಗಳಿಗೆ ಭಾವಪೂರ್ಣ ಶ್ರದ್ಧಾಂಜಲಿ



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**

ತಾಲ್ಲೂಕಿನ ಕರಕನಳ್ಳಿ ಗ್ರಾಮದಲ್ಲಿ ಶ್ರೀ ಸಿದ್ದರಾಮನಂದಪುರಿ ಮಹಾಸ್ವಾಮಿಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಭಕ್ತಿಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ಯುವಕರು, ಭಕ್ತರು ಹಾಗೂ ಸಾರ್ವಜನಿಕರು ಮಹಾಸ್ವಾಮಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ, ಅವರ ಆದರ್ಶಮಯ ಜೀವನ, ಸಮಾಜಸೇವಾ ಕಾರ್ಯಗಳು ಹಾಗೂ ಧಾರ್ಮಿಕ ಚಿಂತನೆಗಳನ್ನು ಸ್ಮರಿಸಿದರು. ಪ್ರಮುಖರಾದ ಜಗನ್ನಾಥ ಗಾರಿ ಮಾತನಾಡಿ, ಶ್ರೀ ಸಿದ್ದರಾಮನಂದಪುರಿ ಮಹಾಸ್ವಾಮಿಗಳು ಸರಳ ಜೀವನ, ಶಾಂತಿ, ಸಹಿಷ್ಣುತೆ ಮತ್ತು ಮಾನವೀಯ ಮೌಲ್ಯಗಳನ್ನು ಸಮಾಜಕ್ಕೆ ನೀಡಿದ ಮಹಾನ್ ಸಂತರು. ಅವರ ಬೋಧನೆಗಳು ಇಂದಿನ ಯುವಪೀಳಿಗೆಗೆ ದಾರಿದೀಪವಾಗಿವೆ ಎಂದು ಹೇಳಿದರು. ಕಾರ್ಯಕ್ರಮದ ಅಂತ್ಯದಲ್ಲಿ ಮೌನಾಚರಣೆ ಮೂಲಕ ಮಹಾಸ್ವಾಮಿಗಳಿಗೆ ಗೌರವ ಸಲ್ಲಿಸಲಾಯಿತು. ಈ ಸಂಧರ್ಭದಲ್ಲಿ ಬಕ್ಕಪ್ಪಾ ಮಕಾಜಿ, ಜನಾರ್ದನ ಹೂಗೊಂಡ, ರವಿ ಪುಲ್ಲಾ, ಈಶ್ವರ ಬುಡ್ಗಾ, ಪ್ರಭು ಘಾಟೊಳ್ಳಿ, ಜಗನ್ನಾಥ ಇದಲಾಯಿ, ಈಶ್ವರ ಗಜ್ಜೆಲಿ, ನರಸಪ್ಪಾ ಗಾರಿ, ಪರಮೇಶ ಮಡಿವಾಳ, ಪ್ರವೀಣ ಮಲಚಲಮಿ, ರಮೇಶ ಸಂಕೋಳೆ, ಪ್ರಭು ಇದಲಾಯಿ, ಮತ್ತು ರಮೇಶ ಬೇಡರ ಕೂಡಿಕೊಂಡು ಶೃದ್ಧಾಂಜಲಿ ಸಲ್ಲಿಸಲಾಯಿತು.

# ಶಂಭುಲಿಂಗೇಶ್ವರರ ನಾಳೆ ರಥೋತ್ಸವ

• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**




ಬೀದರ ತಾಲೂಕಿನ ರೇಕುಳಗಿ ಗ್ರಾಮದ ಪವಾಡ ಪುರುಷ ಶಂಭುಲಿಂಗೇಶ್ವರರ 90 ನೇಯ ಜಾತ್ರಾ ಮಹೋತ್ಸವವೂ ಇಂದಿನಿಂದ ಮೂರು ದಿನಗಳ ಕಾಲ ಸಡಗರ ಸಂಭ್ರಮದ ನಡುವೆ ಜರುಗಲಿದೆ. ಮಂದಿರಕ್ಕೆ ಪ್ರತಿದಿನ ನೂರಾರು ಭಕ್ತರು ಮಂದಿರಕ್ಕೆ ಆಗಮಿಸಿ ಶಂಭುಲಿಂಗೇಶ್ವರರ ದರ್ಶನ ಪಡೆದುಕೊಳ್ಳುತ್ತಾರೆ. ಜಾತ್ರಾ ಮಹೋತ್ಸವ ನಿಮಿತ್ತವಾಗಿ ದೇವಸ್ಥಾನ ಪಂಚ ಕಮಿಟಿ ಅಧ್ಯಕ್ಷ, ಉಪಾಧ್ಯಕ್ಷರು, ಸದಸ್ಯರು ಹಾಗೂ ಗ್ರಾಮಸ್ಥರು ಸೇರಿಕೊಂಡು ಸಕಲ ಸಿದ್ಧತೆಗಳ್ಳು ಮಾಡಿಕೊಂಡಿದ್ದು, ಜಾತ್ರಾ ಮಹೋತ್ಸವವೂ ಸಡಗರ ಸಂಭ್ರಮದಿಂದ ಆಚರಿಸಲು ಸಿದ್ಧರಾಗಿದ್ದಾರೆ. ಕಾರ್ಯಕ್ರಮದ ವಿವರ 16ರ ಶುಕ್ರವಾರ ಅಗ್ನಿಪೂಜೆ, ರುದ್ರಾಭಿಷೇಕ ಹಾಗೂ ಪಲ್ಲಕ್ಕಿ ಮೆರವಣಿಗೆ, ಗಿಗಿ ಪದಗಳು, ಸಂಗೀತ ದರ್ಬಾರ ಮತ್ತು ಮಂತ್ರ ಮಹರ್ಷಿ ಡಾ. ರೆಡ್ಡಿ ಗೂರುಜಿ ನೇತೃತ್ವದಲ್ಲಿ ಧರ್ಮಸಭೆ. ಜನವರಿ 17ರ ಶನಿವಾರ ಸಂಜೆ 6 ಗಂ-ಟೆಗೆ ರಥೋತ್ಸವ, ಸಂಗೀತ ದರ್ಬಾರ, ಕೀರ್ತನೆಗಳು ಸೇರಿದಂತೆ ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳು. 18ರಂದು ಭಾನುವಾರ ಬೆಳಗ್ಗೆ 8 ಗಂಟೆಗೆ ಜಂಗಿ ಕುಸ್ತಿ ಪಂದ್ಯಾವಳಿಗಳು ಸೇರಿದಂತೆ ಇತರೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಮಂದಿರಕ್ಕೆ ಆಗಮಿಸಿ ದೇವರ ದರ್ಶನ ಪಡೆದುಕೊಳ್ಳಬೇಕೆಂದು ಮನವಿ ಮಾಡಿದ್ದಾರೆ.

# ಇಸ್ವ-ತ್ತು ತಂತ್ರಾಂಶದ ಸಂಬಂಧ ಸಹಾಯವಾಣಿ ಸ್ಥಾಪನೆ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :**

ಇ-ಸ್ವತ್ತು ತಂತ್ರಾಂಶದ ಸಂಬಂಧ ಕೊಪ್ಪಳ ಜಿಲ್ಲಾ ಪಂಚಾಯತ ವತಿಯಿಂದ ಸಹಾಯವಾಣಿ ಸ್ಥಾಪನೆ ಮಾಡಲಾಗಿದೆ.

ಇ-ಸ್ವತ್ತು ತಂತ್ರಾಂಶದ ಹೊಸ ಅವತರಣಿಕೆಯನ್ನು ಅನುಷ್ಠಾನ ಮಾಡಿರುವುದರಿಂದ ಪ್ರಾರಂಭದಲ್ಲಿ ಸಾರ್ವಜನಿಕರ ಕರೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ (ಕಾಲ್ ಸೆಂಟರ್) ಸಂಖ್ಯೆ: 08539-221207) ಇದ್ದು,

ಇ-ಸ್ವತ್ತು ತಂತ್ರಾಂಶ ಹಾಗೂ ನಿಯಮಗಳನ್ವಯ ಉತ್ತರಿಸುವ ಬಗ್ಗೆ, ಮಾರ್ಗದರ್ಶನ ನೀಡಲು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಕೊಪ್ಪಳ ಜಿಲ್ಲಾ ಪಂಚಾಯತ್ ಕಾರ್ಯಾಲಯದಲ್ಲಿ ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕಡ್ಡಾಯವಾಗಿ ಹಾಜರಾಗಲು ಈಗಾಗಲೇ ಸೂಚನೆ ನೀಡಲಾಗಿರುತ್ತದೆ. ಈ ಪ್ರಯುಕ್ತ ಇ-ಸ್ವತ್ತು ತಂತ್ರಾಂಶ ಹಾಗೂ ನಿಯಮಗಳನ್ವಯ ಉತ್ತರಿಸುವ ಬಗ್ಗೆ ಮಾರ್ಗದರ್ಶನ ನೀಡಲು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಕೊಪ್ಪಳ ಜಿಲ್ಲಾ ಪಂಚಾಯತ್ ಕಾರ್ಯಾಲಯದಲ್ಲಿ ಜನವರಿ 12 ರಿಂದ 31ರ ವರೆಗೆ ಬೆಳಿಗ್ಗೆ 10 ರಿಂದ ಸಂಜೆ 5.30 ಗಂಟೆಯವರೆಗೆ (ಶನಿವಾರ ಮತ್ತು ಭಾನುವಾರ ಹಾಗೂ ರಜೆ ದಿನಗಳನ್ನು ಹೊರತುಪಡಿಸಿ) ಹಾಜರಾಗಿ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದೆ.

ಇ-ಸ್ವತ್ತು ತಂತ್ರಾಂಶದ ಸಂಬಂಧ ಸಹಾಯವಾಣಿ (ಕಾಲ್ ಸೆಂಟರ್) ಸಿಬ್ಬಂದಿಗೆ ಮಾರ್ಗದರ್ಶನ ನೀಡಲು ಕೆಲವು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದು ಕೊಪ್ಪಳ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿವಯೋಗಿ ಸಿದ್ಧಾರಾಮೇಶ್ವರ ಕರ್ಮಯೋಗಿಯಾಗಿದ್ದರು: ಡಾ. ಬಿರಾದಾರ




• **ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು:**

12ನೇ ಶತಮಾನ ಎಂದರೆ ಹಲವಾರು ಶರಣರು ಪೂಜ್ಯರು ನಮಗೆ ನೆನಪಾಗುತ್ತದೆ ಅಣ್ಣಬಸವಣ್ಣ ಮಾರ್ಗದರ್ಶನದಲ್ಲಿ ಹಲವಾರು ಜನಾಂಗದ. ವರ್ಗದವರು. ಅನುಭವ ಮಂಟಪದಲ್ಲಿ ಸಂಗಮಗೊಳಿಸಿ ಅವರ ವಾಕ್ ಸ್ವಾತಂತ್ರ್ಯಕ್ಕೆ .ಅವರ ವಚನಗಳ ರಚನೆಗೆ ಉತ್ತಮ ವಾತಾವರಣವನ್ನು ನಿರ್ಮಿಸಿ ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ನೀಡಿದ್ದರು ಅಣ್ಣ ಬಸವಣ್ಣನವರು.ಅವರ ಅಭಿಮಾನ ಮತ್ತು ಪ್ರೀತಿಗೆ ಪಾತ್ರರಾದಂತವರು ಕರ್ಮಕ್ಕೆ ಅಂದರೆ ಕೆಲಸಕ್ಕೆ ಮಹತ್ವವನ್ನು ನೀಡಿ. ವ್ಯಕ್ತಿಗಳು ಶರಣರು.ನಿರಂತರ ಕಾರ್ಯದಲ್ಲಿ ಇರಬೇಕು ಎಂಬ ಪರಿಕಲ್ಪನೆಯನ್ನು ವಚನಗಳ ಮೂಲಕ ಹೇಳಿ.ಕೆರೆಗಳ ನಿರ್ಮಾಣವನ್ನ ಮಾಡಿ ಜನರಿಗೆ ನೀರಿನ ದಾಹವನ್ನು ತೀರಿಸಿದ ಜಲ ಋಷಿ.ಮತ್ತು ಕೈಯಲ್ಲಿ ಗುದ್ದಲಿ ಪರೆಯನ್ನು ಹಿಡಿದು. ಸಾವಿರಾರು ಜನರನ್ನು ಒಗ್ಗೂಡಿಸಿ ಹಲವಾರು ಕೆರೆಗಳನ್ನ ನಿರ್ಮಿಸಿದ ಕರ್ಮ ಯೋಗಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಎಂದರೆ ತಪ್ಪಾಗಲಾರದು. ಎಂದು ದಿನಾಂಕ 14.01.2026ರಂದು ರಾಯಚೂರು ತಾಲೂಕಿನ ಸರ್ಕಾರಿ ಪ್ರೌಢಶಾಲೆ , ಉಡಮಗಲ ಖಾನಾಪುರದಲ್ಲಿ ನಡೆದ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶಾಲಾ ಕನ್ನಡ ಕಲಾ ಶಿಕ್ಷಕರು ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿಯಾದ ಡಾ. ದಂಡಪ್ಪಬಿರಾದಾರ ಮಾತನಾಡಿದರು.ನಂತರ ಅವರು ಮುಂದುವರೆದು ಮಾತನಾಡುತ್ತಾ ಅಲ್ಲಮಪ್ರಭುಗಳ ಮೂಲಕ ಅನುಭವ ಮಂಟಪವನ್ನು ಪ್ರವೇಶ ಮಾಡಿ. ಚೆನ್ನಬಸವಣ್ಣನ ಮೂಲಕ ದೀಕ್ಷಿತ ಪಥವನ್ನು ತುಳಿದು ಸಾವಿರಾರು ವಚನಗಳನ್ನು ರಚನೆ ಮಾಡಿ ಸಮಾಜದ ಅಂಕುಡೊಂಕುಗಳನ್ನು ತಿದ್ದಿದಂತ ಸಿದ್ಧರಾಮೇಶ್ವರರು ವಿಶೇಷವಾಗಿ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತುಂಬಾ ಆಸಕ್ತಿಯನ್ನು ಹೊಂದಿದ್ದರು. ತಮ್ಮ ಜೀವನದಲ್ಲಿ ವಿಶೇಷವಾಗಿ ಅವರು ಬಸವಣ್ಣರ ಬಗ್ಗೆ ಅಪಾರವಾದ ಅಭಿಮಾನ ಭಕ್ತಿಯನ್ನು ಹೊಂದಿದ್ದರು. ಅವರು ಬರೆದ ಒಂದು ವಚನದಲ್ಲಿ ಜಗಜ್ಯೋತಿ ಬಸವಣ್ಣನವರ ಬಗ್ಗೆ ಹೀಗೆ ಹೇಳುತ್ತಾರೆ. ಬಸವಣ್ಣನೇ ತಾಯಿ.ಬಸವಣ್ಣನೇ ತಂದೆ. ಬಸವಣ್ಣನೇ ಪರಮ ಬಂಧು ವೆನಗೆ. ವಸುಧೀಶ ಕಪಿಲ ಸಿದ್ದ ಮಲ್ಲಿಕಾರ್ಜುನ ಸಿದ್ದ.ನಿಮ್ಮ ಹೆಸರಿಟ್ಟ ಗುರು ಬಸವಣ್ಣನಯ್ಯ ಎಂದು ತಮ್ಮ ವಚನದಲ್ಲಿ ಹೇಳಿದ್ದಾರೆ.

ಶಿವಯೋಗಿ ಸಿದ್ದರಾಮೇಶ್ವರರು ವಚನಗಳ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು.. ಕೆಲಸ ಕಾರ್ಯಗಳಿಗೆ ಹೆಚ್ಚು ಒತ್ತ ಒತ್ತುಕೊಟ್ಟಂತ ಶರಣರು..ಅವರು ಸರ್ವ ಜನಾಂಗಕ್ಕೆ ಬೇಕಾದಂತ ಶರಣರಾಗಿದ್ದಾರೆ ಎಂದು ಡಾ. ಬಿರಾದಾರ ಹೇಳಿದರು.ಈ ಸಂದರ್ಭದಲ್ಲಿ ಶಾಲಾ ಮುಖ್ಯಗುರುಗಳಾದ ವೀರೇಶ್ ಅಂಗಡಿ ಶಿವಯೋಗಿ ಸಿದ್ದರಾಮೇಶ್ವರ ಜೀವನ. ಚರಿತ್ರೆ.ಅವರು ಬೆಳೆದ ರೀತಿ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಶಾಲಾ ಶಿಕ್ಷಕ ವೃಂದದವರಾದ ಪಾಂಡುರಂಗ ದೇಸಾಯಿ. ನಫೀಜಾ ಅಂಜುಮ ಅನಿತಾ. ಎನ್.ವೀಣಾ ಕುಲಕರ್ಣಿ ಸರಸ್ವತಿ ಶಿವಲಲಾ ಉಪಸ್ಥಿತರಿದ್ದರು ಗೋಯಿಂಗ್ ಟು.ಸ್ಕೂಲ್ ಎ.ಜಿ.ಓ. ಸಂಸ್ಥೆಯ ನರಸಪ್ಪನ ಸಕಲರನ್ನು ಸ್ವಾಗತಿಸಿದರು.ನಾಂದಿ ಫೌಂಡೇಶನ್ ಸುನೀತ ಕೊನೆಯಲ್ಲಿ ವಂದಿಸಿದರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಭಾಲ್ಕಿಯಲ್ಲಿ ಪೂಜ್ಯ ಶ್ರೀ ಸಿದ್ದರಾಮಾನಂದ ಸ್ವಾಮೀಜಿಗಳಿಗೆ ಭಾವಪೂರ್ಣ ಶೃದ್ಧಾಂಜಲಿ



• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ನಗರದ ಕನಕ ಭವನದಲ್ಲಿ ಪೂಜ್ಯ ಶ್ರೀ ಸಿದ್ದರಾಮಾನಂದ ಮಹಾಸ್ವಾಮೀಜಿಗಳ ಶೃದ್ಧಾಂಜಲಿ ಕಾರ್ಯಕ್ರಮವನ್ನು ಭಕ್ತಿಭಾವ ಹಾಗೂ ಗೌರವದಿಂದ ಆಯೋಜಿಸಲಾಯಿತು. ಸಮಾಜದ ಗಣ್ಯರು, ಭಕ್ತರು ಸೇರಿ ಪೂಜ್ಯರಿಗೆ ಭಾವಪೂರ್ಣ ಶೃದ್ಧಾಂಜಲಿ ಸಲ್ಲಿಸಿದರು.

ಶಿವಶರಣಪ್ಪಭತ್ರೆ ಅವರು ಮಾತನಾಡಿ ಪೂಜ್ಯ ಶ್ರೀ ಸಿದ್ದರಾಮಾನಂದ ಸ್ವಾಮೀಜಿಗಳು ಅತ್ಯಂತ ಸರಳ ಹಾಗೂ ವಿನಮ್ರ ವ್ಯಕ್ತಿತ್ವದ ಗುರುಗಳಾಗಿದ್ದರು

. ಅವರು ಮಠವನ್ನು ಕೇವಲ ಪೂಜಾ ಸ್ಥಳವನ್ನಾಗಿ ಅಲ್ಲದೆ ಅನ್ನದಾಸೋಹ, ವಿದ್ಯಾದಾನ, ಧರ್ಮಪ್ರಚಾರ ಮತ್ತು ಮಾನವ ಸೇವೆಯ ಮಹತ್ತರ ಕೇಂದ್ರವನ್ನಾಗಿ ರೂಪಿಸಿದ್ದರು.

ಅವರ ಮಠವು ಅನೇಕ ಬಡ ಮತ್ತು ನೊಂದವರ ಬದುಕಿಗೆ ಆಶಾಕಿರಣವಾಗಿತ್ತು" ಎಂದು ಸ್ಮರಿಸಿದರು. ಅಶೋಕ ಬರ್ಮಾ ಮಾತನಾಡಿ, ಪೂಜ್ಯರು ಇಂದು ನಮ್ಮ ನಡುವೆ ಶರೀರದಿಂದ ಇಲ್ಲದಿದ್ದರೂ ಅವರು ಬಿತ್ತಿದ ಧರ್ಮ, ಸೇವೆ ಮತ್ತು ಶಿಕ್ಷಣದ ಬೀಜಗಳು ಸಾವಿರಾರು ಮನಸ್ಸುಗಳಲ್ಲಿ ಇಂದಿಗೂ ಹಸಿರಾಗಿವೆ.

ಅವರ ಜೀವನವೇ ನಮಗೆ ದಾರಿ ತೋರಿಸುವ ದೀಪ, ಅವರ ಸೇವೆಯೇ ನಮಗೆ ಶಾಶ್ವತ ಪ್ರೇರಣೆ ಎಂದು ಹೇಳಿದರು.

ನಿರಂಜಪ್ಪಪಾತ್ರೆ ಅವರು ಮಾತನಾಡಿ, "ಪೂಜ್ಯ ಶ್ರೀ ಸಿದ್ದರಾಮಾನಂದ ಮಹಾಸ್ವಾಮೀಜಿಗಳು ಕೇವಲ ಒಬ್ಬ ಮಠಾಧಿಪತಿಗಳಲ್ಲ; ಅವರು ನಮ್ಮ ಸಮಾಜದ ಆಧ್ಯಾತ್ಮಿಕ ದೀಪ ಮತ್ತು ಮಾನವೀಯತೆಯ ಜೀವಂತ ರೂಪವಾಗಿದ್ದರು.

'ಧರ್ಮ ಎಂದರೆ ಕೇವಲ ಪೂಜೆ ಅಲ್ಲ, ಧರ್ಮ ಎಂದರೆ ಮಾನವ ಸೇವೆ ಎಂಬ ತತ್ವವನ್ನು ಅವರು ತಮ್ಮ ಬದುಕಿನ ಪ್ರತಿದಿನವೂ ನಡೆದುಕೊಂಡು ತೋರಿಸಿದರು. ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಅವರು ಸಲ್ಲಿಸಿದ ಸೇವೆಗಳು ಸದಾ ಸ್ಮರಣೀಯವಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಸಂಜುಕುಮಾರ ಗುಂಜರ್ಗೆ, ಧನರಾಜ ಮೆತ್ರೆ, ಅರ್ಜುನರಾವ ಸೂರ್ಯವಂಶಿ, ವೆಂಕಟ ಮಲಗೊಂಡಾ, ಲಕ್ಷ್ಮಣ ವಾಡೆ, ಶಾಲಿವಾನ ಘೋದೆ, ಬೀರಪ್ಪವಾಡೆ, ದೇವಿದಾಸ ಮೇತ್ರೆ, ಪಂಡರಿ ಮೆತ್ರೆ, ಶಿವಕುಮಾರ ಮರೂರೆ, ಮಾರುತಿ, ಧನರಾಜ ತೆಗಂಪ್ಯೂರೆ, ಭಾಲ್ಕೇಶ್ವರ ಹುಡುಗೆ, ಚಂದ್ರಕಾಂತತಳವಾಡೆ, ಹಣಮಶೇಟ್ಟಿ, ಆನಂದ, ಅರುಣ, ೦

ಮಲ್ಲಾಲಿಂಗ ಸೇರಿದಂತೆ ಅನೇಕ ಗಣ್ಯರು ಹಾಗೂ ಭಕ್ತರು ಉಪಸ್ಥಿತರಿದ್ದು ಪೂಜ್ಯರಿಗೆ ಭಾವಪೂರ್ಣ ಶೃದ್ಧಾಂಜಲಿ ಅರ್ಪಿಸಿದರು.

# ಸಂಕ್ರಾಂತಿ ಸಂಭ್ರಮ ರಂಗೋಲಿ ಸ್ಪರ್ಧೆ: ವಿಜೇತರಿಗೆ ಬಹುಮಾನ ವಿತರಣೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ರಂಗೋಲಿಗಳ ಹಬ್ಬ ಎಂದೇ ಖ್ಯಾತಿಯಾಗಿರುವ ಮಕರ ಸಂಕ್ರಾಂತಿ ಹಬ್ಬವನ್ನು ನಗರದ ಬಾಲಾಂಜನೇಯ ದೇವಸ್ಥಾನ ಶಾಲೆ ಆವರಣದಲ್ಲಿ ರಂಗೋಲಿ ಸ್ಪರ್ಧೆಯನ್ನು ಬುಧವಾರ ಹಮ್ಮಿಕೊಳ್ಳಲಾಗಿದ್ದು, ನೂರಾರು ಮಹಿಳೆಯರು ವಿವಿಧ ರೀತಿಯ ರಂಗೋಲಿಗಳನ್ನು ಬಿಡಿಸಿ, ಬಣ್ಣ ತುಂಬುವ ಮೂಲಕ ಸಂಭ್ರಮಿಸಿದರು.

ಸಂಜೀವಿನಿ ಬಳ್ಳಾರಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಸಂಕ್ರಾಂತಿ ಹಬ್ಬದ ನಿಮಿತ್ತ ಆಯೋಜಿಸಲಾಗಿದ್ದ ರಂಗೋಲಿ ಸ್ಪರ್ಧೆಯಲ್ಲಿ ಬಳ್ಳಾರಿ ನಗರ ಸೇರಿದಂತೆ ಗ್ರಾಮೀಣ ಭಾಗದಿಂದ ಆಗಮಿಸಿದ್ದ ಯುವತಿಯರಿಂದ ಹಿಡಿದು ವೃದ್ಧರವವರೆಗೂ ಭಾಗವಹಿಸಿದ್ದರು. ಸುಮಾರು 200ಕ್ಕೂ ಹೆಚ್ಚು ಭಾಗವಹಿಸಿದ್ದ ಮಹಿಳೆಯರು, ತಮಗಿಷ್ಟವಾದ ಕೃಷ್ಣರಾಧೆ ಜೋಡಿ, ಭಗವಾನ್ ಈಶ್ವರ, ಗೋಮಾತೆ ಸೇರಿದಂತೆ ದೇಶದ ಸಂಸ್ಕೃತಿ, ಪರಂಪರೆಯನ್ನು ಪ್ರತಿಬಿಂಬಿಸುವ ವಿವಿಧ ರೀತಿಯ ಚಿತ್ತಚಿತ್ತಾರದ ರಂಗೋಲಿಗಳನ್ನು ಬಿಡಿಸಿದರು. ಜೊತೆಗೆ ಬಿಡಿಸಿದ ರಂಗೋಲಿಗಳಿಗೆ ನಾನಾ ಬಣ್ಣಗಳನ್ನು ತುಂಬುವ ಮೂಲಕ ಜನಾಕರ್ಷಿಸುವಂತೆ ಅರಳಿಸಿದರು.

ಬಳಿಕ ಚಿತ್ತಚಿತ್ತಾರದ ರಂಗೋಲಿಗಳ ಮಧ್ಯೆ ಸಂಜೆ ಆರಂಭವಾದ 'ಸಂಕ್ರಾಂತಿ ಹಬ್ಬದ ಭೋಗಿ ಸಂಭ್ರಮ' ಕಾರ್ಯಕ್ರಮಕ್ಕೆ ಟ್ರಸ್ಟ್ ಅಧ್ಯಕ್ಷ, ಪಾಲಿಕೆ 3ನೇ ವಾರ್ಡ್ ಸದಸ್ಯ ಎಂ.ಪ್ರಭಂಜನ್ ಕುಮಾರ್ ಅವರು, ಹಳೆಯ ವಸ್ತುಗಳನ್ನು ಸುಡುವ ಭೋಗಿ ಹಬ್ಬಕ್ಕೆ ಅಗ್ನಿಸ್ಪರ್ಶಿಸುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಸನಾತನ ಧರ್ಮದ ಪ್ರಮುಖ ಹಬ್ಬಗಳಲ್ಲಿ 'ಸಂಕ್ರಾಂತಿ ಹಬ್ಬ'ವೂ ಒಂದು. ವಿಶೇಷವಾಗಿ ಮಹಿಳೆಯರಿಗೆ ಸಂಕ್ರಾಂತಿ ಹಬ್ಬ ಎಂದರೆ ಅತ್ಯಂತ ಅಚ್ಚುಮೆಚ್ಚು. ಮಹಿಳೆಯರು ರಂಗೋಲಿ ಬಿಡಿಸಿ, ಬಣ್ಣ ತುಂಬುವ ಮೂಲಕ ತಮ್ಮಲ್ಲಿನ ಪ್ರತಿಭೆಯನ್ನು ಅನಾವರಣಗೊಳಿಸುತ್ತಾರೆ. ಯಾವುದೇ ಅಳತೆಗೋಲು ಇಲ್ಲದೇ ರಂಗೋಲಿ ಬಿಡಿಸುವುದು ಸಹ ಒಂದು ಅದ್ಭುತ ಕಲೆಯಾದರೂ, ಅಷ್ಟು ಸುಲಭವೂ ಅಲ್ಲ. ರಂಗೋಲಿ ಬಿಡಿಸುವುದರಲ್ಲಿ ಮಹಿಳೆಯರಿಗೆ ಮಹಿಳೆಯರೇ ಸಾಟಿಯಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಲ್ಲ ಮಹಿಳೆಯರು, ಯುವತಿಯರು ಭಿನ್ನ ಭಿನ್ನ ರೀತಿಯಲ್ಲಿ ರಂಗೋಲಿಗಳನ್ನು ಬಿಡಿಸಿ, ಗಮನ ಸೆಳೆದಿದ್ದಾರೆ. ವರ್ಷದ ಮೊದಲ ಹಬ್ಬವಾದ ಸಂಕ್ರಾಂತಿ ಹಬ್ಬದಲ್ಲಿ ಮಹಿಳೆಯರೆಲ್ಲರೂ ರಂಗೋಲಿ ಬಿಡಿಸಿ, ಬಣ್ಣ ತುಂಬಿಸಿದಂತೆ ತಮ್ಮ ಜೀವನವೂ ತುಂಬ ಕಲರ್‌ಫುಲ್ ಆಗಿ ಇರಲಿ ಎಂದು ಶುಭ ಕೋರಿದರು.

ಇದೇ ವೇಳೆ ರಂಗೋಲಿ ಸ್ಪರ್ಧೆಯಲ್ಲಿ ವಿಜೇತರಾದ ಭಾರತಿ ಅವರಿಗೆ ಪ್ರಥಮ ಬಹುಮಾನ ಟ್ರಾಲಿಬ್ಯಾಗ್, ಹೆಲ್ಮೆಟ್, ಗಾಯತ್ರಿ ಅವರಿಗೆ ದ್ವಿತೀಯ ಬಹುಮಾನ ಅಡುಗೆ ಸೆಟ್,

ಹೆಲ್ಮೆಟ್, ಪದ್ಮಶ್ರೀ ಅವರಿಗೆ ತೃತೀಯ ಬಹುಮಾನ ಕುಕ್ಕರ್, ಹೆಲ್ಮೆಟ್‌ನ್ನು ವಿತರಿಸಿ, ತಪ್ಪದೇ ಬಳಸುವಂತೆ ಮನವಿ ಮಾಡಲಾಯಿತು. ಉಳಿದವರಲ್ಲಿ ಅತ್ಯುತ್ತಮವಾಗಿ

ರಂಗೋಲಿ ಬಿಡಿಸಿದ್ದ 8 ಜನ ಮಹಿಳೆಯರಿಗೆ ಹೆಲ್ಮೆಟ್‌ಗಳನ್ನು ವಿತರಿಸಿ ಸಂಚಾರ ಕುರಿತು ಮತ್ತು ಇನ್ನುಳಿದ ಎಲ್ಲರಿಗೂ ಸಮಾಧಾನಕರ ಬಹುಮಾನವಾಗಿ ಸ್ಟೀಲ್ ನೀರಿನ ಬಾಟಲ್‌ಗಳನ್ನು ವಿತರಿಸುವ ಮೂಲಕ ಪ್ಲಾಸ್ಟಿಕ್ ಬಳಸದಂತೆ ಎಂದು ಜಾಗೃತಿ ಮೂಡಿಸಲಾಯಿತು.

ಎಂ.ನಿರುಪಮಾ, ಎಂ.ಸುಮಾ ಅವರು ನಿರ್ಣಾಯಕರಾಗಿ ಭಾಗವಹಿಸಿದ್ದರು.

# ಹೆಚ್ಚುವರಿ1. ಎಸ್ಪಿ ಕುಮಾರಸ್ವಾಮಿ ಜಾತ್ರ ಸ್ಥಳ ಪರಿಶೀಲನೆ ಮತ್ತು ಮಾರ್ಗದರ್ಶನ



• **ಮಲ್ಲಮ್ಮ ನುಡಿ ವಾರ್ತೆ ಮುದಗಲ್:**

ಸಮೀಪದ ತೊಂಡಿಹಾಳ ಗ್ರಾಮದಲ್ಲಿ ಜರುಗಲಿರುವ ಹುಲಿಗೆಮ್ಮ ದೇವಿ ದೇವಸ್ಥಾನ ಜಾತ್ರ ಮಹೋತ್ಸವ ಕಾರ್ಯಕ್ರಮದ ಸ್ಥಳವನ್ನು ಜಿಲ್ಲಾ ಹೆಚ್ಚುವರಿ 1. ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ ಅವರು ಜಾತ್ರಾ ಕಾರ್ಯಕ್ರಮದ ಸ್ಥಳವನ್ನು ಮುಂಚಿತವಾಗಿ ಬುಧುವಾರ ಪರಿಶೀಲಿಸಿದರು.

ಹುಲಿಗೆಮ್ಮ ದೇವಸ್ಥಾನದ ಆವರಣ, ವಾಹನ ನಿಲುಗಡೆ ಸ್ಥಳ ಹಾಗೂ ರಥೋತ್ಸವ ಬೀದಿಯನ್ನ ಪರಿಶಿಲನೆ ಮಾಡಿ, ದೇವಸ್ಥಾನದ ಆಡಳಿತ ಮಂಡಳಿಯವರೊಂದಿಗೆ ಚರ್ಚಿಸಿ ಸೂಕ್ತ ಸಲಹೆಗಳನ್ನು ಸೂಚಿಸಿದರು. ಈ ವೇಳೆ ಮುದಗಲ್ ಪೊಲೀಸ್ ಠಾಣಾ ಸಿಬ್ಬಂದಿ ಹೆಚ್ ಸಿ ಅಮರೇಶ ಸೇರಿದಂತೆ ತೊಂಡಿಹಾಳ ಗ್ರಾಮಸ್ಥರಿದ್ದರು.

# ಸಿದ್ಧರಾಮೇಶ್ವರ ಜಯಂತಿ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ ಮುದಗಲ್:**

ನಾಡ ಕಾರ್ಯಾಲಯ, ಪುರಸಭೆ ಕಾರ್ಯಾಲಯ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸೇರಿದಂತೆ ವಿವಿಧ ಶಾಲಾ ಕಾಲೇಜುಗಳಲ್ಲಿ ಬುಧುವಾರ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಆಚರಣೆ ಮಾಡಲಾಯಿತು.

ಪುರಸಭೆ ಕಾರ್ಯಾಲಯದಲ್ಲಿ ವ್ಯವಸ್ಥಾಪಕ ಸುರೇಶ್ ಹೊನ್ನಳ್ಳಿ, ನಾಡ

ಕಾರ್ಯಾಲಯದಲ್ಲಿ ದೀಪಿಕಾ ರಾಥೋಡ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಡಾ. ಸಿದ್ದರಾಮ ಪಾಟೀಲ್ ಶಿವಯೋಗಿ ಸಿದ್ದರಾಮೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿದರು.

ಈ ವೇಳೆ ಕಂಪ್ಯೂಟರ್ ಗ್ರಾಮ ಲೆಕ್ಕಾಧಿಕಾರಿ ಕಿರಣ್, ಆಪರೇಟರ್ ಮುನೀರ್ ಪಾಷಾ, ಕಮಾಚಾರಿ ಶಿವು, ಶರಣಮ್ಮ, ಶರಣಪ್ಪ, ಚೆನ್ನಮ್ಮ ದಳವಾಯಿ ಮಠ, ಶಾಲಾ ಕಾಲೇಜು ಸಿಬ್ಬಂದಿಗಳು, ಪುರಸಭೆ ಸಿಬ್ಬಂದಿಗಳು ಸೇರಿದಂತೆ ಇತರರಿದ್ದರು.

# ಬೃಹತ್ ಆಹಾರ ಮತ್ತು ಸ್ವದೇಶಿ ಮೇಳ

• **ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ :**

ಸಣ್ಣ ಮತ್ತು ಗುಡಿ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಹಾಗೂ ದೇಶಿಯ ಉತ್ಪನ್ನಗಳನ್ನು ಜನರಿಗೆ ಪರಿಚಯಿಸುವ ಉದ್ದೇಶದಿಂದ ಗೋಕರ್ಣದ ಶ್ರೀ ಭದ್ರಕಾಳಿ ದೇವಸ್ಥಾನದ ಎದುರುಗಡೆ ಶಂಕರ ಮಠದಲ್ಲಿ ಜನವರಿ 16 ರಿಂದ 18 ರವರೆಗೆ ಶುಕ್ರವಾರ, ಶನಿವಾರ, ರವಿವಾರ ಬೃಹತ್ ಆಹಾರ ಮತ್ತು ಸ್ವದೇಶಿ ಮೇಳವನ್ನು ಆಯೋಜಿಸಲಾಗಿದೆ ಎಂದು ಮೇಳದ ಆಯೋಜಕ ಗಣೇಶ ಗುನಗ ತಿಳಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು ಸಣ್ಣ ಉದ್ಯಮಿದಾರಿಗೆ ಸೂಕ್ತ ಮಾರುಕಟ್ಟೆ ಒದಗಿಸುವುದು ಮತ್ತು ಪ್ರೋತ್ಸಾಹ ನೀಡುವುದೇ ಈ ಮೇಳದ ಮುಖ್ಯ ಉದ್ದೇಶವಾಗಿದೆ. ಸ್ಥಳೀಯ ಹಾಗೂ ನೈಸರ್ಗಿಕ ಉತ್ಪನ್ನಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು. ಇದು ಬೆಂಗಳೂರು ಸೇರಿದಂತೆ ವಿವಿದೆಡೆಗೆ ಆಯೋಜಿಸಲಾದ ಆರನೇ ಮೇಳವಾಗಿದೆ ಎಂದು ಅವರು ಹೇಳಿದರು.

ಮೇಳದಲ್ಲಿ ಸಂಪೂರ್ಣ ನೈಸರ್ಗಿಕ ಆಹಾರ ಪದಾರ್ಥಗಳ ಪ್ರದರ್ಶನ ಮತ್ತು ಮಾರಾಟವಿರಲಿದೆ ಚನ್ನಪಟ್ಟಣದ ಗೊಂಬೆಗಳು, ಮೈಸೂರು ರೇಷ್ಮೆ ಸೀರೆ, ಮುಂಬೈ, ರಾಜಸ್ಥಾನ, ಮೈಸೂರು, ಬೆಂಗಳೂರು ಸೇರಿದಂತೆ ವಿವಿಧ ರಾಜ್ಯಗಳ ನಾನಾ ಬಗೆಯ ಉತ್ಪನ್ನಗಳು ಇಲ್ಲಿ ಲಭ್ಯವಿರುತ್ತದೆ.

ನೈಸರ್ಗಿಕ ಸೌಂದರ್ಯ ವರ್ಧಕಗಳು ಖಾದಿ ಉತ್ಪನ್ನಗಳು ನಿತ್ಯ ಬಳಕೆಯ ವಸ್ತುಗಳು ಆಯುರ್ವೇದ ಉತ್ಪನ್ನಗಳು ಖಾದಿ ಸೀರೆಗಳು, ಆರೋಗ್ಯದಾಯಕ ಸಿರಿಧಾನ್ಯಗಳು ಮತ್ತು ಮಕ್ಕಳ ಉಡುಪುಗಳು ಸೇರಿದಂತೆ ಅನೇಕ ವಸ್ತುಗಳು ಒಂದೇ ಸೂರಿನಡಿ ದೊರೆಯಲಿದೆ. ಸಾರ್ವಜನಿಕರಿಗೆ ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಮಳಿಗೆಗಳಲ್ಲಿ ವಸ್ತುಗಳನ್ನು ಖರೀದಿಸಲು ಅವಕಾಶವಿದ್ದು ಮೇಳಕ್ಕೆ ಪ್ರವೇಶ ಸಂಪೂರ್ಣ ಉಚಿತವಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಂಜುನಾಥ ಕಾಮತ್, ಗಣೇಶ್ ಗುನಗಾ, ರಾಮಕೃಷ್ಣ ನಾಯ್ಕ ಉಪಸ್ಥಿತರಿದ್ದರು.

# ಇಂದು ಬೀದರ ಕೋಟೆ ಮೇಲೆ ಏರ್ ಶೋ

• **ಮಲ್ಲಮ್ಮ ನುಡಿ ವಾರ್ತೆ ಬೀದರ:**

ಭಾರತೀಯ ವಾಯುಪಡೆ ಬೀದರ ವತಿಯಿಂದ ಬೀದರ ಕೋ-ಟೆಯ ಆವರಣದ ಮೇಲೆ ದಿನಾಂಕ: 16-01-2026 ರಂದು ಮಧ್ಯಾಹ್ನ 3 ಗಂಟೆಗೆ ಬೀದರ್ ಏರ ಶೋ ಹಮ್ಮಿಕೊಳ್ಳಲಾಗಿದೆ.

ಭಾರತೀಯ ವಾಯುಪಡೆಯ ಸೂರ್ಯ ಕಿರಣ್ ಏರೋಬ್ಯಾಟಿಕ್ಸ್ ತಂಡದಿಂದ ಏರ್ ಶೋ ನಡೆಯಲಿದ್ದು, ಇದರಲ್ಲಿ ಅದ್ಭುತ ವೈಮಾನಿಕ ಕಸರತ್ತುಗಳನ್ನು ಕಾಣಬಹುದಾಗಿದೆ.

ಬೀದರ ಜಿಲ್ಲೆಯ ಎಲ್ಲಾ ಸಾರ್ವಜನಿಕರಿಗೆ ಏರ ಶೋ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದ್ದು, ಮಧ್ಯಾಹ್ನ 3 ಗಂಟೆಯೊಳಗೆ ಸಾರ್ವಜನಿಕರು ಬೀದರ ಕೋಟೆಯ ಒಳಗಡೆ ನಿಗದಿತ ಸ್ಥಳದೊಳಗೆ ಉಪಸ್ಥಿತರಿದ್ದು, ಬೀದರ ಏರ್ ಶೋ ವೀಕ್ಷಿಸಬಹುದಾಗಿದೆ ಎಂದು ಬೀದರ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾಂಜಾದಿಂದ ಬೈಕ್ ಸವಾರ ಸಾವು: ಖಂಡ್ರೆ ಸಂತಾಪ

• **ಮಲ್ಲಮ್ಮ ನುಡಿ ವಾರ್ತೆ ಬೀದರ:**

ಮಕರ ಸಂಕ್ರಾಂತಿ ಅಂಗವಾಗಿ ಗಾಳಿಪಟ ಹಾರಿಸುವ ವೇಳೆ ನಿಷೇಧಿತ ಚೀನಾ ತಯಾರಿಕೆಯ ಮಾಂಜಾ ದಾರ ಬಳಕೆ ಮಾಡಿರುವ ಪರಿಣಾಮ, ರಾಷ್ಟ್ರೀಯ ಹೆದ್ದಾರಿ 65ರ ನಿರ್ಣಾ ಕ್ರಾಸ್ ಬಳಿ ಈ ದಾರಕ್ಕೆ ಸಿಲುಕಿ ದ್ವಿಚಕ್ರ ವಾಹನ ಓಡಿಸುತ್ತಿದ್ದ ವ್ಯಕ್ತಿಯೊಬ್ಬರು ದಾರುಣವಾಗಿ ಸಾವನ್ನಪ್ಪಿರುವ ಬಗ್ಗೆ ಅರಣ್ಯ, ಜೀವಿಶಾಸ್ತ್ರ ಮತ್ತ ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ ಖಂಡ್ರೆ ತೀವ್ರ ನೋವು ವ್ಯಕ್ತಪಡಿಸಿದ್ದಾರೆ.

ಬೀದರ್ ತಾಲೂಕು ಬಂಬುಳಗಿ ಗ್ರಾಮದ ಸಂಜೀಕುಮಾರ್ ತಂದೆ ಗುಂಡಪ್ಪ ಹೊಸಮನಿ (49)ಅವರ ಸಾವಿಗೆ ಈಶ್ವರ ಖಂಡ್ರೆ ಕಂಬನಿ ಮಿಡಿದಿದ್ದಾರೆ. ಕೂಡಲೇ ಜಿಲ್ಲೆಯಾದ್ಯಂತ ಯಾವುದೇ ಮಳಿಗೆಯಲ್ಲಿ ನಿಷೇಧಿತ ಚೀನಿ ಮಾಂಜಾ ದಾರ ಮಾರಾಟ ಮಾಡದಂತೆ ಕ್ರಮ ಕೈಗೊಳ್ಳುವಂತೆ ಮತ್ತು ಈ ಪ್ರಕರಣದಲ್ಲಿ ವ್ಯಕ್ತಿಯ ಸಾವಿಗೆ ಕಾರಣರಾದವರನ್ನು ಪತ್ತೆ ಹಚ್ಚಿ ಕಾನೂನು ರೀತ್ಯ ಕ್ರಮ ಜರುಗಿಸಲು ಹಾಗೂ ಇನ್ನು ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಜನ ಜಾಗೃತಿ ಮೂಡಿಸಲು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಲಿಖಿತ ಸೂಚನೆ ನೀಡಿದ್ದಾರೆ.ತತ್ ಕ್ಷಣವೇ ಈ ಬಗ್ಗೆ ಜಿಲ್ಲೆಯ ಸಾರ್ವಜನಿಕರ ಮೊಬೈಲ್ ಸಂಖ್ಯೆಗೆ ಸಾಮಾಜಿಕ ತಾಣಗಳ ಮೂಲಕ ಸಂದೇಶ ರವಾನಿಸಿ

## 60 ವರ್ಷಗಳ ಹೋರಾಟಕ್ಕೂ ಫಲವಿಲ್ಲ

# ರಾಜೀವ್ ಗಾಂಧಿನಗರದ 187 ಕುಟುಂಬಗಳಿಗೆ ಹಕ್ಕುಪತ್ರಕ್ಕೆ ಆಗ್ರಹ.



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.34ರ ರಾಜೀವ್ ಗಾಂಧಿನಗರದಲ್ಲಿ ಕಳೆದ ಸುಮಾರು 60 ವರ್ಷಗಳಿಂದ ವಾಸಿಸುತ್ತಿರುವ 187 ಕುಟುಂಬಗಳಿಗೆ ಇನ್ನೂ ಹಕ್ಕುಪತ್ರ ವಿತರಣೆ ಆಗದಿರುವುದನ್ನು ಖಂಡಿಸಿ ನಿವಾಸಿಗಳು ಮನವಿ ಸಲ್ಲಿಸಿದ್ದಾರೆ.

ಮಹಾನಗರ ಪಾಲಿಕೆ ವ್ಯಾಪ್ತಿಯ ಟಿ.ಎಸ್. ನಂ.220 ಜಮೀನಿನಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಹಕ್ಕುಪತ್ರ ನೀಡುವಂತೆ ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಬೇಕೆಂದು ಕರ್ನಾಟಕ ಸರ್ಕಾರದ ವಕ್ಸ್ ಮತ್ತು ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಅವರಿಗೆ ದಲಿತ ಸಂಘರ್ಷ ಸಮಿತಿ (ಸಾಗರ ಬಣ) ಯ ಹಿರಿಯ ನಾಯಕ ಮಾನಯ್ಯ ಹಾಗೂ ಅವರು ಹಾಗೂ ರಾಜೀವ್ ಗಾಂಧಿನಗರದ ನಿವಾಸಿಗಳು ಯುವ ಹೋರಾಟಗಾರರಾದ ಕಟ್ಟೇಸ್ವಾಮಿ ನಾರಾಯಣ ಮನವಿ ಸಲ್ಲಿಸಿದರು.

ರಾಜೀವ್ ಗಾಂಧಿನಗರದ ಟಿ.ಎಸ್. ನಂ.220 ಜಮೀನಿನಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಜಿಲ್ಲಾಧಿಕಾರಿಗಳು ಮಾ.15ರಂದು ಅಂತಿಮ ಅಧಿಸೂಚನೆ ಹೊರಡಿಸಿ ಆದೇಶ ನೀಡಿರುವುದಾಗಿ ತಿಳಿದುಬಂದಿದೆ. ಅಲ್ಲದೆ 2025ರ ಆ.01ರಂದು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಖಾತೆ ಬದಲಾವಣೆ ಮಾಡಿ ಸಂಬಂಧಿತ ದಾಖಲೆಗಳನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಹಸ್ತಾಂತರಿಸಿದ್ದಾರೆ.

ಆದರೂ ಸಹ 2023ರಿಂದ ಇದುವರೆಗೆ ನಿವಾಸಿಗಳಿಗೆ ಹಕ್ಕುಪತ್ರ ವಿತರಣೆ ವಿಳಂಬವಾಗುತ್ತಿರುವುದು ನಿವಾಸಿಗಳಲ್ಲಿ ತೀವ್ರ ಆತಂಕಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ತಕ್ಷಣವೇ ಹಕ್ಕುಪತ್ರ ವಿತರಿಸಲು ನಿರ್ದೇಶನ ನೀಡಬೇಕೆಂದು ರಾಜೀವ್ ಗಾಂಧಿನಗರದ ನಿವಾಸಿಗಳು ಹಾಗೂ ದಲಿತ ಸೇನೆಯ ನಾಯಕರು ಕಟ್ಟೇಸ್ವಾಮಿ ನಾರಾಯಣ, ಅರುಣ್ ಕುಮಾರ್, ಮಾನಪ್ಪ ಮತ್ತು ರತ್ನಯ್ಯ ಅವರು ಆಗ್ರಹಿಸಿದರು.

ನ್ಯಾಯ ಸಿಗದಿದ್ದಲ್ಲಿ ಮುಂದಿನ ದಿನಗಳಲ್ಲಿ ಹೋರಾಟವನ್ನು ತೀವ್ರಗೊಳಿಸುವುದಾಗಿ ನಿವಾಸಿಗಳು ಎಚ್ಚರಿಕೆ ನೀಡಿದ್ದಾರೆ. ಈ ಸಂದರ್ಭದಲ್ಲಿ ರಾಜೀವ್ ಗಾಂಧಿನಗರದ ಅನೇಕ ನಿವಾಸಿಗಳು ಉಪಸ್ಥಿತರಿದ್ದರು.

# ಶಾಸಕ ಪ್ರಭು ಚವ್ಹಾಣ ಸಂಕ್ರಾಂತಿ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ ಔರಾದ(ಬಿ):**

ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಘಮಸುಬಾಯಿ ತಾಂಡಾ ನಿವಾಸದಲ್ಲಿ ಜ.15ರಂದು ಸಾರ್ವಜನಿಕರೊಂದಿಗೆ ಮಕರಸಂಕ್ರಾಂತಿ ಹಬ್ಬವನ್ನು ಸಾಂಪ್ರದಾಯಿಕವಾಗಿ ಆಚರಿಸಿದರು.

ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಆತ್ಮೀಯರು, ಮುಖಂಡರು, ಕಾರ್ಯಕರ್ತರು ಮತ್ತು ಸಾರ್ವಜನಿಕರಿಗೆ ಎಳ್ಳು ಬೆಲ್ಲ ಹಂಚಿ ಶುಭ ಕೋರಿದರು. ತಾಂಡಾದಲ್ಲಿ ಸಂಸ್ಕೃತಿ ಹಾಗೂ ಗ್ರಾಮೀಣ ಪರಂಪರೆಯನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಮಕರ ಸಂಕ್ರಾಂತಿ ನಮ್ಮ ಭಾರತೀಯ ಸಂಸ್ಕೃತಿಯ ಮಹತ್ವದ ಹಬ್ಬವಾಗಿದೆ. ಸೂರ್ಯನ ಪಥ ಬದಲಾವಣೆಯ ಹೊಸ ಆರಂಭವನ್ನು ಮತ್ತು ಕತ್ತಲೆಯಿಂದ ಬೆಳಕಿನತ್ತ, ನಿರಾಶೆಯಿಂದ ಆಶೆಯತ್ತ ಸಾಗುವ ಸಂಕೇತ ನೀಡುವ ಈ ಹಬ್ಬವನ್ನು ದೇಶಾದ್ಯಂತ ವಿವಿಧ ಹೆಸರುಗಳಿಂದ ಆಚರಿಸಲಾಗುತ್ತದೆ.

ಈ ಹಬ್ಬವು ಕೃಷಿ ಸಂಸ್ಕೃತಿಯ ಪ್ರತೀಕ. ರೈತರು ವರ್ಷಪೂರ್ತಿ ಮಾಡಿದ ಪರಿಶ್ರಮಕ್ಕೆ ಫಲ ದೊರೆಯುವ ಸಮಯದಲ್ಲಿ ಈ ಹಬ್ಬ ಆಚರಿಸುವುದು ವಿಶೇಷವಾಗಿದೆ. ಎಳ್ಳು ಬೆಲ್ಲ ಹಂಚಿಕೊಂಡು ಎಳ್ಳು ಬೆಲ್ಲ ತಿನ್ನಿ, ಒಳ್ಳೆ ಮಾತಾಡಿ ಎಂದು ಹೇಳುವ ಮೂಲಕ ಪರಸ್ಪರ ಸೌಹಾರ್ದತೆ, ಪ್ರೀತಿ ಮತ್ತು ಸಹಬಾಳ್ವೆಯ ಸಂದೇಶವನ್ನು ನೀಡುತ್ತದೆ.

ಮಕರ ಸಂಕ್ರಾಂತಿ ಹಬ್ಬವು ಶಾಂತಿ, ಸಹೋದರತ್ವ ಹಾಗೂ ಸಮೃದ್ಧಿಯ ಸಂಕೇತವಾಗಿದೆ. ಇಂತಹ ಹಬ್ಬಗಳು ಸಮಾಜದಲ್ಲಿ ಏಕತೆ ಮತ್ತು ಸೌಹಾರ್ದತೆಯನ್ನು ಮತ್ತಷ್ಟು ಬಲಪಡಿಸುತ್ತವೆ ಎಂದು ಸಂಕ್ರಾಂತಿಯ ಮಹತ್ವದ ಬಗ್ಗೆ ತಿಳಿಸಿದರು. ರೈತರ ಸಂಭ್ರಮದ ಹಬ್ಬವಾಗಿರುವ ಸಂಕ್ರಾಂತಿ ನಾಡಿನ ಜನತೆಗೆ ನೆಮ್ಮದಿ ಕಲ್ಪಿಸಲಿ, ಎಲ್ಲರಿಗೂ ಸುಖ, ಶಾಂತಿ, ಸಂತೋಷ ಮತ್ತು ಸಮೃದ್ಧಿ ಹೊತ್ತು ತರಲೆಂದು ಹಾರೈಸುತ್ತೇನೆ ಎಂದು ಶುಭ ಕೋರಿದರು. ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಮಾಂಜಾ ದಾರ ನಿಷೇಧಿಸಿದ ಜಿಲ್ಲಾಡಳಿತ

• **ಮಲ್ಲಮ್ಮ ನುಡಿ ವಾರ್ತೆ ಬೀದರ:**

ಬೀದರ್ ಜಿಲ್ಲೆಯ ಜಿಲ್ಲೆಯಾದ್ಯಂತ ಗಾಳಿಪಟ (Kite) ಹಾರಿಸಲು ನಿಷೆ ಧಿತ ಮಾಂಜಾ ದಾರ (Manja Thread) ಬಳಕೆ ಮಾಡುವುದರಿಂದ ಪ್ರಾಣಿ-ಪಕ್ಷಿಗಳಿಗೆ ಹಾಗೂ ಬೈಕ್ ಸವಾರರಿಗೆ ಮಾರಣಾಂತಿಕ ಗಾಯಗಳನ್ನು ಉಂಟುಮಾಡುವುದಲ್ಲದೇ ಸಾವಿಗೂ ಕಾರಣವಾಗುತ್ತದೆ. ಇವು ಸುಲಭವಾಗಿ ಕತ್ತರಿಸುವುದಿಲ್ಲ ಮತ್ತು ಪರಿಸರದಲ್ಲಿ ದೀರ್ಘಕಾಲ ಉಳಿಯುತ್ತವೆ ಇದರಿಂದಾಗಿ ಪರಿಸರ ಹಾನಿಯೂ ಉಂಟಾಗುತ್ತದೆ. ಆದುದರಿಂದ ಗಾಳಿಪಟ ಹಾರಿಸಲು ಕೇವಲ ಹತ್ತಿ ದಾರ (Cotton thread) ಬಳಸಲು ಮಾತ್ರ ಅನುಮತಿ ಇರುತ್ತದೆ. ನಿಷೆ ಧಿತ ಮಾಂಜಾ ದಾರ (Manja Thread) ತಯಾರಿಕೆ, ಸಂಗ್ರಹಣೆ, ಮಾರಾಟ ಮತ್ತು ಬಳಕೆಯನ್ನು ಮಾನ್ಯ ರಾಷ್ಟ್ರೀಯ ಹಸಿರು ಪೀಠವು (NGT) ಸಂಪೂರ್ಣವಾಗಿ ನಿಷೆ ಧಿಸಿ ಆದೇಶಿಸಿರುತ್ತದೆ. ಒಂದು ವೇಳೆ ಇಂತಹ ನಿಷೆ ಧಿತ ಮಾಂಜಾ ದಾರ (Manja Thread) ತಯಾರಿಕೆ, ಸಂಗ್ರಹಣೆ, ಮಾರಾಟ ಮತ್ತು ಬಳಕೆ ಮಾಡುವವರ ವಿರುದ್ಧ ಪರಿಸರ ಸಂರಕ್ಷಣಾ ಕಾಯ್ದೆ -1986, ವನ್ಯ ಜೀವಿ ಸಂರಕ್ಷಣಾ ಕಾಯ್ದೆ ಮತ್ತು ಭಾರತೀಯ ನ್ಯಾಯ ಸಂಹಿತೆ ಕಲಂಗಳ ಅಡಿಯಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಡಳಿತದಿಂದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

# ಹಂಪಿ ಉತ್ಸವ ನಾಡ ಹಬ್ಬವಿದ್ದಂತೆ ವಿಜೃಂಭಣೆಯ ವಿನೂತನ ಉತ್ಸವ ಆಚರಣೆಗೆ ಸಿದ್ದರಾಗಿ

• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ (ಹೊಸಪೇಟೆ):**

ವಿಶ್ವಪ್ರಸಿದ್ಧಿ ವಿಶ್ವಪಾರಂಪರಿಕ ತಾಣವಾದ ಹಂಪಿ ಉತ್ಸವವು ನಾಡ ಹಬ್ಬವಿದ್ದಂತೆ, ಎಲ್ಲರೂ ಸೇರಿ ವಿಜೃಂಭಣೆಯಿಂದ ಹಾಗೂ ವಿನೂತನವಾಗಿ ಆಚರಿಸಲು ಎಲ್ಲಾ ಸಿದ್ಧತೆ ಕೈಗೊಳ್ಳುವಂತೆ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಅಧಿಕಾರಿಗಳಿಗೆ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಹಂಪಿ ಉತ್ಸವ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಂಪಿ ಉತ್ಸವವು ಮುಂಬರುವ ಫೆಬ್ರವರಿ 13, 14 ಹಾಗೂ 15 ರಂದು ಹಮ್ಮಿಕೊಳ್ಳಲಾಗಿದೆ. ಫೆಬ್ರವರಿ 13ರಂದು ಹಂಪಿ ಉತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಿದ್ಯುಕ್ತವಾಗಿ ಚಾಲನೆ ನೀಡುವರು. ಆದ್ದರಿಂದ




ಅಧಿಕಾರಿಗಳು ಕಳೆದ ಬಾರಿಗಿಂತಲೂ ಈ ವರ್ಷ ಅಚ್ಚುಕಟ್ಟಾಗಿ ಆಯೋಜನೆ ಮಾಡುವ ನಿಟ್ಟಿನಲ್ಲಿ ಅಗತ್ಯ ಸಿದ್ದತೆ ಕೈಗೊಳ್ಳಬೇಕು. ಕಳೆದ ಬಾರಿ ಉಂಟಾದ ಲೋಪದೋಷ, ಇನ್ನಿತರೆ ಸಮಸ್ಯೆಗಳು ಮರುಕಳಿಸದಂತೆ ಅಗತ್ಯ ಕ್ರಮವಹಿಸಬೇಕು ಎಂದರು.

ಶಿಷ್ಟಾಚಾರದಂತೆ ವೇದಿಕೆ ಕಾರ್ಯಕ್ರಮ ಸಿದ್ದತೆ ಮಾಡಿಕೊಳ್ಳಬೇಕು. ಆರೋಗ್ಯ ಇಲಾಖೆಯಿಂದ ವೈದ್ಯಕೀಯ ತಪಸಣಾ ಶಿಬಿರ ಆಯೋಜನೆ ಮಾಡುವಂತೆ ನಿರ್ದೇಶಿಸಿದರು. ಪೊಲೀಸ್ ಇಲಾಖೆ ವತಿಯಿಂದ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಬೇಕು ಎಂದು ತಿಳಿಸಿದ ಅವರು, ಜಿಲ್ಲೆಯ ವಿವಿಧ ತಾಲ್ಲೂಕು ಹಾಗೂ ಗ್ರಾಮೀಣ ಭಾಗದಿಂದ ಬರುವಂತಹ ಸಾರ್ವಜನಿಕರಿಗೆ ಕೆಎಸ್‌ಆರ್‌ಟಿಸಿ ವತಿಯಿಂದ ಸಾರಿಗೆ ವ್ಯವಸ್ಥೆ, ಅಗತ್ಯ ಮೂಲಭೂತ ಸೌಕರ್ಯ ಒದಗಿಸಲಾಗುವುದು ಎಂದರು. ಉತ್ಸವದ ಅಂಗವಾಗಿ ಕಲೆ, ಚಿತ್ರಕಲೆ, ವಾಸ್ತುಶಿಲ್ಪ, ಫಲಪುಷ್ಪ ಪ್ರದರ್ಶನ, ಸಾಹಸ ಕ್ರೀಡೆ, ಸುಗಮ ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗುವುದು. ಸ್ಥಳೀಯ ಕಲಾವಿದರಿಂದ ವಿಜಯನಗರ ಸಾಮ್ರಾಜ್ಯದ ಆಡಳಿತ ಗತವೈಭವ ಕುರಿತ ಧ್ವನಿ ಬೆಳಕು ಪ್ರದರ್ಶನ ಮಾಡಲಾಗುತ್ತದೆ. ಅದರಂತೆ ಖ್ಯಾತ ಕಲಾವಿದರು ಹಂಪಿ ಉತ್ಸವದಲ್ಲಿ ಭಾಗವಹಿಸಿ ನಾಡಹಬ್ಬ ಹಂಪಿ ಉತ್ಸವಕ್ಕೆ ಮತ್ತಷ್ಟು ಮೆರಗು ತುಂಬಲಿದ್ದಾರೆ ಎಂದು ತಿಳಿಸಿದರು.

ವಿಶೇಷ ಡ್ರೋನ್ ಶೋ ಹಾಗೂ ಗಾಳಿಪಟ ಉತ್ಸವ: ಈ ಬಾರಿ ಉತ್ಸವದಲ್ಲಿ ವಿಶೇಷವಾಗಿ ಮುಂಬೈ ತಾಂತ್ರಿಕ ಕಲಾಬಳಗದಿಂದ ಮೂರು ಸಾವಿರ ಡ್ರೋನ್ ಬಳಸಿ ಡ್ರೋನ್ ಶೋ ಏರ್ಪಡಿಸಲಾಗಿದೆ. ಅದರಂತೆ ಗಾಳಿಪಟ ಉತ್ಸವ ಕೂಡ ಆಯೋಜಿಸಲಾಗಿದ್ದು, ಇವು ಹಂಪಿ ಉತ್ಸವದ ವರ್ಷದ ವಿಶೇಷವಾಗಿದ್ದು ಮತ್ತಷ್ಟು ರಂಗು ಹೆಚ್ಚಲಿವೆ ಎಂದರು.

ಇದೇ ಸಂದರ್ಭದಲ್ಲಿ ಹಂಪಿ ಉತ್ಸವ ಲೋಗೋ ಬಿಡುಗಡೆಗೊಳಿಸಿದರು. ಸಭೆಯಲ್ಲಿ ಹುಡಾ ಅಧ್ಯಕ್ಷ ಹೆಚ್.ಎನ್.ಎಫ್.ಇಮಾಮ್ ನಿಯಾಜಿ, ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ, ಜಿಲ್ಲಾ ಪಂಚಾಯತ್ ಸಿಇಓ ನೋಂಗ್ಜಾಯ್ ಅಹಮದ್ ಅಲಿ ಅಕ್ರಂ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್. ಜಾಹ್ನವಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಅನುಪಮ, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

# ಬದುಕಿನ ಅರ್ಥ ತಿಳಿಯಲು ಸತ್ಸಂಗದ ಸಾಂಗತ್ಯ ಬೇಕು



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಭವದ ಕರ್ಮಗಳಿಗೆ ಒಳಗಾಗಿ ತನ್ನನ್ನು ತಾನು ಅರಿತುಕೊಳ್ಳದಿರುವ ಮನುಷ್ಯನಿಗೆ ಸತ್ಸಂಗದ ಸಾಂಗತ್ಯ ಬೇಕಾಗಿದೆ ಎಂದು ಬೇಲೂರಿನ ಗುರುಬಸವೇಶ್ವರ ವಿರಕ್ತಮಠದ ಮಹಾಂತ ಬಸವಲಿಂಗ ಸ್ವಾಮಿಗಳು ಹೇಳಿದರು.

ತಾಲೂಕಿನ ಬೆನಕಟ್ಟಿ ಗ್ರಾಮದಲ್ಲಿ ತತ್ವಜ್ಞಾನಿ ಮಹಾಯೋಗಿ ವೇಮನರ 614 ನೇ ಜಯಂತಿ ಹಾಗೂ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಜ್ಞಾನ ದಾಸೋಹ ಕಾರ್ಯಕ್ರಮದಲ್ಲಿ ವೇಮನರ 'ನರ ಜನ್ಮವ ತಾನೆತ್ತಿಯು ಪರಮಾತ್ಮನರಿಯದಿರಲು..' ವಚನ ಆಧರಿಸಿ ಶ್ರೀಗಳು ಪ್ರವಚನ ನೀಡಿದರು.

ಅರಿವಿನ ಜನ್ಮ ಪಡೆದಿರುವ ಮನುಷ್ಯನಿಗೆ ತನ್ನಲ್ಲಿ ತುಂಬಿಕೊಂಡಿರುವ ಅಹಂಕಾರದ ಪರದೆಯನ್ನು ಸರಿಸಲು ಸತ್ಸಂಗದ ಅವಶ್ಯಕತೆಯಿದೆ ಎಂದ ಮಹಾಂತ ಬಸವಲಿಂಗ ಸ್ವಾಮೀಜಿ, ನಾನು ಯಾರು, ಭೂಮಿಗೆ ಏಕೆ ಬಂದೆ, ಎಲ್ಲಿಗೆ ಹೋದೆ ಎನ್ನುವುದನ್ನು ಅರಿತು-ಕೊಂಡರೆ ಅದುವೇ ನಿಜವಾದ ಬದುಕು ಎನ್ನುವುದನ್ನು ವೇಮನರು ತಮ್ಮ ವಚನಗಳಲ್ಲಿ ಹೇಳಿದ್ದಾರೆ ಎಂದರು.

ಮನುಷ್ಯ ಜನ್ಮದ ಪರಮ ಗುರಿ ಪರಮಾತ್ಮನ ಅನುಸಂಧಾನ ಮಾಡುವುದು. ಆದರೆ ಆ ಬಗ್ಗೆ ಚಿಂತನೆ ಮಾಡದೇ ಭೌತಿಕ ವಸ್ತುಗಳ ಮೇಲೆ ಅತಿಯಾಶೆ ಇರಿಸಿಕೊಂಡು ಅದುವೇ ಬದುಕು ಎನ್ನುವವನಿಗೆ ಸತ್ಯದ ಅರಿವಾಗದು ಎಂದ ಅವರು, ಮಹಾಯೋಗಿ ವೇಮನರು ಸಹ ಬದುಕಿನ ಸತ್ಯವನ್ನು ಅರಿಯಬೇಕಾದರೆ ಬಹಳಷ್ಟು ದಿನ ಪರಿತಪಿಸಬೇಕಾಯಿತು. ಹೇಮರಡ್ಡಿ ಮಲ್ಲಮ್ಮ ಅವರಿಗೆ ಜೀನವದ ಸತ್ಯದ ಅರಿವು ಮೂಡಿಸಿದ ನಂತರ ತಮ್ಮಲ್ಲಿ ಸತ್ಯ, ಸತ್ವದ ದೀಪ ಬೆಳಗಿಸಿಕೊಂಡು ಯೋಗಿಯಾಗಿ, ಜ್ಞಾನಿಯಾಗಿ ಲೋಕ ಬೆಳಗಿದರು ಎಂದು ಹೇಳಿದರು.

ಪ್ರವಚನ ಆರಂಭಕ್ಕೂ ಮುನ್ನ ಹೇಮರಡ್ಡಿ ಮಲ್ಲಮ್ಮ ಭಜನಾ ತಂಡದವರಿಂದ ವೇಮನರ ವಚನಾಧಾರಿತ ಭಜನೆ ನಡೆಸಿಕೊಟ್ಟರು. ಸುರೇಶ ಮನಗೂಳಿ ಪರಿಚಯಿಸಿದರು. ಮಾಲತೇಶ ಪಾಟೀಲ ನಿರೂಪಿಸಿದರು. ನಂತರ ಶಿವನಗೌಡ ಯಡಹಳ್ಳಿ ಅವರಿಂದ ಅನ್ನ ಪ್ರಸಾದ ಸೇವೆ ಜರುಗಿತು.

# ಪಿ.ಎಲ್.ಹೂಗಾರ ದತ್ತಿ ಸಾಹಿತ್ಯ ಪ್ರಶಸ್ತಿ ಪ್ರಕಟ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕಲಾದಗಿಯ ಪಿ.ಎಲ್.ಹೂಗಾರ ದತ್ತಿ ಸಾಹಿತ್ಯ ಪ್ರಶಸ್ತಿಗೆ 2025 ರ ಜಿಲ್ಲಾ ಕ್ರಿಯಾಶೀಲ ಲೇಖಕ ಮತ್ತು ಕ್ರಿಯಾಶೀಲ ಲೇಖಕಿ ಪ್ರಶಸಿಗಳನ್ನು ಪ್ರಕಟಿಸಿದೆ.

ದತ್ತಿ ದಾನಿಗಳಾದ ಪಾಂಡಪ್ಪ ಲಕ್ಷ್ಮಣ ಹೂಗಾರ ತಮ್ಮ ತಾಯಿ ಲಿಂ.ಬಾಗವ್ವ ಹಾಗೂ ತಂದೆ ದಿ.ಲಕ್ಷ್ಮಣ ಪಾಂಡಪ್ಪ ಹೂಗಾರ ಇವರ ಸ್ಮರಣಾರ್ಥ ಕೊಡಮಾಡುವ 2025 ರ ಕ್ರಿಯಾಶೀಲ ಲೇಖಕ ಪ್ರಶಸ್ತಿಗೆ ಡಾ.ಕರವೀರಪ್ರಭು ಕ್ಯಾಲಕೊಂಡ, ಡಾ.ವೈ.ವೈ.ಕೊಕ್ಕನವರ ಹಾಗೂ ಡಾ.ರಮೇಶ ಕುಂಬಾರ ಅವರನ್ನು ಆಯ್ಕೆಮಾಡಲಾಗಿದೆ.

ಹೂಗಾರ ಅವರ ಅಜ್ಜಿ ಲಿಂ.ಯಮನವ್ವ ಪಾಂಡಪ್ಪ ಹೂಗಾರ ಹಾಗೂ ಶಿವಶರಣೆ ಶಂಕ್ರೆಮ್ಮ ಹೂಗಾರ ಇವರ ಸ್ಮರಣಾರ್ಥ ಕೊಡಮಾಡುವ ಕ್ರಿಯಾಶೀಲ ಲೇಖಕಿ ಪ್ರಶಸ್ತಿಗೆ ವಿಜಯಲಕ್ಷ್ಮೀ ಕಗಲಗೊಂಬ, ಅನಸೂಯಾ ಯಲಿಗಾರ ಹಾಗೂ ಮಲ್ಲಮ್ಮ ಜೊಂಡಿ ಆಯ್ಕೆಯಾಗಿದ್ದಾರೆಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನೇವರಿ 22 ರಂದು ಕಲಾದಗಿಯಲ್ಲಿ ನಡೆಯುವ ದತ್ತಿ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವದು ಎಂದು ಶೆಲ್ಲಿಕೇರಿ ತಿಳಿಸಿದ್ದಾರೆ.

# ಆರೋಗ್ಯ ತಪಾಸಣೆ



• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು:**

ನಗರದ 18 ರಂದ ಭಾನುವಾರ ಶಬ್ಬೀರ್ ನಗರ ಶಾಹಿ ಮಸೀದಿ ಮುಂಭಾಗ ಟೀಮ್ ಫ್ರೀಡಂ ವತಿಯಿಂದ ಆರೋಗ್ಯ ತಪಾಸಣೆ ನಡೆಸಲಾಗುವುದೆಂದು ಅಧ್ಯಕ್ಷರು ಸನಾವುಲ್ಲ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ

ನಂತರ ಮಾತನಾಡಿ ಸುದ್ದಿಗಾರನಿಗೆ ಮಾತನಾಡಿ ಆರೋಗ್ಯ ಶಿಬಿರದಲ್ಲಿ ರಕ್ತದಾನ ಕಣ್ಣಿನ ದಂತ ತಪಾಸಣೆ ಕೂಡ ನಡೆಯಲಿದೆ ಹಾಗೂ ಮಕ್ಕಳಿಂದ ಹಿಡಿದು ವೃದ್ಧಾದವರಿಗೂ ತಪಾಸಣೆ ನಡೆಸಲಾಗುವುದು ಇಂದು ತಿಳಿಸಿದ್ದಾರೆ ಈ ಸಂದರ್ಭದಲ್ಲಿ

ಉಪಾಧ್ಯಕ್ಷರು ಮೊಹಮ್ಮದ್ ಜಾನ್ಯಾ ಕಾರ್ಯಾಧ್ಯಕ್ಷ ಮಹಮ್ಮದ್ ರೌಶನ್ ಪ್ರಧಾನಿ ಕಾರ್ಯದರ್ಶಿ ಸಮೀರ್ ಅಬ್ಬು ಮತ್ತು ಸದಸ್ಯರು ತಂಜೀಮ್ ಸಾಧಿಕ್ ಹಾಗೂ ಇನ್ನಿತರ ಸದಸ್ಯರು ಹಾಜರಿದ್ದರು.

# ಇಂದು ಜನ ಸಂಪರ್ಕ ಸಭೆ

• **ಮಲ್ಲಮ್ಮ ನುಡಿ ವಾರ್ತೆ ಬೀದರ:**

ಬೀದರ ಕಾರ್ಯ ಮತ್ತು ಪಾಲನೆ ವಿಭಾಗ ವ್ಯಾಪ್ತಿಯ ಔರಾದ(ಬಿ), ಭಾಲ್ಕಿ, ಬೀದರ, ಕಮಠಾಣ ಉಪ ವಿಭಾಗದಲ್ಲಿ ಜನವರಿ.17 ರಂದು ವಿವಿಧ ಉಪ ವಿಭಾಗಗಳಲ್ಲಿ ಜನ ಸಂಪರ್ಕಸಭೆ ಹಾಗೂ ಕೆಇಆಸಿಯ (ಎಸ್.ಓ.ಪಿ.) ಮಾನದಂಡಗಳನ್ನು ಕುರಿತು ಅರಿವು ಅರಿವು ಮೂಡಿಸುವಿಕೆ ಕಾರ್ಯಕ್ರಮವನ್ನು ಕಾರ್ಯನಿರ್ವಾಹಕ ಇಂಜಿನಿಯರರು(ವಿ),/ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಗುವಿಸಕಂನಿ ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿರುತ್ತದೆ.

ಜನಸಂಪರ್ಕ ಸಭೆಗಳ ವಿವರ: ಜನವರಿ.17 ರಂದು ಬೆಳಿಗ್ಗೆ 9 ಗಂಟೆಗೆ ಔರಾದ್ (ಬಿ) ಉಪ ವಿಭಾಗ ಕಛೇರಿಯಲ್ಲಿ, ಬೀದರ (ನಗರ ಉಪ ವಿಭಾಗ ಕಛೇರಿಯಲ್ಲಿ, ಕಮಠಾಣ ಉಪ ವಿಭಾಗ ಕಛೇರಿಯಲ್ಲಿ ಹಾಗೂ ಬೆಳಿಗ್ಗೆ 11 ಗಂಟೆಗೆ ಭಾಲ್ಕಿ ಉಪ ವಿಭಾಗ ಕಛೇರಿಯಲ್ಲಿ, ಬೀದರ (ಗ್ರಾಮೀಣ) ಉಪ ವಿಭಾಗ ಕಛೇರಿಗಳಲ್ಲಿ ಸಭೆಗಳು ನಡೆಯಲಿವೆ.ಕಾರಣ ಸಾರ್ವಜನಿಕರು ಹಾಗೂ ಗುವಿಸಕಂನಿ ಗ್ರಾಹಕರು ಸದರಿ ಸಭೆಯಲ್ಲಿ ಉಪಸ್ಥಿತರಿದ್ದು ಕುಂದುಕೊರತೆಯ ಅರ್ಜಿಗಳನ್ನು ಸಲ್ಲಿಸಲು ಬೀದರ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಅಭಿಯುಂತರರು(ವಿ) ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ಬಲ್ಡೋಟಾ ಹಠಾವೋ ಕೊಪ್ಪಳ ಬಚಾವೋ ಧರಣಿಗೆ 77ನೇ ದಿನ ಪೂರ್ಣ

• **ಮಲ್ಲಮ್ಮನುಡಿ ವಾರ್ತೆ ಕೊಪ್ಪಳ:**




ನಗರದ ಬಸವೇಶ್ವರ ವೃತ್ತದಲ್ಲಿ ಬರುವ ಶನಿವಾರ, ರವಿವಾರ ಕಾರ್ಖಾನೆ ವಿರೋಧಿ ಪರಿಸರ ಜಾಗೃತಿ ಮಾಡಲು ಬಿಳಿ ವಸ್ತ್ರದ ಮೇಲೆ ಸಹಿ ಸಂಗ್ರಹ ಆಂದೋಲನ ನಡೆಸಲಾಗುವುದು ಎಂದು ಜಂಟಿ ಕ್ರಿಯಾ ವೇದಿಕೆ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಹೇಳಿದರು.

ಕೊಪ್ಪಳ ಜನತೆ ಸಾವಿರಾರು ಸಂಖ್ಯೆಯಲ್ಲಿ ಈ ಆಂದೋಲನದಲ್ಲಿ ಭಾಗವಹಿಸಿ ಮುಂದಿನ ಪೀಳಿಗೆ ರಕ್ಷಿಸಲು ಮಾಲಿನ್ಯಕಾರಿ ಕಾರ್ಖಾನೆ ವಿರೋಧಿ ಹೋರಾಟಕ್ಕೆ ಬೆಂಬಲ ಮಾಡಬೇಕೆಂದು ವಿನಂತಿ ಮಾಡಿಕೊಂಡರು.

ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ನಡೆಸುತ್ತಿರುವ 77ನೇ ದಿನದ ಹೋರಾಟದಲ್ಲಿ ಕುಣಿಕೇರಿ ಗ್ರಾಮದ ರಮೇಶ ಡಂಬ್ರಳ್ಳಿ ಮಾತನಾಡಿ 'ನಾನು ಈ ಹಿಂದೆ ನೋಡಿದ ನಮ್ಮ ಗ್ರಾಮದ ಸೊಬಗು ಈಗ ಉಳಿದಿಲ್ಲ. ಸ್ವತಃ ನನ್ನ ಲಕ್ಷಗಟ್ಟಲೆ ಲಾಭ ಮಾಡುತ್ತಿದ್ದ ಎಲೆಬಳ್ಳಿ ತೋಟ ನನ್ನ ಕೈಯಾರೆ ಕಿತ್ತು ಹಾಕಿದ್ದೇನೆ. ಈಗ ಕಾರ್ಖಾನೆ ಕಂದು ದೂಳು, ಹಾರು ಬೂದಿ, ಹೊಗೆ ಆವರಿಸಿ ಏನೂ ಬಿತ್ತಿ ಬೆಳೆಯಲು ಆಗದೆ, ಫಲವತ್ತಾದ ನಮ್ಮ ಪೂರ್ವಿಕರು ಸಾಗು ಮಾಡುತ್ತಾ ಬಂದ ಭೂಮಿ ಬೀಳು ಬಿಡಲಾಗಿದೆ. ಕಾರ್ಖಾನೆ ಕೊಡುವ ಬಿಡಿಗಾಸು ನಮಗೆ ಬೇಡ. ನಿರಾತಂಕವಾದ ಕೃಷಿ ಬದುಕು ಮಾಡಲು ಬಿಟ್ಟರೆ ನಾವು ಬದುಕುತ್ತೇವೆ. ನಮಗೆ ಈಗ ಗೊತ್ತಾಗಿದೆ ಕಾರ್ಖಾನೆ ಇಲ್ಲಿದ್ದರೆ ನಾವು ಗ್ರಾಮದಲ್ಲಿ ಬದುಕಲು ಸಾಧ್ಯವಿಲ್ಲ. ಇಲ್ಲಿನ ಜನಪ್ರತಿನಿಧಿಗಳು ಶೀಘ್ರವೇ ಕಾರ್ಖಾನೆ ಬಂದ್ ಮಾಡಬೇಕು ಎಂದರು.

ಧರಣಿಗೆ ಕುಣಿಕೇರಿ ಗ್ರಾಮದ ರೈತರಾದ ಗವಿಸಿದ್ದಪ್ಪ ಹಲಿಗಿ, ಉಮೇಶ ಗಣಪ, ನಾಗರಾಜ ದೊಡ್ಡಮನಿ, ಮುದ್ದುರಂಗಪ್ಪ ಸಾದರ ಬೆಂಬಲಿಸಿದರು. ಸಂಚಾಲಕರಾದ ಮಲ್ಲಿಕಾರ್ಜುನ ಬಿ.ಗೋನಾಳ, ಮಂಜುನಾಥ ಜಿ. ಗೊಂಡಬಾಳ, ಪ್ರಕಾಶಕ ಡಿ.ಎಂ.ಬಡಿಗೇರ, ನಿವೃತ್ತ ಪ್ರಾಚಾರ್ಯರಾದ ಎಸ್.ಬಿ.ರಾಜೂರು,

ಬಿ.ಜಿ. ಕರಿಗಾರ, ಮೂಕಪ್ಪ ಮೇಸ್ತ್ರಿ ಬಸಾಪುರ, ನಿವೃತ್ತ ಕಾರ್ಮಿಕ ನಿರೀಕ್ಷಕರು ಶಾಂತಯ್ಯ ಅಂಗಡಿ, ನಿವೃತ್ತ ಅಂಚೆ ಅಧಿಕಾರಿ ರವಿ ಕಾಂತನವರ, ರತ್ನಮ್ಮ ದೊಡ್ಡಮನಿ, ಮಂಜುನಾಥ ಕವಲೂರು, ಶಿವಪ್ಪ ಜಲ್ಲಿ, ಯುವ ಸಂಘಟಕ ಸುಭಾನ್ ನೀರಲಗಿ, ಮಂಜುನಾಥ ಚಿತ್ರಗಾರ, ನಿವೃತ್ತ ಶಿಕ್ಷಕ ಶಿವಪ್ಪ ಪಾಲ್ಗೊಂಡರು.

# ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ ಕಾರ್ಯಕ್ರಮ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ ವಿಶ್ವವಿದ್ಯಾಲಯ ಮತ್ತು ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮ, ಕೊಪ್ಪಳ ರವರ ಸಂಯುಕ್ತಾಶ್ರಯದಲ್ಲಿ ಜನವರಿ 12 ರಂದು ಕೊಪ್ಪಳ ವಿಶ್ವವಿದ್ಯಾಲಯದ ಆಡಿಟೋರಿಯಂ ಹಾಲ್‌ನಲ್ಲಿ ಸ್ವಾಮಿ ವಿವೇಕಾನಂದರ 163ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ.ಎಸ್.ವಿ.ಡಾಣಿ ಅವರು, ಸ್ವಾಮಿ ವಿವೇಕಾನಂದರ ಚಿಂತನೆಗಳು ಸೇರಿದಂತೆ ಅನೇಕ ಮಹನೀಯರ ಅನುಭವ ನುಡಿಗಳು, ವಿಚಾರಗಳ ಪಾಲನೆ, ಬುದ್ಧ, ಬಸವ, ಅಂಬೇಡ್ಕರ್ ಸೇರಿದಂತೆ ಹಲವು ಮಹಾತ್ಮರ ಆದರ್ಶ, ತತ್ವ, ಸಾಧನೆಗಳ ಕುರಿತು ಮಾತನಾಡಿದರು.

ಶ್ರೀ ಚೈತನ್ಯಾನಂದ ಸ್ವಾಮೀಜಿರವರು ಮಾತನಾಡಿ, ಇಂದಿನ ಯುವ ಜನಾಂಗದಲ್ಲಿ ಧೈರ್ಯ, ಆತ್ಮವಿಶ್ವಾಸ ಕ್ಷೀಣಿಸುತ್ತಿದೆ. ವಿವೇಕಾನಂದರ ಆದರ್ಶಗಳು ಹಾಗೂ ಚಿಂತನೆಗಳನ್ನು ಪಾಲಿಸಿದಲ್ಲಿ ಯಾವುದೇ ಸಮಸ್ಯೆ ಮೆಟ್ಟಿ ನಿಲ್ಲಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿಠ್ಠಲ ಜಾಬಗೌಡರ್ ಮಾತನಾಡಿ, ಯಾರಲ್ಲಿ ಶಕ್ತಿ, ವಿವೇಚನೆ ಹಾಗೂ ಛಲ ಇರುತ್ತದೆಯೋ ಅವರೇ ನಿಜವಾದ ಯುವಕರು. ಯುವಕರು ಸದೃಢರಾದರೆ ದೇಶ ಸದೃಢವಾಗುತ್ತದೆ ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ಕುಲಸಚಿವರಾದ ಡಾ.ವೈ.ಬಿ. ಅಂಗಡಿ ಹಾಗೂ ಆಡಳಿತಾಧಿಕಾರಿಗಳಾದ ಪ್ರೊ. ತಿಮ್ಮಾರೆಡ್ಡಿ ಮೇಟಿ ಅವರು ಯುವಕರು ಸ್ವಾವಲಂಬನೆ ಬದುಕನ್ನು ಸಾಗಿಸುವ ಮೂಲಕ ದೇಶಕ್ಕೆ ಉತ್ತಮ ಕೊಡುಗೆ ನೀಡಲು ತಿಳಿಸಿದರು.

ಪ್ರಾಧ್ಯಾಪಕರಾದ ಡಾ.ಗೀತಾ ಪಾಟೀಲ್ ಸ್ವಾಗತಿಸಿದರು. ಡಾ.ಬಸವರಾಜ ಗಡಾದ ನಿರೂಪಿಸಿದರು. ಡಾ.ವೀರೇಶ ಉತ್ತಂಗಿ ವಂದಿಸಿದರು. ಕಾರ್ಯಕ್ರಮದಲ್ಲಿ ಇಲಾಖೆಯ ಸಿಬ್ಬಂದಿ ಹಾಗೂ ಕೊಪ್ಪಳ ವಿಶ್ವವಿದ್ಯಾಲಯದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ತರಬೇತಿ ಕಾರ್ಯಕ್ರಮ

• **ಮಲ್ಲಮ್ಮ ನುಡಿ ವಾರ್ತೆ ಬೀದರ:**

ಗೋಡಂಬಿ ಬೆಳೆಗೆ ಭಾರತ ಸರ್ಕಾರದಿಂದ ಪರಿಶಿಷ್ಟ ಜಾತಿಯವರಿಗೆ ಎಷ್ಟು ಸಾಧ್ಯವೋ ಅಷ್ಟು ದೊರೆಯುವ ಅನುದಾನವನ್ನು ಮತ್ತು ಇತರೇ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಭಾರತೀಯ ಕೃಷಿ ಅನುಸಂಧಾನ ಸಂಶೋಧನಾ ಸಂಸ್ಥೆ-ಗೋಡಂಬಿ ಸಂಶೋಧನಾ ನಿರ್ದೇಶನಾಲಯ, ಪುತ್ತುರು, ದಕ್ಷಿಣ ಕನ್ನಡ ಜಿಲ್ಲೆಯ ನಿರ್ದೇಶಕ ಡಾ. ಜೆ. ದಿನಕರ ಅಡಿಗಾ ಅವರು ಹೇಳಿದರು.

ಅವರು ಗುರುವಾರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ, ತೋಟಗಾರಿಕೆ ಮಹಾವಿದ್ಯಾಲಯ ಬೀದರ, ತೋಟಗಾರಿಕೆ ವಿಸ್ತರಣಾ ಶಿಕ್ಷಣ ಕೇಂದ್ರ ಮತ್ತು ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ-ಗೋಡಂಬಿ ಸಂಶೋಧನಾ ನಿರ್ದೇಶನಾಲಯ ಪುತ್ತುರು, ದಕ್ಷಿಣ ಕನ್ನಡ ಇವರುಗಳ ಸಂಯುಕ್ತ ಆಶ್ರಯದಲ್ಲಿ ಐ.ಸಿ.ಎ.ಆರ್.-ಡಿ.ಸಿ.ಆರ್. ಪುತ್ತುರು, ದಕ್ಷಿಣ ಕನ್ನಡ ಇವರ ಆರ್ಥಿಕ ನೆರವು ಆಧಾರಿತ "ತೋಟಗಾರಿಕೆ ನಾವೀನ್ಯತೆಗಳ ಅಳವಡಿಕೆ, ಪ್ರಚಾರ ಮತ್ತು ಕಾರ್ಯತಂತ್ರದ ಪರಿಕರಗಳ ವಿತರಣೆಯ ಮೂಲಕ ಕಲ್ಯಾಣ ಕರ್ನಾಟಕ ಪ್ರದೇಶದ ಪರಿಶಿಷ್ಟ (ಪ.ಜಾ) ಜಾತಿಯ ರೈತರ ಸಾಮರ್ಥ್ಯ ನಿರ್ಮಾಣದ ಮೂಲಕ ಆರ್ಥಿಕವಾಗಿ ವೃದ್ಧಿಗೊಳಿಸುವ ಕುರಿತು ತೋಟಗಾರಿಕೆ ಮಹಾವಿದ್ಯಾಲಯ, ಬೀದರನಲ್ಲಿ ಆಯೋಜಿಸಲಾದ ಒಂದು ದಿನದ ತರಬೇತಿ ಮತ್ತು ಪರಿಕರಗಳ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ಶೋಷಿತ ವರ್ಗದವರು ಇತರೇ ವರ್ಗದವರಂತೆ ಮುನ್ನೆಲೆಗೆ ಬಂದು ಸಮಾನತೆ ತರುವ ಸದುದ್ದೇಶದಿಂದ ಭಾರತ ಸರ್ಕಾರ ಈ ಯೋಜನೆಯ ಅಡಿಯಲ್ಲಿ ವಿವಿಧ ರೀತಿಯ ಪರಿಕರಗಳನ್ನು ಮತ್ತು ತೋಟಗಾರಿಕಾ ಸಸಿಗಳನ್ನು ಪರಿಶಿಷ್ಟ ಜಾತಿಯ ಸುಮಾರು 100 ಜನ ಬೀದರ ಜಿಲ್ಲೆಯ ವಿವಿಧ ತಾಲೂಕಿನ ರೈತರಿಗೆ ನೇರವಾಗಿ ವಿತರಣೆ ಮಾಡಲು ಹಾಗೂ ಒಂದು ದಿನದ ತೋಟಗಾರಿಕಾ ಬೆಳೆಗಳನ್ನು ಬೆಳೆಯುವ ಮಾಹಿತಿಯನ್ನು ಒದಗಿಸುವ ತರಬೇತಿ ಕಾರ್ಯಕ್ರಮನ್ನು ಹಮ್ಮಿಕೊಳ್ಳಲಾಗಿದೆ ಎಂದು ಭಾರತೀಯ ಕೃಷಿ ಅನುಸಂಧಾನ ಸಂಶೋಧನಾ ಸಂಸ್ಥೆ-ಗೋಡಂಬಿ ಸಂಶೋಧನಾ ನಿರ್ದೇಶನಾಲಯ, ಪುತ್ತುರು, ದಕ್ಷಿಣ ಕನ್ನಡ ಜಿಲ್ಲೆಯ ನಿರ್ದೇಶಕ ಡಾ. ಜೆ. ದಿನಕರ ಅಡಿಗಾ ಅವರು ಹೇಳಿದರು.

ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ. ಎಸ್.ವಿ. ಪಾಟೀಲ ಅವರು ಮಾತನಾಡಿ, ಪರಿಶಿಷ್ಟ ಜಾತಿ ರೈತರ ಆದಾಯ ದ್ವಿಗುಣಗೊಳಿಸುವ ಉದ್ದೇಶದಿಂದ ಈ ಕಾರ್ಯಕ್ರಮನ್ನು ಹಮ್ಮಿಕೊಳ್ಳಲಾಗಿದೆ. ತೋಟಗಾರಿಕಾ ಸಸಿಗಳು ಹಾಗೂ ಉದ್ಯಾನ ಉಪಕರಣಗಳನ್ನು ಸ್ವತ: ತಾವೇ ಉಪಯೋಗಿಸಿದಲ್ಲಿ ಇಂತಹ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸಾರ್ಥಕವಾಗುತ್ತದೆ.

# ಜ. 19, 20 ರಂದು ಸರ್ಕಾರಿ ನೌಕರರ ಕ್ರೀಡಾಕೂಟ ಸಾಂಸ್ಕೃತಿಕ ಸ್ಪರ್ಧೆಗಳು

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕೊಪ್ಪಳ ಜಿಲ್ಲಾ ಶಾಖೆ ವತಿಯಿಂದ 2025-26ನೇ ಸಾಲಿನ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಜನವರಿ 19 & 20 ಸೋಮವಾರ ಮತ್ತು ಮಂಗಳವಾರದಂದು ನಗರದ ಗದಗ ರಸ್ತೆಯ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದು, ಉದ್ಘಾಟನಾ ಕಾರ್ಯಕ್ರಮ ಜ. 19ರ ಬೆಳಿಗ್ಗೆ 10.30 ಕ್ಕೆ ನಡೆಯಲಿದೆ.

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ತಂಗಡಗಿ ಶಿವರಾಜ ಸಂಗಪ್ಪ ಅವರು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸುವರು. ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ ಮತ್ತು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರಡ್ಡಿ ಅವರು ಘನ ಉಪಸ್ಥಿತಿ ವಹಿಸುವರು. ರಾಬಕೊವಿ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಅಧ್ಯಕ್ಷರು ಹಾಗೂ ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಕೊಪ್ಪಳ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಗಂಗಾವತಿ ಶಾಸಕರಾದ ಜಿ.ಜನಾರ್ಧನರೆಡ್ಡಿ, ವಿಧಾನಪರಿಷತ್ ಸದಸ್ಯರಾದ ಶರೀಲ್ ಜಿ.ನಮೋಶಿ, ಡಾ.ಚಂದ್ರಶೇಖರ ಬಿ.ಪಾಟೀಲ, ಶರಣಗೌಡ ಅನ್ನದಾನಗೌಡ ಪಾಟೀಲ ಬಯ್ಯಾಪೂರ ಹಾಗೂ ಹೇಮಲತಾ ನಾಯಕ, ಮುನಿರಾಬಾದ್ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರಾ ಯೋಜನೆಯ ಅಧ್ಯಕ್ಷರಾದ ಹಸನಸಾಬ ನಭಿಸಾಬ ದೋಟಿಹಾಳ, ಕೊಪ್ಪಳ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ಮತ್ತು ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಪಾಲ್ಗೊಳ್ಳುವರು.

ವಿಶೇಷ ಆಹ್ವಾನಿತರಾಗಿ ವಸತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು, ಬಾಗಲಕೋಟೆ ಕೃಷ್ಣ ಮೇಲ್ದಂಡೆ ಯೋಜನೆಯ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಆಯುಕ್ತರು ಹಾಗೂ ಕೊಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ.ಮೋಹನ್ ರಾಜ್, ಕೊಪ್ಪಳ ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್. ಅರಸಿದ್ದಿ ಅವರು ಭಾಗವಹಿಸುವರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಹಿರಿಯ ಉಪಾಧ್ಯಕ್ಷರು ಹಾಗೂ ಕೊಪ್ಪಳ ಜಿಲ್ಲಾ ಅಧ್ಯಕ್ಷರಾದ ನಾಗರಾಜ ಆರ್. ಜುಮ್ಮನ್ನವರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ಸರ್ಕಾರಿ ನೌಕರರ ಕ್ರೀಡಾಕೂಟ ಸಂಘಟನಾ ಸಮಿತಿಯ ಸದಸ್ಯ ಕಾರ್ಯದರ್ಶಿ ವಿಠ್ಠಲ ಜಾಬಗೌಡರ ಮತ್ತು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯರು, ಕೊಪ್ಪಳ ಜಿಲ್ಲಾ ಘಟಕದ ಪದಾಧಿಕಾರಿಗಳು, ಮತ್ತು ಕಾರ್ಯಕಾರಿ ಸಮಿತಿಯ ಸರ್ವ ಸದಸ್ಯರು ಹಾಗೂ ಎಲ್ಲಾ ತಾಲ್ಲೂಕಾ, ಯೋಜನಾ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

# ಸಮಗ್ರ ಅಭಿವೃದ್ಧಿಗೆ ಬದ್ಧ: ಸಿ.ಎಸ್. ನಾಡಗೌಡ

• **ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:**




ಮತಕ್ಷೇತ್ರದ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ಕಳೆದ ಎರಡು ವರ್ಷಗಳಲ್ಲಿ ರೂ.200 ಕೋಟಿಗಿತಲೂ ಹೆಚ್ಚು ಅನುದಾನವನ್ನು ತಂದು ಕೆಲಸ ಮಾಡುತ್ತಿದ್ದೇನೆ. ಕೆಲವರು ಕೇವಲ ರಾಜಕಾರಣಕ್ಕಾಗಿ ಅನುದಾನದ ಕೊರತೆಯಿಂದಾಗಿ ಅಭಿವೃದ್ಧಿ ಕಾರ್ಯಗಳು ನಿಂತು ಹೋಗಿವೆ ಎಂಬ ಸುಳ್ಳು ಆರೋಪ ಮಾಡುತ್ತಿದ್ದಾರೆ ಇಂಥವರ ಮಾತುಗಳನ್ನು ನೀವು ನಂಬಬೇಡಿ ಎಂದು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ, ಶಾಸಕ ಸಿ.ಎಸ್.ನಾಡಗೌಡ (ಅಪ್ಪಾಜಿ) ಹೇಳಿದರು. ಗುರುವಾರ ತಾಲೂಕಿನ ಬಳಗಾನೂರ ಗ್ರಾಮದಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 2022-23ನೇ ಸಾಲಿನ ಮುಖ್ಯಮಂತ್ರಿಗಳ ವಿಶೇಷ ಅಭಿವೃದ್ಧಿ ಯೋಜನೆಯ ರೂ.210 ಲಕ್ಷ ಮೊತ್ತದ ಬಳಗಾನೂರದಿಂದ ಕೊಣ್ಣೂರ(ಕ್ಯಾನಲ್) ವರೆಗೆ ರಸ್ತೆ ಸುಧಾರಣೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಇದು ಹಿಂದಿನ ಅವಧಿಯಲ್ಲಿಯೇ ಆಗಬೇಕಾದ ಕಾಮಗಾರಿ ಅನುದಾನ ಇಲ್ಲದೆ ಇರುವುದರಿಂದ ಬಹಳಷ್ಟು ವಿಳಂಬವಾಗಿದ್ದು ಇದೀಗ ಅನುದಾನವನ್ನು ಮಂಜೂರು ಮಾಡಿಸಿಕೊಂಡು ಚಾಲನೆಕೊಟ್ಟಿದ್ದೇನೆ, ಕ್ಷೇತ್ರದಲ್ಲಿ ಹಿಂದಿನ ಅವಧಿಯ ಇಂತಹ 9 ಕಾಮಗಾರಿಗಳು ಇವೆ ನಾನು ಅವುಗಳನ್ನು ರದ್ದುಗೊಳಿಸದೆ ಮುಂದುವರಿಸಿದ್ದೇನೆ ಅಭಿವೃದ್ಧಿ ಕಾರ್ಯಗಳು ಯಾರೇ ಮಾಡಿದರು ಅದನ್ನು ನಾನು ವಿರೋಧಿಸುವುದಿಲ್ಲ ಅಭಿವೃದ್ಧಿಯಲ್ಲಿ ರಾಜಕಾರಣ ನನಗೆ ಬೇಕಾಗಿಲ್ಲ ರಾಜ-ಕಾರಣ ಚುನಾವಣೆಗೆ ಮಾತ್ರ ಸೀಮಿತವಾಗಿರಬೇಕೆಂಬುದು ನನ್ನ ಧೋರಣೆಯಾಗಿದೆ. ಬಳಗಾನೂರದಿಂದ ಮಿಣಜಗಿ ಕೂಡು ರಸ್ತೆ ಅಭಿವೃದ್ಧಿಯ ಅಗತ್ಯವಿದ್ದು ಇದಕ್ಕಾಗಿ ಈಗಾಗಲೇ ರೂ.2 ಕೋಟಿ ಕಾಯ್ದಿರಿಸಿದ್ದು ಟೆಂಡರ್ ಹಂತದಲ್ಲಿದೆ ಆದಷ್ಟು ಬೇಗ ಆರಂಭಿಸಲಾಗುವುದು. ಕ್ಷೇತ್ರದ ಜನರ ಸಾಕಷ್ಟು ಬೇಡಿಕೆಗಳಿವೆ ಆದರೆ ಎಲ್ಲಾ ಕೆಲಸಗಳನ್ನು ಹಂತ ಹಂತವಾಗಿ ಮಾಡಲಾಗುವುದು ಇದಕ್ಕೆ ನಿಮ್ಮೆಲ್ಲರ ಸಹಕಾರ ನನಗೆ ಬೇಕು ಎಂದರು. ಕಾಂಗ್ರೆಸ್ ಮುಖಂಡ ಸಿ.ಬಿ.ಅಸ್ಕಿ ಮಾತನಾಡಿ ಶಾಸಕ ಅಪ್ಪಾಜಿ ನಾಡಗೌಡರು ಕಡಿಮೆ ಮಾತು ಹೆಚ್ಚು ಕೆಲಸ ಮಾಡುವ ವ್ಯಕ್ತಿಗಳು, ದ್ವೇಷ ರಾಜಕಾರಣ ಎಂಬುದು ಅವರಿಗೆ ಗೊತ್ತಿಲ್ಲ ಅವರು ಪ್ರಚಾರ ಪ್ರಿಯರೂ ಅಲ್ಲ ಬೇರೆಯವರಂತೆ ಸುಳ್ಳು ಆಶ್ವಾಸನೆಗಳನ್ನು ಕೊಡುವುದೂ ಇಲ್ಲ ಕೊಟ್ಟ ಮಾತಿನಂತೆ ಅವರು ನಡೆದುಕೊಳ್ಳುತ್ತಾರೆ. ಈಗಾಗಲೇ ಕ್ಷೇತ್ರದಲ್ಲಿ 200 ಕೋಟಿಗಿಂತಲೂ ಹೆಚ್ಚು ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ ಇದರ ಸಂಪೂರ್ಣ ಮಾಹಿತಿಯನ್ನು ಕೇಳಿದವರಿಗೆ ನಾನು ಕೊಡಬಲ್ಲೆ, ಸುಳ್ಳು ಹೇಳುವರನ್ನು ನಂಬದೇ ಶಾಸಕರೊಂದಿಗೆ ನಾವೆಲ್ಲರೂ ಸಹಕರಿಸೋಣ ಎಂದರು. ಇದೇ ಸಂದರ್ಭದಲ್ಲಿ ಶಾಸಕ ಅಪ್ಪಾಜಿ ನಾಡಗೌಡರನ್ನು ಗ್ರಾಮಸ್ಥರಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ವೇ.ಮೂ. ಶಾಂತಯ್ಯ ಹಿರೇಮಠ, ಮುಖಂಡರಾದ ನಿಂಗನಗೌಡ ಪಾಟೀಲ, ಪ್ರಭುಗೌಡ ಮದರಕಲ್ಲ, ಶಿವಣ್ಣ ಕಡಕೋಳ, ಬಸನಗೌಡ ಬಗಲಿ, ಮಲ್ಲಣ್ಣ ದೋರನಹಳ್ಳಿ, ಚೆನ್ನಣ್ಣ ಅಲದಿ, ನಿವೃತ್ತ ಶಿಕ್ಷಕ ಹೂಗಾರ, ಪಿಕೆಪಿಎಸ್ ಅಧ್ಯಕ್ಷ ನೀಲಪ್ಪ ನರಸಣಗಿ, ಮಲ್ಲನಗೌಡ ಬಿರಾದಾರ, ಸಂಗನಗೌಡ ಅಸ್ಕಿ, ಗುತ್ತಿಗೆದಾರ ಬಿಎಸ್ ಪಾಟೀಲ (ವಣಕಿಹಾಳ), ಎಇಇ ಜ್ಞಾನೇಶ ಮುರಾಳ ಹಾಗೂ ಗ್ರಾಮಸ್ಥರು ಇದ್ದರು.

# ಮೆಕ್ಕೆಜೋಳಕ್ಕೆ ಬೆಲೆ ವ್ಯತ್ಯಾಸದ ಮೊತ್ತ ಪಾವತಿ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

2025-26ನೇ ಸಾಲಿಗೆ ಮುಂಗಾರು ಹಂಗಾಮಿಗೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿಯಲ್ಲಿ ಮೆಕ್ಕೆಜೋಳಕ್ಕೆ ಬೆಲೆ ವ್ಯತ್ಯಾಸದ ಮೊತ್ತ ಪಾವತಿಸಲಾಗುವುದು ಎಂದು ಕೊಪ್ಪಳ ಕೃಷಿ ಮಾರಾಟ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಸರ್ಕಾರದ ಮಾರ್ಪಾಡು ಆದೇಶ ಸಂಖ್ಯೆ: ಸಿಒ 243 ಎಂಆರ್‌ಇ 2025 ಬೆಂಗಳೂರು ದಿನಾಂಕ: 10-01-2026 ಆದೇಶದಂತೆ ಕೊಪ್ಪಳ ಜಿಲ್ಲೆಯ ಎಲ್ಲಾ ರೈತ ಬಾಂಧವರಿಗೆ ಈ ಮೂಲಕ ಕೋರುವುದೇನೆಂದರೆ 2025-26ನೇ ಸಾಲಿಗೆ ಮುಂಗಾರು ಹಂಗಾಮಿಗೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿಯಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ಮೆಕ್ಕೆಜೋಳವನ್ನು ಮಾರುಕಟ್ಟೆಗಳಲ್ಲಿ ಮೆಕ್ಕೆಜೋಳದ ಮಾದರಿ ಧಾರಣೆಯು ಏನೇ ಇದ್ದರೂ ಸಹ ಪ್ರತಿ ಕ್ವಿಂಟಾಲ್‌ಗೆ ಗರಿಷ್ಠ ರೂ. 250 ರಂತೆ ಸರ್ಕಾರದಿಂದ ಬೆಲೆ ವ್ಯತ್ಯಾಸ ಪಾವತಿಸಲಾಗುವದು.

ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಅಥವಾ ಉಪ ಮಾರುಕಟ್ಟೆ ಪ್ರಾಂಗಣಗಳ ಜೊತೆಗೆ ಕುಕನೂರು ತಾಲ್ಲೂಕಿನ ಪಿಎಸಿಎಸ್ ಮಂಗಳೂರು ಮೊ.ಸಂ: 9945631054, ಯಲಬುರ್ಗಾ ತಾಲ್ಲೂಕಿನ ಪಿಎಸಿಎಸ್ ಯಲಬುರ್ಗಾ ಮೊ.ಸಂ: 9611465666, ಕೊಪ್ಪಳ ತಾಲ್ಲೂಕಿನ ಪಿಎಸಿಎಸ್ ಅಳವಂಡಿ ಮೊ.ಸಂ: 9945809338, ಈ ಮೂರು ಸ್ಥಳಗಳಲ್ಲಿಯೂ ಸಹ ರೈತರ ನೋಂದಣಿ ಕೇಂದ್ರಗಳನ್ನು ತೆರೆಯಲಾಗಿರುತ್ತದೆ. ಆದ್ದರಿಂದ ಕೊಪ್ಪಳ ಜಿಲ್ಲೆಯ ಎಲ್ಲಾ ರೈತ ಬಾಂಧವರು ಈ ಎಲ್ಲಾ ಸ್ಥಳಗಳಲ್ಲಿ ಆಧಾರ ಕಾರ್ಡ, ಫ್ರೂಟ್ಸ್ ಗುರುತಿನ ಸಂಖ್ಯೆಯೊಂದಿಗೆ ಎನ್.ಇ.ಎಂ.ಎಲ್ (NEML) ತಂತ್ರಾಂಶದಲ್ಲಿ ಬಯೋಮೆಟ್ರಿಕ ಮೂಲಕ ನೋಂದಣೆ ಮಾಡಿಸಿಕೊಂಡು ಎಪಿಎಂಸಿ ಮಾರುಕಟ್ಟೆ ಪ್ರಾಂಗಣಗಳಲ್ಲಿ ಯುಎಂಪಿ ವೇದಿಕೆಯಲ್ಲಿ ಮೆಕ್ಕೆಜೋಳ ಮಾರಾಟ ಮಾಡುವಂತೆ ಜಿಲ್ಲೆಯ ರೈತ ಬಾಂಧವರಲ್ಲಿ ಈ ಮೂಲಕ ಮನವಿ ಮಾಡಿದೆ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ಎಪಿಎಂಸಿ ಕಾರ್ಯದರ್ಶಿಯವರು ಮತ್ತು ಶಾಖಾ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಕೊಪ್ಪಳ ಇವರಿಗೆ ಸಂಪರ್ಕಿಸುವಂತೆ ಕೊಪ್ಪಳ ಕೃಷಿ ಮಾರಾಟ ಇಲಾಖೆಯ ಪ್ರಕಟಣೆ ತಿಳಿಸಿದೆ.

# ಕ್ಷೇತ್ರದ ಜನರು ರಾಜಶೇಖರ ಪಾಟೀಲ ಅವರನ್ನು ನೆನಪಿಸುತ್ತಿದ್ದಾರೆ: ಸಲೀಮ್ ಅಹ್ಮದ್

**ಹುಮನಾಬಾದ್:** ಕ್ಷೇತ್ರದ ಜನರು ಬಿಜೆಪಿ ಅಭ್ಯರ್ಥಿಗೆ ಗೆಲ್ಲಿಸಿ ಪಶ್ಚಾತಾಪ ಪಡುತ್ತಿದ್ದಾರೆ. ಹಾಲಿ ಶಾಸಕರು ಅಭಿವೃದ್ಧಿ ಮಾಡುವಲ್ಲಿ ವಿಫಲರಾಗಿದ್ದಾರೆ. ರಾಜಶೇಖರ ಪಾಟೀಲ ರವರನ್ನು ಯಾಕೆ ಗೆಲ್ಲಿಸಿಲ್ಲ ಎಂಬ ಕೂಗು ಕೇಳಿ ಬರುತ್ತಿದೆ. ಮುಂದಿನ ದಿನಗಳಲ್ಲಿ ರಾಜಶೇಖರ





ಪಾಟೀಲ ರವರು ಗೆದ್ದು ಮಂತ್ರಿ ಆಗುತ್ತಾರೆ ಎಂದು ಮುಖ್ಯ ಸಚೇತಕ ಸಲೀಮ್ ಅಹ್ಮದ್ ರವರು ತಿಳಿಸಿದ್ದಾರೆ.ಗುರುವಾರ ನಗರದ ಮಾಜಿ ಸಚಿವ ರಾಜಶೇಖರ ಪಾಟೀಲ ರವರ ನಿವಾಸಕ್ಕೆ ಭೇಟಿ ನೀಡಿ. ಮಾತನಾಡುತ್ತಿದ್ದರು.ಪಾಟೀಲ ಪರಿವಾರ ಸೂತ ಕ್ಷಣಕ್ಕೆ ಮನೆಯಲ್ಲಿ ಕೂರದೇ ಕ್ಷೇತ್ರದ ಜನರ ಕಷ್ಟಗಳಿಗೆ ಹಗಲಿರುಳೂ ಶ್ರಮಿಸುತ್ತಿದೆ. ಈ ಕ್ಷೇತ್ರದ ಜನರ ಕಷ್ಟ ಗಳಿಗೆ ಪಾಟೀಲ ಪರಿವಾರ ಸಾಕಷ್ಟು ಕೆಲಸವನ್ನು ಮಾಡುತ್ತಿದೆ ಎಂದು ತಿಳಿಸಿದರು. ಈ ಸಂದರ್ಬದಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ,ಭೀಮರಾವ ಪಾಟೀಲ. ಲಕ್ಷ್ಮಣರಾವ ಬುಳ್ಳಾ.ಅರವಿಂದಕುಮಾರ ಅರಳಿ ಮನ್ನಾನ ಸೇಠ,ಅಫ್ಸರ್ ಮಿಯಾ. ಸೇರಿದಂತೆ ಇತರರಿದ್ದರು.

# ಕುಟುಂಬದ ಪ್ರೀತಿ ವಿಶ್ವಾಸಗೆಲ್ಲಲು ದುಶ್ಚಟಗಳಿಂದ ಮುಕ್ತರಾಗಿ



**ಕೊಪ್ಪಳದ:** ಭಾಗ್ಯನಗರದ ಅರುಣೋದಯ ನಶಾಮುಕ್ತ ಕೇಂದ್ರದಲ್ಲಿ ಮಹಿಳಾ ಧ್ವನಿ ಸಂಸ್ಥೆ ಹಾಗೂ ಹೈಬ್ರೀಡ್ ನ್ಯೂಸ್ ವತಿಯಿಂದ ಮಕರ ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ದೀಪ ಬೆಳಗುವ ಮೂಲಕ ಮಹಿಳಾ ಧ್ವನಿ ಸಂಸ್ಥೆಯ ಸಂಸ್ಥಾಪಕಿ ಪ್ರಿಯದರ್ಶಿನಿ ಮುಂಡರಗಿಮಠ ಉದ್ಘಾಟಿಸಿ ಮಾತನಾಡಿದರು. ಸಂಕ್ರಾಂತಿ ಹಬ್ಬವು ಸಮೃದ್ಧಿಯ ಸಂಕೇತವಾಗಿದ್ದು, ರೈತರಿಗೆ ಹರುಷತರುವ ದಿನ ಇದಾಗಿದೆ.ಸಂಕ್ರಮಣದ ದಿನದಂದು ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಸಂಧಿಸುತ್ತಾನೆ ಅದೇ ರೀತಿಯಲ್ಲಿ ನೀವು ಕೂಡ ಚಟಗಳಿಂದ ವಿಮುಕ್ತರಾಗಿ, ಪರಿವರ್ತನೆಗೊಂಡು ಹೊಸ ಬದುಕು ರೂಪಿಸಿಕೊಳ್ಳಿ ಎಂದು ಶುಭಾಶಯಕೋರಿ ಸರ್ವರಿಗೂ ಎಳ್ಳು,ಬೆಲ್ಲವನ್ನು ಹಂಚಿದರು. ಯುವ ಸಾಹಿತಿ ಬಿ.ಎನ್.ಹೊರಪೇಟಿ ಮಾತನಾಡಿ ಮನುಷ್ಯ ಜೀವನದಲ್ಲಿ ತಪ್ಪು ಮಾಡುವುದು ಸಹಜ ಆದರೆ ಪರಿವರ್ತನೆಗೊಂಡು ಹೊಸ ಬದುಕು ಕಟ್ಟಿಕೊಂಡಾಗ ಮಾತ್ರ ಸಮಾಜಕ್ಕೆ ಮಾದರಿಯಾಗಲು ಸಾಧ್ಯ. ಮಾನಸಿಕ ಒತ್ತಡ ಮತ್ತು ಇತರೆ ಕಾರಣಗಳಿಂದ ದುಶ್ಚಟಕ್ಕೆ ಬಲಿಯಾಗಿರಬಹುದು ಇನ್ನೂ ಕಾಲ ಮಿಂಚಿಲ್ಲ ದೇವರು ನಿಮಗೆಲ್ಲಾ ಸುಂದರ ಅವಕಾಶ ಕಲ್ಪಿಸಿದ್ದಾನೆ ಹೊಸ ಆಲೋಚನೆಯೊಂದಿಗೆ ಸಮಾಜದಲ್ಲಿ ಕುಟುಂಬದ ಪ್ರೀತಿ ವಿಶ್ವಾಸ ಗೆಲ್ಲಲು ದುಶ್ಚಟಗಳಿಂದ ದೂರವಾಗಿ ಎಂದು ಸಂಕ್ರಮಣ ಶುಭಾಶಯಕೋರಿದರು.ಇದೇ ವೇಳೆ ಕಲಾವಿದರಾದ ಬಸವರಾಜ ಹೂಗಾರ, ಮಲ್ಲಿಕಾರ್ಜುನ ಡುಮ್ಮನ್ನವರ,ಅಶ್ವಿನಿ, ಶರಣಪ್ಪ ಸಿಂಗನಾಳ ಅವರ ಹಾಡಿಗೆ ಮತ್ತು ದೊಡ್ಡಾಟದ ಸಂಭಾಷಣೆಯನ್ನು ಕೇಳಿ ವ್ಯಸನ ಮುಕ್ತ ಚಿಕಿತ್ಸಕರು ಖುಷಿಪಟ್ಟರು. ವ್ಯಸನ ಮುಕ್ತರಾಗುತ್ತೇವೆಂದು ಸ್ವಯಂ ಪ್ರಮಾಣ ಘೋಷ್ಯವಾಕ್ಯದಿಂದಗಮನ ಸೆಳೆದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜಕುಮಾರ ಗೊರವರ ವಹಿಸಿಕೊಂಡಿದ್ದರು. ನಶಾಮುಕ್ತ ಕೇಂದ್ರದ ಸಿಬ್ಬಂದಿಗಳಾದ ಮೈಲಪ್ಪ ಮತ್ತಿರರು ಉಪಸ್ಥಿತಿ ಇದ್ದರು.

# ಪುಣ್ಯಸ್ನಾನಕ್ಕೆ ತೆರಳಿದ್ದ ಇಬ್ಬರು ವಿದ್ಯಾರ್ಥಿಗಳು ಸಾವು

**ಬಾಗಲಕೋಟೆ:** ಮಕರ ಸಂಕ್ರಾಂತಿ ಪುಣ್ಯ ಸ್ನಾನಕ್ಕೆ ತೆರಳಿದ್ದ ಇಬ್ಬರು ವಿದ್ಯಾರ್ಥಿಗಳು ನೀರು ಪಾಲಾಗಿರುವ ಘಟನೆ ಜಿಲ್ಲೆಯ ಮುಧೋಳ ತಾಲೂಕಿನ ಜಾಲಿಕಟ್ಟಿ ಗ್ರಾಮದ ಕಲ್ಲು ಕ್ವಾರಿಯಲ್ಲಿ ಇಂದು ನಡೆದಿದೆ. ಮನೋಜ್(17), ಪ್ರಮೋದ್(17) ಮೃತ ದುರ್ದೈವಿಗಳು. ಪ್ರಥಮ ಪಿಯುಸಿ ಓದುತ್ತಿದ್ದ ಈ ವಿದ್ಯಾರ್ಥಿಗಳು ಕಾಲೇಜು ರಜೆ ಇರುವ ಕಾರಣಕ್ಕೆ ಸಂಕ್ರಾಂತಿ ಹಿನ್ನೆಲೆಯಲ್ಲಿ ಸ್ನಾನಕ್ಕೆ ತೆರಳಿದಾಗ ಆಯತಪ್ಪಿ ಆಳವಾದ ನೀರಿಗೆ ಬಿದ್ದಿದ್ದಾರೆ. ಮುಳುಗುತ್ತಿದ್ದ ಇಬ್ಬರನ್ನು ಸ್ಥಳೀಯರು ರಕ್ಷಿಸಿ ಹೊರ ತರಲು ಯತ್ನಿಸಿದ್ದು, ಆಸ್ಪತ್ರೆಯಲ್ಲಿ ಇಬ್ಬರೂ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ.

# ಆಸ್ತಿಗಾಗಿ ವೃದ್ಧೆಯ ಕೊಲೆ

**ಬಾಗಲಕೋಟೆ:** ಆಸ್ತಿಸಲುವಾಗಿ ವೃದ್ಧೆಯೊಬ್ಬರನ್ನು ಆಕೆಯ ಬಂಧುಗಳೇ ಕೊಲೆಮಾಡಿರುವ ಘಟನೆ ಜಿಲ್ಲೆಯ ರಬಕವಿ–ಬನಹಟ್ಟಿ ಪೊಲೀಸ್ ಠಾಣೆ ವ್ಯಾಪ್ತಿಯ ಜಗದಾಳ ಗ್ರಾಮದಲ್ಲಿ ನಡೆದಿದೆ. ಚಂದ್ರವ್ವ ನಿಲಜಗಿ(80) ಕೊಲೆಯಾದವರು. ಆಕೆಯ ಅಣ್ಣನ ಮಕ್ಕಳಾದ ಪರಪ್ಪ ನಿಲಜಗಿ, ಸದಾಶಿವ ನಿಲಜಗಿ ಮತ್ತು ಶಂಕ್ರಪ್ಪ ನಿಜಲಗಿ ಕೊಲೆ ಮಾಡಿದ ಆರೋಪಿಗಳು. ಕೊಲೆಯಾಗಿರುವ ಚಂದ್ರವ್ವ 30 ವರ್ಷಗಳಿಂದ ತವರು ಮನೆ ಜಗದಾಳ ಗ್ರಾಮದಲ್ಲಿ ವಾಸಿಸುತ್ತಿದ್ದಳು. ಆದರೆ ಕಳೆದ 8 ತಿಂಗಳುಗಳಿಂದ ತೇರದಾಳ ಪಟ್ಟಣದಲ್ಲಿ ನೆಲೆಸಿದ್ದಳು. ತವರು ಮನೆಯ ಆಸ್ತಿಗಾಗಿ ಕೋರ್ಟ್ ನಲ್ಲಿ ದಾವೆ ಹೂಡಿದ್ದಳು. ನ್ಯಾಯಾಲಯವು ಆಸ್ತಿಯಲ್ಲಿ ಚಂದ್ರವ್ವಳಿಗೆ ಪಾಲು ನೀಡಬೇಕು ಎಂದು ಆದೇಶ ಮಾಡಿತ್ತು. ಆಸ್ತಿಯ ಮೋಜಣಿಗಾಗಿ ಜ. 13 ರಂದು ಅಧಿಕಾರಿಗಳು ಗ್ರಾಮಕ್ಕೆ ಬಂದಿದ್ದರು. ಈ ಸಂದರ್ಭದಲ್ಲಿ ಆರೋಪಿತರು ಚಂದ್ರವ್ವಳನ್ನು ಎಳೆದುಕೊಂಡು ಹೋಗಿ ಪಕ್ಕದಲ್ಲಿರುವ ಕಾಲುವೆಗೆ ತಳ್ಳಿದ್ದಾರೆ. ಅವಳು ಕಿರುಚಾಡಿದಾಗ ಮೇಲೆ ಕರೆತಂದು ಚಿಕಿತ್ಸೆಗಾಗಿ ಗೋಕಾಕಕ್ಕೆ ಕರೆದುಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ಗುರ್ಲಾಪುರ ಕ್ರಾಸ್ ಬಳಿ ಆಕೆ ಮರಣ ಹೊಂದುವಂತೆ ಮಾಡಿದ್ದಾರೆ. ಈ ಕುರಿತು ತೇರದಾಳದ ನಿವಾಸಿ ಕಾಡಯ್ಯ ಬಂಗಿ ದೂರನ್ನು ನೀಡಿದ್ದು, ಬನಹಟ್ಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲುಗೊಂಡಿದೆ. ಪಿಎಸ್ಐ ಶಾಂತಾ ಹಳ್ಳಿ ತನಿಖೆ ಕೈಗೊಂಡಿದ್ದಾರೆ. ಘಟನಾ ಸ್ಥಳಕ್ಕೆ ಬಾಗಲಕೋಟೆ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ಜಮಖಂಡಿ ಡಿವೈಎಸ್ಪಿ ರೋಷನ್ ಜಮೀರ, ಬನಹಟ್ಟಿ ಸಿಪಿಐ ಎಚ್. ಆರ್.ಪಾಟೀಲ ಭೇಟಿ ನೀಡಿ ಪರಿಶೀಲನೆ ಮಾಡಿದರು.

# ಪ್ರಾಚೀನ ಕಾಲದಿಂದಲೂ ಭಾರತ ಪುಣ್ಯಭೂಮಿ

• ಪರುಶುರಾಮ ಕರಣಂ, ಭಾಲ್ಕಿ

ಪ್ರಾಚೀನ ಕಾಲದಿಂದಲೂ ಭಾರತ ಪುಣ್ಯಭೂಮಿ. ಭಕ್ತಿಯ ನೆಲೆವೀಡು, ಮುಕ್ತಿಯ ತವರು ಮನೆಯಾಗಿದೆ. ಆಧ್ಯಾತ್ಮಿಕ ಹಾಗೂ ದಾರ್ಶನಿಕ ಚೇತನಗಳ ಬೀಡಾಗಿದೆ. ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಭಾತಂಬ್ರಾ ಗ್ರಾಮದ ಪೂಜ್ಯ ಶಿವಯೋಗೀಶ್ವರ ಮಹಾಸ್ವಾಮಿಗಳು ಭಕ್ತರ ಉದ್ಧಾರವೇ ಪರಮ ಗುರಿ ಎಂದು ಸಮಾಜದ ಬೆಳಕಾಗಿ ಸೇವೆ ಸಲ್ಲಿಸುತ್ತಿದ್ದಾರೆ.

1) ಶ್ರೀಗಳು ಸಾವಿರಾರು ಹಳ್ಳಿಗಳಿಗೆ ಪಾದಯಾತ್ರೆ ಮಾಡಿ ದುಶ್ಚಟ ಅಂಟಿಸಿಕೊಂಡವರಿಗೆ ಬೋಧನೆ ಮಾಡಿ ಅವರ ದುಶ್ಚಟಗಳನ್ನು ಬಿಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ತಮ್ಮ ಬಸವ ಮಹಾ ಜೋಳಿಗೆಯಲ್ಲಿ ಅನೇಕರ ದುಶ್ಚಟಗಳನ್ನು ಹಾಕಿಸಿಕೊಂಡು ವ್ಯಕ್ತಿಗಳನ್ನು ಪರಿಶುದ್ಧರನ್ನಾಗಿ ಮಾಡಿದ್ದಾರೆ.

2) ರಕ್ತದಾನ, ಜೋಡಿ ಸಾಮೂಹಿಕ ವಿವಾಹ, ದೀನ ದಲಿತರಿಗೆ ವಸ್ತ್ರದಾನ, ಗಣ್ಯರಿಗೆ ಸನ್ಮಾನ ಹೀಗೆ ಅನೇಕ ಸಮಾಜೋ, ಧಾರ್ಮಿಕ ಕಾರ್ಯಗಳನ್ನು ಮಾಡಿದ್ದಾರೆ. ಮುಖ್ಯವಾಗಿ ಮುಸ್ಲಿಂ ಬಾಂಧವರಿಗೆ ಲಿಂಗಧಾರಣೆ ಮಾಡಿರುವಂತಹದ್ದು ಅತ್ಯಂತ ವಿಶೇಷವಾಗಿದೆ.

3) ಆದರ್ಶ ಒಕ್ಕಲುತನವನ್ನು ಆಚರಣೆಯಲ್ಲಿ ತಂದು ಮಾದರಿಯಾಗಿದ್ದಾರೆ.



4) ಶ್ರೀಗಳು ಪ್ರವಚನ ಪಂಡಿತರು. ಕನ್ನಡ, ಮರಾಠಿ, ಸಂಸ್ಕೃತ, ಹಿಂದಿ, ಇಂಗ್ಲೀಷನ್ನು ಅರಿತಿರುವ ಶ್ರೀಗಳು ಪಂಚಭಾಷಾ ಪಂಡಿತರು. ಅವರ ಆಶೀರ್ವಚನ ಅಪಾರ ಭಕ್ತರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ. ಶ್ರೀಗಳ ನೇರ ಮತ್ತು ನಿಷ್ಠುರ ಮಾತುಗಳು ಸರಿಯಾಗಿ ಅರ್ಥೈಸಿಕೊಂಡಾಗ ಸೈ ಎನಿಸುತ್ತವೆ. ಬಸವಾಧೀಶರಣರ ವಚನ ಪರಂಪರೆಯನ್ನು ಮುಂದಿನ ಜನಾಂಗಕ್ಕೆ ಮುಟ್ಟಿಸುವ ಕಾರ್ಯದಲ್ಲಿ ಶ್ರೀಗಳು ಶ್ರಮಿಸುತ್ತಿದ್ದಾರೆ ಅನೇಕ ಗ್ರಂಥಗಳನ್ನು ತಮ್ಮ ಮಠದಿಂದ ಪ್ರಕಟಿಸುವ ಮೂಲಕ ಪುಸ್ತಕ ಸಂಸ್ಕೃತಿಯನ್ನು ಬೆಳೆಸುತ್ತಿದ್ದಾರೆ.

5) ಶಿಶುಪಾಲನ ಕೇಂದ್ರಗಳ ಸ್ಥಾಪನೆ – ಶ್ರೀಗಳು ಅನಾಥ ಮಕ್ಕಳ ಬಾಳಿಗೆ ಬೆಳಕಾಗಲು ಅನಾಥಾಶ್ರಮಗಳನ್ನು ಮತ್ತು ಶಿಶು ಪಾಲನ ಕೇಂದ್ರಗಳನ್ನು ಸ್ಥಾಪಿಸಿದರು. ಬೀದರ್ ನಲ್ಲಿ ಬಸವ ಮುಕ್ತಿ ಮಂದಿರವನ್ನು ಸ್ಥಾಪಿಸಿ ಅಲ್ಲಿ ಅನಾಥ ಮಕ್ಕಳ ಏಳಿಗೆಗಾಗಿ ಶಿಶು ಪಾಲನ ಕೇಂದ್ರವನ್ನು ಸ್ಥಾಪಿಸಿ ಅವರಿಗೆ ಶಿಕ್ಷಣ ಕೊಡುವುದರ ಜೊತೆಗೆ ಅವರ ಲಾಲನೆ ಪಾಲನೆ ಹಾಗೂ ಜೀವನ ಅವಶ್ಯಕತೆಗೆ ಎಲ್ಲಾ ತರಹದ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ. ಶ್ರೀಗಳು ಮಕ್ಕಳಿಗೆ ತಂದೆ ತಾಯಿಯ ಪ್ರೀತಿಯನ್ನು ನೀಡಿ ಅನಾಥ ಮಕ್ಕಳ ಪಾಲಿಗೆ ಬೆಳಕಾಗಿದ್ದಾರೆ. ಇದಲ್ಲದೆ ಸಮಾಜದಲ್ಲಿ ಬೀದಿಯಲ್ಲಿ, ಚರಂಡಿಯಲ್ಲಿ, ಕಸದ ತೊಟ್ಟಿಗೆಯಲ್ಲಿ ಬೀಳುವ ಹಸು–ಗೂಸುಗಳನ್ನು ಕಾಪಾಡಿ ಅವರಿಗೆ ಪುನರ್ಜನ್ಮವನ್ನು ನೀಡುವ ಕೆಲಸ ಮಾಡಿದ್ದಾರೆ.

6) 1992–93ರಲ್ಲಿ ಮಹಾರಾಷ್ಟ್ರದ ಕಿಲಾರಿಯಲ್ಲಿ ನಡೆದ ಭೂಕಂಪದ ಘಟನೆ–ಪ್ರಕೃತಿ ವಿಕೋಪ ಸಂಭವಿಸಿತು. ಇದರಿಂದ ಊರಿನ ಜನರಿಗೆ ತೊಂದರೆಯಾಯಿತು. ತುಂಬಾ ಸಾವು ,ನೋವು ಹೊಲ ಮನೆಗಳು ನಾಶವಾದವು. ಇಲ್ಲಿನ ಅನೇಕ ಮಕ್ಕಳು ತಂದೆ ತಾಯಿಗಳನ್ನು ಕಳೆದುಕೊಂಡು ಅನಾಥರಾದರು. ಆಗ ಪೂಜ್ಯರು ಇಲ್ಲಿನ ಅನೇಕ ಮಕ್ಕಳಿಗೆ ತಮ್ಮ ಅನಾಥಾಶ್ರಮಕ್ಕೆ ಕರೆದುಕೊಂಡು ಬಂದು ತಂದೆ ತಾಯಿಯ ಪ್ರೀತಿಯನ್ನು ನೀಡಿ ಅವರ ಬಾಳಿನ ಬೆಳಕಾಗಿದ್ದಾರೆ.

7) ಭಕ್ತರು ಮತ್ತು ಮಠಾಧೀಶರು ಸಂಪಾದಿಸಬೇಕಾದದ್ದು ಭೌತಿಕ ಸಂಪತ್ತಿಗಿಂತಲೂ ಭಾವಸಂಪತ್ತು ಮುಖ್ಯ ಎಂದು ಹೇಳುತ್ತಾ ಬಂದಿದ್ದಾರೆ. ಅದನ್ನವರು ಪಾಲಿಸಿಕೊಂಡು ಬರುತ್ತಿದ್ದಾರೆ ಹಾಗಾಗಿ ಮಠ ಭಕ್ತಿ ಭಾವದ ಮಠವಾಗಿ ಜ್ಞಾನದ ಮಠವಾಗಿ ಕಂಗಳಿಸುವಂತೆ ಮಾಡಿದ್ದಾರೆ. ಅನೇಕ ಪತ್ರಿಕೆ ಪುಸ್ತಕ ಪ್ರಕಟಿಸುತ್ತಾ ಸಂಗೀತ, ಸಾಹಿತ್ಯ ಕಾರ್ಯಕ್ರಮಗಳನ್ನು ಶ್ರೀಮಠದಲ್ಲಿ ಆಯೋಜಿಸುತ್ತ ಸಾಹಿತಿ, ಕಲಾವಿದರನ್ನು ಆದರಿಸುತ್ತಾ ಗೌರವಾರ್ಪಣೆ ಗೈಯುತ್ತಾ ಬಂದಿದ್ದಾರೆ.

8) ಶ್ರೀಗಳು ದಿನನಿತ್ಯ ದಾಸೋಹವನ್ನು ನಡೆಸುತ್ತಿದ್ದಾರೆ. ಮಠಕ್ಕೆ ಯಾರೇ ಬರಲಿ ನಿರಂತರ ದಾಸೋಹ ನಡೆಯುತ್ತದೆ. ಮಠದ ಓಲೆಯಲ್ಲಿ ಬೆಂಕಿ ನಂದುವುದೇ ಇಲ್ಲ. ಸದಾ ಕಾಲ ನಿರಂತರವಾಗಿ ದಾಸೋಹ ಸೇವೆ ಇದ್ದೇ ಇರುತ್ತದೆ. ಸಮಾಜದ ಬೆಳಕಾಗಿ ಸಾಮಾಜಿಕವಾಗಿ, ಧಾರ್ಮಿಕವಾಗಿ ಕಾರ್ಯಗಳನ್ನು ಮಾಡುತ್ತಾ ಬರುತ್ತಿದ್ದಾರೆ. ವಜ್ರದಷ್ಟು ಕಠಿಣ ಮತ್ತು ಪುಷ್ಪದಷ್ಟ ಮೃದುವಾಗಿರುವ ಶ್ರೀಗಳು ತಮ್ಮ ವಿಶಾಲ ಹೃದಯದಿಂದ ದೊಡ್ಡವರೆನಿಸಿಕೊಂಡಿದ್ದಾರೆ. ಮಠಮಾನ್ಯಗಳಿಗೆ ಅಧಿಪತಿಯಾಗಿ ಗುರುತಿಸಿಕೊಂಡಿದ್ದಾರೆ. ಇವರು ಅನಂತಜ್ಞಾನದ ಪ್ರತೀಕ.

# ಕೃತಜ್ಞತೆ ಸಲ್ಲಿಸುವುದೇ ಸತ್ಯ ಮಕರ ಸಂಕ್ರಾಂತಿ

• ಮಲ್ಲಮ್ಮ ನುಡಿ ವಾರ್ತೆ ಚಾಮರಾಜನಗರ

ಭಾರತ ಆಧ್ಯಾತ್ಮಿಕ ನೆಲಗಟ್ಟಿನ ಮೇಲೆ ನಿಂತಿದೆ. ಪೂರ್ವಜರು ನಮಗೆ ಹಾಕಿಕೊಟ್ಟ ಜೀವನ ಸಂಪ್ರದಾಯ ಕಾನೂನು ಕಟ್ಟಳೆಗಳು, ಆಚರಣೆಗಳು ಪೂಜೆ ಪುನಸ್ಕಾರ ಪದ್ಧತಿಗಳು ವೈಜ್ಞಾನಿಕವಾಗಿ ಕೂಡಿದ್ದು, ಸಂಕ್ರಾಂತಿಯ ಆಚರಣೆ, ಪ್ರಕೃತಿ ಪಶುಸಂಪತ್ತು ಆಹಾರ ಧಾನ್ಯಗಳಿಗೆ ಕೃತಜ್ಞತೆ ಸಲ್ಲಿಸುವ ಮಹೋತ್ಸವವಾಗಿದೆ ಎಂದು ರಾ–ಜಯೋಗ ಶಿಕ್ಷಣ ತಜ್ಞೆ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ ಅಭಿಪ್ರಾಯಪಟ್ಟರು.

ಅವರು ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಪ್ರಕಾಶ ಭವನದಲ್ಲಿ ಏರ್ಪಡಿಸಲಾಗಿದ್ದ ಮಕರ ಸಂಕ್ರಾಂತಿಯ ಆಧ್ಯಾತ್ಮಿಕ ಮೌಲ್ಯಗಳ ವಿಚಾರಗಳ ಬಗ್ಗೆ ಉಪನ್ಯಾಸ ನೀಡಿದರು. ಎಳ್ಳಿನಂತೆ ಶುದ್ಧವಾದಂತ ಜೀವನ, ಬೆಲ್ಲದಂತೆ ಸಿಹಿಯಾದಂತ ಮಾತು ಪ್ರತಿಯೊಬ್ಬರಿಗೂ ಸುಖ ಕೊಡುವಂತದ್ದಾಗಿದೆ. ಉಪಕಾರ ಮಾಡಿದವರ ಸ್ಮರಣೆ ನಮನ ಕೃತಜ್ಞತೆ ಮಾಡುವುದಾಗಿದೆ. ಆದರೆ ಇಂದು ಎಲ್ಲೆಲ್ಲೂ ವೈರತ್ವ ಕ್ರೌರ್ಯ ಅಶಾಂತಿ ದುರಾಸೆ ದುರಳತನ ದುರಾಲೋಚನೆ ದುರ್ಬುದ್ಧಿ ಸ್ವಾರ್ಥ ಅಹಂಕಾರ ತಾಂಡವಾಡುತ್ತಿದೆ. ಉಪಕಾರ ಮಾಡಿದವರ ಮೇಲೆ ಅಪಕಾರ ಮಾಡುವವರೇ ಹೆಚ್ಚು ಇದ್ದಾರೆ. ದನ ಕರುಗಳು ಎಷ್ಟು ಉಪಕಾರ ಮಾಡುತ್ತವೆ ಆದರೆ ನರ ಮಾನವ ಭಿಕಾರಿಯಾಗಿ ಹೊಟ್ಟೆಗೆ ತಿನ್ನಲು ಇನ್ನೇನು ಇಲ್ಲ ಎಂದು ಅದನ್ನೇ ಕಡಿದು ತಿನ್ನುವಷ್ಟು ಕ್ರೂರಿ ಆಗಿದ್ದಾನೆ. ಪ್ರಾಣಿ ಭಕ್ಷಕನಾಗಿದ್ದಾನೆ ಇವನನ್ನು ರಾಕ್ಷಸ ಎನ್ನ ಬೇಕೋ? ಸುಧಾರಿತ ನಾಗರೀಕ ಮಾನವ ಎನ್ನ ಬೇಕೋ? ಸಂಬಂಧಗಳು ಹಾಳಾಗುತ್ತಿದೆ. ಇದೇ ಭಾರತದಲ್ಲಿ ಒಂದು ಕಾಲದಲ್ಲಿ ಹುಲಿ ಹಸು ಒಂದೇ ದಡದಲ್ಲಿ ನೀರನ್ನು ಕುಡಿಯುತ್ತಿದ್ದವು. ಕಾರ್ಯಕ್ರಮದಲ್ಲಿ ಬಿಕೆ ಆರಾಧ್ಯ, ಸಿದ್ದಯ್ಯ, ಸತೀಶ್, ರಂಗನಾಥ್, ಲಕ್ಷ್ಮಿ ನರಸಿಂಹಪ್ರಸಾದ್, ಮರುಗತಕ್ಕ, ನಿರ್ಮಲ ಹಾಜರಿದ್ದರು.

# ಮಧುಸೂಧನ ಸಾಯಿ ಅವರಿಗೆ ವಿಶೇಷ ಗೌರವ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಆರೋಗ್ಯ, ಶಿಕ್ಷಣ ಹಾಗೂ ಸಾಮಾಜಿಕ ಸೇವಾ ಕ್ಷೇತ್ರಗಳಲ್ಲಿ ಅನನ್ಯ ಸೇವೆ ಸಲ್ಲಿಸುತ್ತಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯ ಶ್ರೀ ಸತ್ಯಸಾಯಿ ಲೋಕ ಸೇವಾ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಮಧುಸೂಧನ ಸಾಯಿ ಅವರಿಗೆ ಪ್ರತಿಷ್ಠಿತ ಪ್ರೆಸ್ ಕ್ಲಬ್ ಆಫ್ ಬೆಂಗಳೂರು ವತಿಯಿಂದ 2026ನೇ ಸಾಲಿನ ವಾರ್ಷಿಕ ವಿಶೇಷ ಗೌರವವನ್ನು ನೀಡಿ ಸನ್ಮಾನಿಸಲಾಯಿತು. ಶ್ರೀ ಸತ್ಯಸಾಯಿ ಲೋಕ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಈ ಗೌರವ ಪ್ರದಾನ ಮಾಡಲಾಯಿತು. ಸಮಾಜದ ಹಿಂದುಳಿದ ವರ್ಗಗಳ ಶೈಕ್ಷಣಿಕ ಅಭಿವೃದ್ಧಿ, ಉಚಿತ ಆರೋಗ್ಯ ಸೇವೆಗಳು ಹಾಗೂ ಸಮಗ್ರ ಸಾಮಾಜಿಕ ಕಲ್ಯಾಣಕ್ಕಾಗಿ ಶ್ರೀ ಮಧುಸೂಧನ ಸಾಯಿ ಅವರು ಕೈಗೊಂಡಿರುವ ಸೇವೆಗಳನ್ನು ಗಮನಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ಕಾರ್ಯಕ್ರಮದಲ್ಲಿ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಹಾಗೂ ಶಾಸಕರಾದ ಟಿ.ಬಿ.ಜಯಚಂದ್ರ,



ಪ್ರೆಸ್ ಕ್ಲಬ್ ಆಫ್ ಬೆಂಗಳೂರು ಅಧ್ಯಕ್ಷರಾದ ಆರ್. ಶ್ರೀಧರ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಖಜಾಂಚಿ ಶರಣು ಹಾಗೂ ನಿರ್ದೇಶಕರಾದ ಸಿ.ಆರ್. ಮಂಜುನಾಥ್ ಉಪಸ್ಥಿತರಿದ್ದು, ಶ್ರೀ ಮಧುಸೂಧನ ಸಾಯಿ ಅವರ ಸೇವೆಯನ್ನು ಪ್ರಶಂಸಿಸಿದರು. ಪ್ರೆಸ್ ಕ್ಲಬ್ ಆಫ್ ಬೆಂಗಳೂರು ವತಿಯಿಂದ ಸಮಾಜಕ್ಕೆ ವಿಶಿಷ್ಟ ಕೊಡುಗೆ ನೀಡುತ್ತಿರುವ ಸಾಧಕರನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ಈ ವಾರ್ಷಿಕ ವಿಶೇಷ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸಲಾಯಿತು.

# ಕಾಟುಮರಾಯ ದೇವಸ್ಥಾನದಲ್ಲಿ ವಿಜೃಂಭಣೆಯ ಸಂಕ್ರಾಂತಿ

• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ ದಾಸರಹಳ್ಳಿ

ತಿಪ್ಪೇನಹಳ್ಳಿ ಗ್ರಾಮದ ಕಾಟುಮರಾಯನ ದೇವಸ್ಥಾನದ ಹತ್ತಿರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಗ್ರಾಮಸ್ಥರೆಲ್ಲಾ ಒಗ್ಗೂಡಿ ಹಸಿರು ಚಪ್ಪರ, ಹಸಿರು ತೋರಣ, ಬಗೆ ಬಗೆ ಹೂವಿನ ಅಲಂಕಾರ, ರಂಗೋಲಿ ಹಾಕಿ ದೇವಸ್ಥಾನ ಸಿಂಗರಿಸಿದ್ದರು.

ದೇವರಿಗೆ ಬೆಳಿಗ್ಗೆಯಿಂದ ಪೂಜೆ ಸಲ್ಲಿಸಿ ನಂತರ ಗೋಮಾತೆಗೆ ಪೂಜೆ ಸಲ್ಲಿಸಲಾಯಿತು. ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ಅನ್ನದಾನ ಪ್ರಸಾದ ವಿನಿಯೋಗ, ಸಿಹಿ ಪೊಂಗಲ್, ಕಬ್ಬು, ಅವರೆಕಾಯಿ, ಎಳ್ಳು ಬೆಲ್ಲ, ಕಡಲೆಕಾಯಿ ಎಲ್ಲವನ್ನು 5,000ಕ್ಕೂ ಹೆಚ್ಚು ಜನರಿಗೆ ವಿತರಿಸಿ ಹಬ್ಬವನ್ನು ಅದ್ದೂರಿಯಾಗಿ ಆಚರಿಸಿದರು.

ಊರಿನ ಗ್ರಾಮಸ್ಥ ಶಿವಶಂಕರ್ ಮಾತನಾಡಿ' ಸುಮಾರು ವರ್ಷಗಳಿಂದ ಸಂಕ್ರಾಂತಿ ಹಬ್ಬವನ್ನು ಊರಿನ ಗ್ರಾಮಸ್ಥರೆಲ್ಲ ಸೇರಿ ಕಾಟುಮರಾಯನಿಗೆ



ಪೂಜೆ ಸಲ್ಲಿಸಿ ಭಕ್ತಿ ಭಾವದಿಂದ ನಾಡಿನ ಸಮಸ್ತ ಜನರಿಗೆ ದೇವರು ಒಳ್ಳೆಯದು ಮಾಡಲಿ,ಎಂದು ಹರಸಿ ಪೂಜೆ ಸಲ್ಲಿಸಲಾಗುತ್ತದೆ. ಸಂಜೆ ಊರಿನ ದನಗಳನ್ನು ತಂದು ಕಿಚ್ಚು ಹಾಯಿಸುತ್ತೇವೆ' ಎಂದರು.

ಮತ್ತೊಬ್ಬ ಊರಿನ ಹಿರಿಯ ಅರ್ಚಕರು ಮಾತನಾಡಿ "ನಮ್ಮ ಪೂರ್ವಜರು ಆಚರಿಸಿಕೊಂಡು ಬಂದ ಈ ಸಂಪ್ರದಾಯವನ್ನು ಮುಂದುವರಿಸುತ್ತಿದ್ದೇನೆ' ಎಂದರು. ಊರಿನ ಗ್ರಾಮಸ್ಥ ಮಂಜುನಾಥ್ ಮಾತನಾಡಿ' ಇತಿಹಾಸ ಪ್ರಸಿದ್ಧ ಕಾಟುಮರಾಯ ದೇವರು ನಮ್ಮ ಗ್ರಾಮದ ಸಮಸ್ತ ಜನರಿಗೂ ಒಳ್ಳೆಯದನ್ನು ಮಾಡಿದೆ. ನಮ್ಮ ಗ್ರಾಮಸ್ಥರೆಲ್ಲ ಸೇರಿ ದೇವರಿಗೆ ದೇವಸ್ಥಾನಕ್ಕೆ ತೊಂದರೆಯಾಗದ ರೀತಿಯಲ್ಲಿ ನೋಡಿಕೊಂಡು ಪೂಜೆ ಸಲ್ಲಿಸುತ್ತಿದ್ದೇವೆ' ಎಂದರು.

ಈ ಸಂದರ್ಭದಲ್ಲಿ ಊರಿನ ಗ್ರಾಮಸ್ಥರಾದ ಟ್ರಾವೆಲ್ಸ್ ಮಂಜುನಾಥ್, ಹಿರಿಯ ಮುಖಂಡರಾದ ಶಿವಶಂಕರ್, ವೆಂಕಟೇಶಯ್ಯ, ಅರಸಪ್ಪ ರಾಮಣ್ಣ, ರಾಮಕೃಷ್ಣಯ್ಯ, ಚೆನ್ನಪ್ಪ, ಬೈರಪ್ಪ, ಮಹದೇವಯ್ಯ, ಚಂದ್ರಪ್ಪ, ಮಹೇಶ್, ಲೋಕೇಶ್, ನಟರಾಜ್, ವಿಜಯ್, ಬೋರೇಗೌಡ, ಜಗದೀಶ್, ಕುಮಾರ್, ಲೋಕೇಶ್, ವಾಸುಮತ್ತು ಊರಿನ ಗ್ರಾಮಸ್ಥರು ಇದ್ದರು.

# ನೀವು ವಿಕಲಚೇತರಲ್ಲ, ಸಮಾಜಕ್ಕೆ ಮಾದರಿ: ಎಚ್‌ಡಿಕೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಬೆಸ್ಕಾಂ ಸೇರಿದಂತೆ ಕೆಪಿಟಿಸಿಎಲ್ ನ ವಿವಿಧ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆರುನೂರಕ್ಕೂ ಹೆಚ್ಚು ವಿಕಲಚೇತನ ಉದ್ಯೋಗಿಗಳು ಬಿಡದಿಯ ತಮ್ಮ ತೋಟದ ಮನೆಯಲ್ಲಿ ತಮ್ಮೊಂದಿಗೆ ಸಂಕ್ರಾಂತಿ ಆಚರಿಸಿದ ಸಂದರ್ಭದಲ್ಲಿ ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರು ತೀವ್ರ ಭಾವುಕರಾದರು.

ಕಳೆದ ಏಳು ವರ್ಷಗಳಿಂದ ತಮ್ಮಲ್ಲಿಗೆ ಬಂದು ಸಂಕ್ರಾಂತಿ ಆಚರಿಸುತ್ತಿರುವ ಎಲ್ಲಾ ವಿಕಲಚೇತನ ಕುಟುಂಬ ಸದಸ್ಯರನ್ನು ಬಹಳಷ್ಟು ಹೊತ್ತು ಭೇಟಿಯಾದ ಸಚಿವರಿಜ್ ಅವರೊಂದಿಗೆ ಹಬ್ಬವನ್ನು ಆಚರಿಸಿದರು. ಅಲ್ಲದೆ, ಅವರೆಲ್ಲರ ಜತೆ ಎಳ್ಳುಬೆಲ್ಲ ಸೇವಿಸಿ ಸಂತಸ ವ್ಯಕ್ತಪಡಿಸಿದರು.

ವಿಕಲಚೇತನ ಉದ್ಯೋಗಿಗಳು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಸತತ 7ನೇ ವರ್ಷದ ಸಂಕ್ರಾಂತಿ ಹಬ್ಬ ಆಚರಿಸಿದರಲ್ಲದೆ, ತಮ್ಮ ತಂದೆ ತಾಯಿ, ಮಕ್ಕಳ ಸಮೇತ ಬಂದು ಸಚಿವರಿಗೆ ಎಳ್ಳುಬೆಲ್ಲ ತಿನಿಸಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಅಷ್ಟು ಕುಟುಂಬಗಳನ್ನು ಕಂಡು ತೀವ್ರ ಭಾವುಕರಾದ ಸಚಿವರು, ವಿಶೇಷವಾಗಿ ಮಕ್ಕಳ ಜತೆ ಬಹಳ ಸಮಯ ಕಳೆದರು. "ನಿಮ್ಮನ್ನು ನೋಡುತ್ತಿದ್ದರೆ ನನ್ನ ಹೃದಯ ತುಂಬಿ ಬರುತ್ತಿದೆ. ದೇವರು ಕೊಟ್ಟ ಸಣ್ಣ ಅವಕಾಶದಲ್ಲಿ ನಿಮಗೆ



ಸಹಾಯ ಮಾಡುವ ಅವಕಾಶ ಸಿಕ್ಕಿತು. ಅದನ್ನೇ ನೀವೆಲ್ಲರೂ ಹೃದಯದಲ್ಲಿ ಇಟ್ಟುಕೊಂಡು ನನ್ನ ಮೇಲೆ ಪ್ರೀತಿ, ವಾತ್ಸಲ್ಯ ತೋರುತ್ತಿರುವುದು ನನ್ನ ಜೀವನಕ್ಕೆ ಸಾರ್ಥಕತೆ ತಂದಿದೆ" ಎಂದು ಸಚಿವರು ಹೇಳಿದರು.

ಸಚಿವರ ಕಣ್ಣಲ್ಲಿ ನೀರು ತುಂಬಿಕೊಂಡಿದ್ದನ್ನು ಕಂಡ ಎಲ್ಲರೂ ಕ್ಷಣಕಾಲ ಸ್ತಬ್ಧರಾದಲ್ಲದೇ, ನಮಗೆ ನಿಮ್ಮ ಆರೋಗ್ಯ ಮುಖ್ಯ. ಸದಾಕಾಲ ನೀವು ಆರೋಗ್ಯವಂತರಾಗಿ ಇರಬೇಕು ಎಂದು ಹಾರೈಸಿದರು.

ನಿಮ್ಮ ಜೀವನ ಎಲ್ಲರಿಗೂ ಮಾದರಿ. ಶ್ರಮ ವಹಿಸಿ ಕೆಲಸ ಮಾಡುತ್ತೀರಿ. ಸರ್ಕಾರ ನೀಡುವ ಸಂಬಳದಿಂದ ಉತ್ತಮ ಬದುಕು ಕಟ್ಟಿಕೊಂಡಿದ್ದೀರಿ. ನಿಮ್ಮ ಜೀವನ, ಬೆಳವಣಿಗೆ ಸಮಾಜಕ್ಕೆ ಮಾದರಿ. ನೀವು, ನಿಮ್ಮ ಕುಟುಂಬಗಳು, ನಿಮ್ಮ ಮಕ್ಕಳು ಇನ್ನೂ ಎತ್ತರದ ಸಾಧನೆ ಮಾಡಬೇಕು ಎಂದು ಸಚಿವರು ವಿಕಲಚೇತನ ಕುಟುಂಬ ಸದಸ್ಯರಿಗೆ ಶುಭ ಹಾರೈಸಿದರು.

**ಹಿನ್ನೆಲೆ ಏನು?:** 2006ರಲ್ಲಿ ಕುಮಾರಸ್ವಾಮಿ ಅವರು ಸಿಎಂ ಆಗಿದ್ದಾಗ ಜನತಾದರ್ಶನ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಅಪಾರ ಪ್ರಮಾಣದ ವಿಕಲಚೇತನರು ಉದ್ಯೋಗ ಅರಸಿ ಮುಖ್ಯಮಂತ್ರಿ ಅವರಲ್ಲಿ ಮನವಿ ಮಾಡಲು ಬರುತ್ತಿದ್ದರು. ವಿಕಲಚೇತನರ ಬವಣೆಯನ್ನು ಕಣ್ಣಾರೆ ಕಂಡ ಅಂದಿನ ಸಿಎಂ ಕುಮಾರಸ್ವಾಮಿ ಅವರು, ಬೆಸ್ಕಾಂ ಸೇರಿ ಕೆಪಿಟಿಸಿಎಲ್ ನ ವಿವಿಧ ವಿಭಾಗಗಳಲ್ಲಿ ಗುತ್ತಿಗೆ ಆಧಾರದ ಮೇಲೆ 600ಕ್ಕೂ ಹೆಚ್ಚು ವಿಕಲಚೇತನರನ್ನು ನೇಮಕ ಮಾಡಿದರು.

ಅದಾದ ನಂತರ 2018ರವರೆಗೂ ಇಷ್ಟು ಉದ್ಯೋಗಿಗಳ ಸೇವೆ ಕಾಯಂ ಆಗಲಿಲ್ಲ. ಅದುವರೆಗೂ ಯಾವುದೇ ಸರ್ಕಾರ ಈ ವಿಕಲಚೇತನರ ಕಷ್ಟಕ್ಕೆ ಸ್ಪಂದಿಸಿರಲಿಲ್ಲ. 2018ರಲ್ಲಿ ಮತ್ತೆ ಸಿಎಂ ಆಗಿಬಂದ ಕುಮಾರಸ್ವಾಮಿ ಅವರು, 2006ರಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲ್ಪಟ್ಟ ಎಲ್ಲ ವಿಕಲಚೇತನ ಉದ್ಯೋಗಿಗಳ ನೇಮಕಾತಿಯನ್ನು ಕಾಯಂ ಮಾಡಿದರು. ಎಸ್‌ಎಸ್‌ಎಲ್ಸಿ ಪಾಸಾಗಿದ್ದ 300, ಪದವಿ ಉತ್ತೀರ್ಣರಾಗಿದ್ದ 300 ವಿಕಲಚೇತನ ಅಭ್ಯರ್ಥಿಗಳಿಗೆ ಇಂಧನ ಇಲಾಖೆಯಲ್ಲಿ ಉದ್ಯೋಗವಕಾಶ ಕಲ್ಪಿಸಿದ್ದರು. 2019 ಜನವರಿ 14ರಂದು ಸಂಕ್ರಾಂತಿ ಹಬ್ಬದ ದಿನವೇ ಹೆಚ್ಡಿಕೆ ಅವರು ಸೇವೆ ಕಾಯಂ ಮಾಡಿದ ಆದೇಶ ಹೊರಡಿಸಿದರು. ಇದು 600ಕ್ಕೂ ಹೆಚ್ಚು ವಿಕಲಚೇತನ ಕುಟುಂಬಗಳಲ್ಲಿ ಸಂಭ್ರಮ ತಂದಿತು.

**ನಿಮ್ಮ ಪ್ರೀತಿಯೇ ಶ್ರೀರಕ್ಷೆ:** ಈ ಸಂದರ್ಭದಲ್ಲಿ ಎಲ್ಲರಿಗೂ ಶುಭ ಕೋರಿದ ಸಚಿವರು; ನಿಮ್ಮ ಪ್ರೀತಿ ವಿಶ್ವಾಸಕ್ಕೆ ನಾನು ಋಣಿಯಾಗಿದ್ದೇನೆ. ನಿಮ್ಮ ಹೃದಯದಲಿ ಸ್ಥಾನ ಕೊಟ್ಟಿದ್ದಕ್ಕೆ ನಾನು ಆಭಾರಿ. ನಿಮ್ಮ ಹಾರೈಕೆ ಪ್ರೀತಿಯೇ ನನಗೆ ಶ್ರೀರಕ್ಷೆ ಎಂದು ಭಾವುಕರಾದರು. ಅವಕಾಶ ಸಿಕ್ಕಿದಾಗ ನನ್ನ ಕೈಲಾದಷ್ಟು ಸಹಾಯ ಮಾಡಿದ್ದೇನೆ. ವಿಕಲಚೇತನರಿಗೆ ಸಾಧ್ಯವಾದಷ್ಟು ನೆರವು ಕೊಟ್ಟಿದ್ದೇನೆ. ಮುಂದೆಯೂ ದೈಹಿಕವಾಗಿ ಶಕ್ತಿ ಇಲ್ಲದ ಯಾರೇ ಇದ್ದರೂ ಅವರಿಗಾಗಿ ನನ್ನ ಹೃದಯ ಮಿಡಿಯುತ್ತದೆ. ಪ್ರಾಮಾಣಿಕವಾಗಿ ಅಂತಹವರ ಒಳಿತಿಗಾಗಿ ಪ್ರಯತ್ನ ಮಾಡುತ್ತೇನೆ ಎಂದರು ಅವರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)